ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ



ವಿಡಂಬಾರಿ ಇನ್ನಿಲ್ಲ

ಸಂಪುಟ 14 | ಸಂಚಿಕೆ 8 | ಫೆಬ್ರವರಿ 17–23, 2020 | ಪುಟ 16 | ರೂ.10/-

Web : www.janashakthi.co.in e-mail : janashakthi2007@gmail.com

ದಿಲ್ಲಿ ಚುನಾವಣೆ: ಬಿಜೆಪಿಗೆ ತೀಕ್ಷ್ಣ ಮುಖಭಂಗ



ಸಿಡಿ ಆಚರಣೆಗೆ ಕುಮ್ಮಕ್ಕು: ಶಾಸಕ ರೇಣುಕಾಚಾರ್ಯ ವಿರುದ್ಧ ಕ್ರಮಕ್ಕೆ ಆಗ್ರಹ





ಕೇರಳ ಬಜೆಟ್ 2020–21 ನವ–ಉದಾರವಾದದ ವಿರುದ್ಧ ಹೋರಾಟದ ಸಾಧನ



ಬೀದರ್‌ನ ಶಾಹೀನ್ ಶಾಲೆಯ ಪ್ರಕರಣ ನ್ಯಾಯ: ಅವರಿಗೊಂದು, ಇವರಿಗೊಂದು?

ಪರಿಶಿಷ್ಟ ಜಾತಿ, ಬುಡಕಟ್ಟು, ಒಬಿಸಿ ಮೀಸಲಾತಿಗಳು ದೇಶಾದ್ಯಂತ ಕಡ್ಡಾಯ-ಸಿಪಿಐ(ಎಂ) ಪೊಲಿಟ್‌ಬ್ಯುರೊ
ಸುಪ್ರಿಂ ಕೋರ್ಟ್ ವ್ಯಾಖ್ಯಾನಕ್ಕೆ ಕಾರಣವಾದ ಲೋಪವನ್ನು ಕೂಡಲೇ ಸರಿಪಡಿಸಲು ಕೇಂದ್ರ ಸರಕಾರಕ್ಕೆ ಆಗ್ರಹ

ಸುಪ್ರಿಂ ಕೋರ್ಟಿನ ಇಬ್ಬರು ನ್ಯಾಯಾಧೀಶರ ಪೀಠವೊಂದು ಕಲಮು 16(4) ಮತ್ತು 16(4-ಎ) ಅವಕಾಶ ಕಲ್ಪಿಸುವ ಅಂಶಗಳಷ್ಟೇ, ಮತ್ತು ಸರಕಾರೀ ಉದ್ಯೋಗಗಳು ಹಾಗೂ ಬಡ್ತಿಗಳಲ್ಲಿ ಮೀಸಲಾತಿಯನ್ನು ಕೇಳುವ ಮೂಲಭೂತ ಹಕ್ಕು ಇಲ್ಲ ಎಂದು ವ್ಯಾಖ್ಯಾನ ನೀಡಿದೆ. ಈ ವ್ಯಾಖ್ಯಾನದಂತೆ ಅದು ಉತ್ತರಾಖಂಡ ಹೈಕೋರ್ಟ್ ಮೀಸಲಾತಿಗಳನ್ನು ನೀಡುವಂತೆ ರಾಜ್ಯ ಸರಕಾರಕ್ಕೆ ನೀಡಿರುವ ಆಜ್ಞೆಯನ್ನು ರದ್ದು ಮಾಡಿದೆ.

ಮೀಸಲಾತಿಗಳು ಮತ್ತು ಬಡ್ತಿಗ್ಳ ಅವಕಾಶ ಒಂದು ಮೂಲಭೂತ ಹಕ್ಕು ಆಗಿಲ್ಲದೇ ಇರಬಹುದು, ಆದರೆ ಇವು ಕಡ್ಡಾಯವಾಗಿರುವ ಸಂವಿಧಾನಿಕ ಅಂಶಗಳು, ಮತ್ತು ಭಾರತಾದ್ಯಂತ ಅನ್ವಯವಾಗತಕ್ಕಂತವು ಎಂದು ಈ ಸುಪ್ರಿಂ ಕೋರ್ಟ್ ವ್ಯಾಖ್ಯಾನದ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಮುಂದುವರೆದು ಅದು ಸಂವಿಧಾನ ಕುರಿತ ಈ ವ್ಯಾಖ್ಯಾನ ದಲಿತ-ವಿರೋಧಿ, ಬುಡಕಟ್ಟು-ವಿರೋಧಿ ಮತ್ತು ಒಬಿಸಿ-ವಿರೋಧಿ ಎಂದು ತಾನು ಪರಿಗಣಿಸುವುದಾಗಿ ಹೇಳಿದೆ. ಇಂತಹ ಒಂದು ವ್ಯಾಖ್ಯಾನಕ್ಕೆ ಕಾರಣವಾಗಿರುವ ಲೋಪವನ್ನು ಸರಿಪಡಿಸಬೇಕಾಗಿದೆ. ಸಂಸತ್ತಿನ ಎರಡೂ ಸದನಗಳಲ್ಲಿ ಶಾಸಕೀಯ ನಿರ್ಣಯಗಳ ಮೂಲಕ ಸಂವಿಧಾನದಲ್ಲಿನ ಈ ಲೋಪವನ್ನು ಕೂಡಲೇ ಸರಿಪಡಿಸಬೇಕು ಎಂದು ಕೇಂದ್ರ ಸರಕಾರವನ್ನು ಪೊಲಿಟ್ ಬ್ಯುರೊ ಆಗ್ರಹಿಸಿದೆ. ಮೀಸಲಾತಿಗಳು ಮತ್ತು ಬಡ್ತಿಗಳ ಅಂಶಗಳು ಭಾರತ ಒಕ್ಕೂಟದ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕಡ್ಡಾಯವಾಗಿವೆ ಎಂದು ತಾನು ಪರಿಗಣಿಸುವುದಾಗಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ದಿಲ್ಲಿಯ "ಸೆಂಟ್ರಲ್ ವಿಸ್ಟ" ಪುನರ್ರಚನೆಯಲ್ಲಿ ಪಾರದರ್ಶಕತೆ ಮತ್ತು ಸಾರ್ವಜನಿಕ ಸಂವಾದ ಅಗತ್ಯ
ಸದ್ಯಕ್ಕೆ ನಿಲ್ಲಿಸಿ, ಮೊದಲಿಗೆ ಸಂಸತ್ತಿನಲ್ಲಿ ಇದನ್ನು ಚರ್ಚಿಸಬೇಕು-ಸಿಪಿಐ(ಎಂ) ಪೊಲಿಟ್‌ಬ್ಯುರೊ

ಬಿಜೆಪಿ ಸರಕಾರ ಪ್ರಸ್ತಾವಿತ ದಿಲ್ಲಿಯ "ಕೇಂದ್ರೀಯ ನೀಳನೋಟ" (ಸೆಂಟ್ರಲ್ ವಿಸ್ಟ) ಪರಿಯೋಜನೆಯ ಮೇಲಿನ ಮುಸುಕನ್ನು ತೆಗೆಯಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಕರೆ ನೀಡಿದೆ. ನಾಗರಿಕರು ಮಾತ್ರವಲ್ಲದೆ, ಇದರಿಂದ ಸಂಸತ್ತು ಅತಿ ಹೆಚ್ಚು ಬಾಧಿತವಾಗುತ್ತದೆ. ಆದ್ದರಿಂದ ಈ ಯೋಜನೆಯ ವಿವರಗಳನ್ನು ಈಗ ನಡೆಯುತ್ತಿರುವ ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಸರಕಾರವು ಚರ್ಚಿಸುವುದು ಅತ್ಯಗತ್ಯವಾಗಿದೆ. ಇಂತಹ ಐತಿಹಾಸಿಕ ಮತ್ತು ಮಹತ್ವದ ಪ್ರಸ್ತಾವವನ್ನು ಆತುರಾತುರದಿಂದ ಕಾರ್ಯಗತ ಮಾಡಬಾರದು ಎಂದು ಪೊಲಿಟ್ ಬ್ಯುರೊ ಹೇಳಿದೆ.

ಈ "ಸೆಂಟ್ರಲ್ ವಿಸ್ಟ"ಕ್ಕೆ ಪರಿಗಣಿಸಿರುವ ಭೂಮಿ ಜನತೆಗೆ ಸೇರಿದ್ದು, ಸರಕಾರ ಅದರ ಸುಫರ್ದುದಾರನಷ್ಟೇ ಎಂಬುದು ಸರಕಾರಕ್ಕೆ ಗೊತ್ತಿರಬೇಕು. ಸುಪ್ರಿಂ ಕೋರ್ಟ್ ಈಗಾಗಲೇ 2 ಜಿ ತರಂಗ ನೀಡಿಕೆ ಮೊಕದ್ದಮೆಯಲ್ಲಿ, ನೈಸರ್ಗಿಕ ಸಂಪನ್ಮೂಲಗಳ ಬಗ್ಗೆ ನಿಖರವಾದ ನಿರೂಪಣೆಯನ್ನು ಮತ್ತು ಸರಕಾರದ ಮಧ್ಯಪ್ರವೇಶದ ಮಿತಿಗಳನ್ನು ಹಾಕಿಕೊಟ್ಟಿದೆ. ಆದ್ದರಿಂದ ಸರಕಾರ ಇದನ್ನು ಏಕಪಕ್ಷೀಯವಾಗಿ ನಿರ್ಧರಿಸಲು ಸಾಧ್ಯವಿಲ್ಲ ಎಂದು ಪೊಲಿಟ್ ಬ್ಯುರೊ ನೆನಪಿಸಿದೆ.

ದಿಲ್ಲಿ ಅಭಿವೃದ್ಧಿ ಪ್ರಾಧಿಕಾರ(ಡಿಡಿಎ) ಫೆಬ್ರುವರಿ 6ಮತ್ತು 7ರಂದು ಎರಡು ದಿನಗಳ ಸಾರ್ವಜನಿಕ ವಿಚಾರಣೆಯನ್ನು ನಡೆಸಿತು. ಅದರಲ್ಲಿ ದೊಡ್ಡ ಸಂಖ್ಯೆಯಲ್ಲಿ ನಗರ ಯೋಜನಾಕಾರರು, ಪರಿಸರತಜ್ಞರು ಮತ್ತು ಸಮಾಜದ ಇತರ ವಿಭಾಗಗಳ ವ್ಯಕ್ತಿಗಳು ಭಾಗವಹಿಸಿದ್ದರು. ಈ "ಸೆಂಟ್ರಲ್ ವಿಸ್ಟ" ಪರಿಯೋಜನೆಯನ್ನು ಒಂದು ಸಂದಿಗ್ಧ ಹಾಗೂ ಗೋಪನೀಯ ರೀತಿಯಲ್ಲಿ ರೂಪಿಸಲಾಗಿದೆ ಎಂಬ ಒಂದು ಸಾರ್ವತ್ರಿಕ ಮತ್ತು ನೈಜ ಆತಂಕ ನಾಗರಿಕರಲ್ಲಿದೆ. ಆದ್ದರಿಂದ ಈ ಪರಿಯೋಜನೆಯನ್ನು ಮುಂದುವರೆಸುವ ಮೊದಲು ಕೆಲವು ಸಂಗತಿಗಳನ್ನು ಸಂಸತ್ತಿಗೆ ಮತ್ತು ಸಾರ್ವಜನಿಕರಿಗೆ ಒದಗಿಸುವುದು ಸರಕಾರದ ಹೊಣೆ. ಈ ಹೊಣೆಗಾರಿಕೆಗಳಲ್ಲಿ, ಈ ಕೆಳಗಿನ ಮಾಹಿತಿಗಳನ್ನು ಸಂಸತ್ತಿಗೆ ಒದಗಿಸುವುದು ಮತ್ತು ಅವನ್ನು ಸಾರ್ವಜನಿಕ ಅವಗಾಹನೆಗೆ ಲಭ್ಯವಾಗುವಂತೆ ಮಾಡುವ ಜವಾಬ್ದಾರಿಯೂ ಸೇರಿದೆ ಎಂದು ಪೊಲಿಟ್‌ಬ್ಯುರೊ ಪಟ್ಟಿ ಮಾಡಿದೆ:

- ಕೇಂದ್ರೀಯ ದಿಲ್ಲಿಯಲ್ಲಿ ಮತ್ತು ಸೆಂಟ್ರಲ್ ವಿಸ್ಟದ ಸಮೀಪದಲ್ಲಿ ಕೆಡವಬೇಕೆಂದಿರುವ ಎಲ್ಲ ಕಟ್ಟಡಗಳ ಪಟ್ಟಿ
- ಕೇಂದ್ರೀಯ ದಿಲ್ಲಿಯಲ್ಲಿ ಮತ್ತು ಸೆಂಟ್ರಲ್ ವಿಸ್ಟದ ಸಮೀಪದಲ್ಲಿ ಕಟ್ಟಲಿರುವ ಹೊಸ ಕಟ್ಟಡಗಳ ಪಟ್ಟಿ
- ಸಮಸ್ತ ಪರಿಯೋಜನೆಯ ಒಟ್ಟು ವೆಚ್ಚ ಮತ್ತು ಇದಕ್ಕಾಗಿ ವರ್ಷವಾರು ಹಣನೀಡಿಕೆ
- ಸೆಂಟ್ರಲ್ ವಿಸ್ಟದ ಪುನರ್ರಚನೆಗೆ ಬೇಕೆಂದಿರುವ ಸಮಯಾವಧಿ.
- ಸೆಂಟ್ರಲ್ ವಿಸ್ಟದ ಪುನರ್ರಚನೆಗೆ ಮಾಸ್ಟರ್‌ಪ್ಲಾನ್‌ನಲ್ಲಿ ಮಾಡಬೇಕಾದ ಬದಲಾವಣೆಗಳ ಪಟ್ಟಿ.
- ಈ ಪ್ರಸ್ತಾವವು ಒಟ್ಟು ಎಷ್ಟು ಎಕರೆ ಪ್ರದೇಶವನ್ನು ತಟ್ಟುತ್ತದೆ?
- ಪ್ರಸ್ತಾವಿತ ಪರಿಯೋಜನೆಗೆ ಒಂದು ಸ್ವತಂತ್ರ ಪ್ರಾಧಿಕಾರದಿಂದ ಪರಿಸರ ಪ್ರಭಾವದ ಅಂದಾಜಿನ ಅಧ್ಯಯನವನ್ನು ನಡೆಸಲಾಗಿದೆಯೇ?

"ಸೆಂಟ್ರಲ್ ವಿಸ್ಟ"ದ ರಚನೆಗೆ ಪ್ರಸ್ತಾವಿಸಿರುವ ಮರು-ಅಭಿವೃದ್ಧಿ ದಿಲ್ಲಿಯ ಈಗಿರುವ ಮಾಸ್ಟರ್ ಪ್ಲಾನ್ ನ್ನು ಕಾನೂನಿನಲ್ಲಿ ಹೇಳಿರುವ ಸೂಕ್ತ ಪ್ರಕ್ರಿಯೆಯನ್ನು ನಡೆಸದೆ ಉಲ್ಲಂಘಿಸುವಂತಿಲ್ಲ. ದಿಲ್ಲಿಯ ಪರಂಪರೆಯ ಪ್ರದೇಶವನ್ನು "ಸೆಂಟ್ರಲ್ ವಿಸ್ಟ"ದ ರಚನೆ ಹೇಗೆ ಪ್ರಭಾವಿಸುತ್ತದೆ ಎಂಬ ಬಗ್ಗೆ ಸಾರ್ವಜನಿಕವಾಗಿ ಯಾವ ಮಾಹಿತಿಯೂ ಲಭ್ಯವಿಲ್ಲ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ, ಸರಕಾರ ಈ ಪರಿಯೋಜನೆಗೆ ಸದ್ಯ ತಡೆ ಹಾಕಿ, ಮೊದಲಿಗೆ ಸಂಸತ್ತಿನಲ್ಲಿ ಇದನ್ನು ಚರ್ಚಿಸಬೇಕು ಎಂದು ಆಗ್ರಹಿಸಿದೆ. ಏಕೆಂದರೆ, ಇದು ದೇಶದ ರಾಜಧಾನಿಯ ವಿಶಿಷ್ಟತೆಯಾದ ಸಂಸದ್ ಭವನದ ಪುನರ್ರಚನೆ, ಪುನರಭಿವೃದ್ಧಿ ಮತ್ತು ವಿಸ್ತರಣೆಗೆ ಸಂಬಂಧಪಟ್ಟಿದೆ.

ಅರವಿಂದ್ ಕೇಜ್ರಿವಾಲ್‌ಗೆ ಪಿಣರಾಯಿ ವಿಜಯನ್ ಅಭಿನಂದನೆ:
ಎಎಪಿ ವಿಜಯ ದೇಶದಲ್ಲಿ ಒಳಗೊಳ್ಳುವ ರಾಜಕೀಯದ ಮುನ್ಸೂಚನೆಯಾಗಲಿ

ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ದಿಲ್ಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್‌ರನ್ನು ಅಭಿನಂದಿಸುತ್ತ ವಿಧಾನಸಭಾ ಚುನಾವಣೆಗಳಲ್ಲಿ ಎಎಪಿ ಯ ವಿಜಯ ಅನುರಣಿಸುತ್ತಿದೆ, ಇದು ದೇಶದಲ್ಲಿ ಎಲ್ಲರನ್ನೂ ಒಳಗೊಳ್ಳುವ ರಾಜಕೀಯದ ಮುನ್ಸೂಚನೆಯಾಗಲಿ ಎಂದು ಹೇಳಿದ್ದಾರೆ.

ಬಿಜೆಪಿಯ ದ್ವೇಷ ಮತ್ತು ಹಿಂಸಾಚಾರದ ರಾಜಕೀಯಕ್ಕೆ ತಕ್ಕ ಪ್ರತ್ಯುತ್ತರ: ಯೆಚುರಿ

ಅರವಿಂದ್ ಕೇಜ್ರಿವಾಲ್, ಆವ್ ಆದ್ಮಿ ಪಾರ್ಟಿಯನ್ನು ಮತ್ತು ಬಿಜೆಪಿಯ ದ್ವೇಷ ಮತ್ತು ಹಿಂಸಾಚಾರದ ರಾಜಕೀಯಕ್ಕೆ ಒಂದು ತಕ್ಕ ಪ್ರತ್ಯುತ್ತರವನ್ನು ನೀಡಿರುವ ದಿಲ್ಲಿಯ ಜನತೆಯನ್ನು ಅಭಿನಂದಿಸುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ "ರಾಷ್ಟ್ರೀಯ ಭದ್ರತೆ ಎಂದರೆ ಜೀವನ ಮತ್ತು ಜೀವನಾಧಾರಗಳನ್ನು ಕೂಡ, ಶಿಕ್ಷಣ ಮತ್ತು ಆರೋಗ್ಯವನ್ನು ಕೂಡ ಭದ್ರಗೊಳಿಸುವುದು ಎಂದರ್ಥ. ದೇಶದಲ್ಲಿ ಒಂದು ಗಂಭೀರ ಆರ್ಥಿಕ ಬಿಕ್ಕಟ್ಟಿನ ಎದುರು,ಉದ್ಯೋಗನಾಶಗಳ ಎದುರು ಮತದಾರರನ್ನು ಜರೆಯುವುದು, ಹೊಡೆದುರುಳಿಸಿ ಎಂದು ಬೆದರಿಸುವುದು ಪ್ರಜಾಪ್ರಭುತ್ವವನ್ನು ಚಿಂದಿಗೊಳಿಸುತ್ತಿರುವುದು ಇವೆಲ್ಲದಕ್ಕೂ ಒಂದು ತಕ್ಕ ಪ್ರತ್ಯುತ್ತರ ಸಿಕ್ಕಿದೆ" ಎಂದು ಟ್ವೀಟ್ ಮಾಡಿದ್ದಾರೆ.

ಮುಂದುವರೆದು ಅವರು "ದಿಲ್ಲಿ ಚುನಾವನೆಗಳು ಸಿ.ಎ.ಎ.-ಎನ್.ಪಿ.ಆರ್.- ಎನ್.ಆರ್.ಸಿ. ವಿರುದ್ಧ ಸಾರ್ವಜನಿಕ ಪ್ರತಿಭಟನೆಗಳ ಮೇಲೆ ಜನಗಳ ತೀರ್ಪು ಎಂದು ಬಿಜೆಪಿ ಗಟ್ಟಿಯಾಗಿ ಹೇಳಿತ್ತು. ಮೋದಿ ಫಲಿತಾಂಶಗಳಿಗೆ ಕಿವಿಗೊಡಬೇಕು ಮತ್ತು ಸಿಎಎ ಯನ್ನು ಮತ್ತು ಎನ್‌ಪಿಆರ್ ಅಧಿಸೂಚನೆಯನ್ನು ಹಿಂತೆಗೆದುಕೊಳ್ಳಬೇಕು" ಎಂದು ಹೇಳಿದ್ದಾರೆ.

ಕಾಶ್ಮೀರವನ್ನು ಒಂದು ಬಹಿರಂಗ ಸೆಂಟ್ರಲ್ ಎಂದೇ ಘೋಷಿಸಿ ಬಿಡಿ – ತರಿಗಾಮಿ



ಕಾಶ್ಮೀರಕ್ಕೆ ವಿದೇಶಿ ರಾಜತಾಂತ್ರಿಕರ ಇನ್ನೊಂದು ತಂಡವನ್ನು ಕಳಿಸಿದ್ದೀರಿ. ಆದರೆ ಅಲ್ಲಿ ಎಲ್ಲ ಹೋಟೇಲುಗಳು, ಗೆಸ್ಟ್ ಹೌಸ್‌ಗಳು ಜೈಲುಗಳಾಗಿ ಪರಿವರ್ತನೆಗೊಂಡಿವೆ. ಇವರೆಲ್ಲಿ ಇರುತ್ತಾರೆ? ಬಹುಶಃ ಇಡೀ ಕಾಶ್ಮೀರವನ್ನೇ ಒಂದು ಸೆಂಟ್ರಲ್ ಜೈಲು ಎಂದು ಘೋಷಿಸಿಬಿಟ್ಟರೆ ಸಮಸ್ಯೆಯೇ ಇಲ್ಲ, ಎಲ್ಲರನ್ನೂ ಸ್ಥಾನಬದ್ಧತೆಯಲ್ಲಿಡಲು ಯಾವುದೇ ಅಡ್ಡಿಯಿರುವುದಿಲ್ಲ- ಇದು ಜಮ್ಮು ಮತ್ತು ಕಾಶ್ಮೀರದ ಹಿರಿಯ ಸಿಪಿಐ(ಎಂ) ನಾಯಕ ಮಹಮ್ಮದ್ ಯುಸುಫ್ ತರಿಗಾಮಿ ಅತ್ಯಂತ ನೋವಿನಿಂದ ಹೇಳಿದ ಮಾತುಗಳು. ಅವರು ಮತ್ತೊಮ್ಮೆ ದಿಲ್ಲಿಗೆ ಬಂದಿದ್ದ ಸಂದರ್ಭದಲ್ಲಿ ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿ ನಿರ್ಬಂಧಗಳನ್ನು ಹೇರಿ ಆರು ತಿಂಗಳು ಮುಗಿದಿರುವ ಸಂದರ್ಭದಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದರು.

ಆರಂಭದಲ್ಲಿ ಮಾತಾಡಿದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ, ಮೊದಲಿಗೆ ದಿಲ್ಲಿಯ ಚುನಾವಣಾ ಫಲಿತಾಂಶಗಳ ಬಗ್ಗೆ ಹರ್ಷ ವ್ಯಕ್ತಪಡಿಸುತ್ತ ಇದಕ್ಕಾಗಿ ದಿಲ್ಲಿಯ ಜನತೆಗೆ ಮತ್ತು ಆಮ್ ಆದ್ಮಿ ಪಕ್ಷಕ್ಕೆ ಅಭಿನಂದನೆಗಳನ್ನು ಸಲ್ಲಿಸಿದರು. ನಂತರ ಜಮ್ಮು ಮತ್ತು ಕಾಶ್ಮೀರದ ಬಗ್ಗೆ ಮಾತಾಡುತ್ತ ಮೂರು ಅಂಶಗಳತ್ತ ಪತ್ರಕರ್ತರ ಗಮನವನ್ನು ಸೆಳೆದರು.

ಮೊದಲನೆಯದಾಗಿ, ನಿರ್ಬಂಧಗಳನ್ನು ಹೇರಿ ಆರು ತಿಂಗಳು ಕಳೆದರೂ, ಅಲ್ಲಿ ಎಲ್ಲವೂ ಚೆನ್ನಾಗಿದೆ ಎಂದು ಸರಕಾರ ಹೇಳುತ್ತಲೇ ಇದ್ದರೂ , ಇನ್ನೂ ಸಂಪರ್ಕ ವ್ಯವಸ್ಥೆಯನ್ನು ಸಾಮಾನ್ಯಗೊಳಿಸಿಲ್ಲ. 2 ಜಿ ಯ ನಿಧಾನಗತಿಯ ಸಂಪರ್ಕ ಕೆಲವೊಮ್ಮೆ ಇರುತ್ತದೆ, ಕೆಲವೊಮ್ಮೆ ಹೊರಟು ಹೋಗುತ್ತದೆ. ಇದು ಈ ರಾಜ್ಯದ ಆರ್ಥಿಕ ವ್ಯವಸ್ಥೆಯ ಮೇಲೆ ಭಾರೀ ದುಷ್ಪರಿಣಾಮವನ್ನು ಬೀರಿದೆ. ಪ್ರವಾಸೋದ್ಯಮ, ಹಣ್ಣುಗಳು ಮತ್ತು ಕೇಸರಿ ಇಲ್ಲಿಯ ಅರ್ಥವ್ಯವಸ್ಥೆಯ ಜೀವನಾಡಿ. ಆದರೆ ಇವು ಮೂರೂ ಇಂಟರ್ನೆಟ್ ಸಂಪರ್ಕವನ್ನೇ ಸಂಪೂರ್ಣವಾಗಿ ಅವಲಂಬಿಸಿವೆ. ಆದ್ದರಿಂದ ಈ ಸಂಪರ್ಕ ನಿರ್ಬಂಧಗಳಿಂದಾಗಿ ಅವೆಲ್ಲ ನೆಲಕಚ್ಚಿವೆ, ಇದನ್ನು ಅವಲಂಬಿಸಿರುವ ಲಕ್ಷಾಂತರ ಜನಗಳ ಬದುಕು ಮೂರಾಬಟ್ಟೆಯಾಗಿದೆ ಎಂದು ಯೆಚುರಿ ಹೇಳಿದರು.

ಎರಡನೆಯದಾಗಿ, ಪರಿಸ್ಥಿತಿ ಸಾಮಾನ್ಯವಾಗಿದೆ ಎಂದು ಬಿಂಬಿಸಲು ಮತ್ತೊಂದು ವಿದೇಶಿ ರಾಜತಾಂತ್ರಿಕರ ತಂಡವನ್ನು ಕಳಿಸಲಾಗಿದೆ. ಆದರೆ ಹಿಂದಿನ ಎರಡು ಇಂತಹ ತಂಡಗಳು ಸಾಧಿಸಿದ್ದೇನು ಎಂದು ತಿಳಿಸಿಲ್ಲ. ಕಂಡಬಂದಿರುವ ಒಂದೇ ಫಲಿತಾಂಶವೆಂದರೆ, ಪ್ರತಿಬಾರಿ ವಿದೇಶಿ ತಂಡ ಹೋದ ನಂತರ 'ಸಾರ್ವಜನಿಕ ಸುರಕ್ಷತೆಯ ಕಾಯ್ದೆ'(ಪಿಎಸ್‌ಎ) ಎಂಬ ಕರಾಳ ಶಾಸನದ ಬಳಕೆ ಮತ್ತಷ್ಟು ಹೆಚ್ಚಿದೆ, ಇತ್ತೀಚೆಗೆ ಇಬ್ಬರು ಮಾಜಿ ಮುಖ್ಯಮಂತ್ರಿಗಳ ಮೇಲೆ ಬಳಸಿದಾಗಲಂತೂ ಹಾಕಿದ ಆಪಾದನೆಗಳು ಹಾಸ್ಯಾಸ್ಪದ ಮಟ್ಟಕ್ಕೆ ಇಳಿದಿವೆ. ಒಮರ್ ಅಬ್ದುಲ್ಲ ಮೇಲಿನ ಒಂದು 'ಆಪಾದನೆ' ಎಂದರೆ ಅವರು ಉಗ್ರವಾದ ತುತ್ತತುದಿಯಲ್ಲಿದ್ದಾಗಲೂ ಜನಗಳು ಮತದಾನಕ್ಕೆ ಹೊರಬರುವಂತೆ ಮಾಡುವ ಸಾಮರ್ಥ್ಯ ತೋರಿದ್ದಾರೆ ಎಂಬುದು! ಮೆಹಬೂಬ ಮುಫ್ತಿಯವರ ಪಕ್ಷದ ಬಣ್ಣ ಹಸಿರಾಗಿರುವುದು ಅವರ ಮೇಲೆ ಪಿಎಸ್‌ಎ ಪ್ರಯೋಗಿಸಲು ಕಾರಣವಂತೆ! ಬಿಜೆಪಿ ಸರಕಾರದ ಇಂತಹ ಹಾಸ್ಯಾಸ್ಪದ ಕ್ರಮಗಳನ್ನು ಗೇಲಿ ಮಾಡುತ್ತ ಯೆಚುರಿಯವರು, ಒಬ್ಬ ಜನಪ್ರಿಯ ಮುಖಂಡನಾಗಿರುವುದು, ಜನಗಳು ಮತದಾನ ಮಾಡಬೇಕು ಎಂದು ಆತ ಹೇಳುವುದೂ ಈ ಸರಕಾರದ ಕಣ್ಣಲ್ಲಿ ಅಪರಾಧವಾಗಿಬಿಟ್ಟಿದೆ ಎಂದರು. ಹಸಿರು ಬಣ್ಣ ಈ ಸರಕಾರಕ್ಕೆ ಸಮಸ್ಯೆಯಾಗಿದ್ದರೆ, ನಮ್ಮ ರಾಷ್ಟ್ರೀಯ ಬಾವುಟದಲ್ಲಿ ಮೂರನೇ ಒಂದು ಭಾಗದಷ್ಟಿರುವ ಹಸಿರು ಬಣ್ಣವನ್ನು ಇವರು ಏನು ಮಾಡಬೇಕೆಂದಿದ್ದಾರೆ, ತೆಗೆದು ಬಿಡುತ್ತಾರೆಯೇ ಎಂದು ಪ್ರಶ್ನಿಸುತ್ತ, ಈ ಸರಕಾರ ತನ್ನೆಲ್ಲ ಮಿತಿಗಳನ್ನೂ ಮೀರಿ ವರ್ತಿಸುತ್ತಿದೆ ಎಂದರು.

ಮೂರನೆಯದಾಗಿ, ಜಮ್ಮು ಮತ್ತು ಲಡಾಖ್‌ನ ಲೇಹ್ ಮತ್ತು ಕಾರ್ಗಿಲ್ ಪ್ರದೇಶಗಳಿಂದ ನಿಯೋಗಗಳು ನನ್ನ ಬಳಿಗೆ ಬರುತ್ತಿವೆ, ಅಲ್ಲಿಯ ಜನಗಳಿಗೆ, ಬುಡಕಟ್ಟುಗಳಿಗೆ ತಮ್ಮ ಅಸ್ಮಿತೆಯ ರಕ್ಷಣೆಯ ಬಗ್ಗೆ ಭಯವುಂಟಾಗಿದೆ. 35ಎ ಕಲಮಿನ ಅಡಿಯಲ್ಲಿ ಇದ್ದ ರಕ್ಷಣೆ ಹೋದ ಮೇಲೆ, ಸರಕಾರ ಕೈಗೊಳ್ಳುತ್ತಿರುವ ಕ್ರಮಗಳು ಅವರಲ್ಲಿ ಭೀತಿ ಹುಟ್ಟಿಸುತ್ತಿವೆ ಎಂದು ಯೆಚುರಿ ಹೇಳಿದರು. 370 ಮತ್ತು 35ಎ ರದ್ಧತಿಯ ಕ್ರಮವನ್ನು ಸುಪ್ರಿಂ ಕೋರ್ಟಿನಲ್ಲಿ ಪ್ರಶ್ನಿಸಲಾಗಿದೆ, ಅದೇಕೋ ನ್ಯಾಯಾಲಯ ಅದರ

ಪುಟ 14 ನೋಡಿ

ಬೀದರ್‌ನ ಶಾಹೀನ್ ಶಾಲೆಯ ಪ್ರಕರಣ ಅತ್ಯಂತ ಕ್ರೂರ ಮತ್ತು ಅಮಾನವೀಯ"

ನ್ಯಾಯ: ಅವರಿಗೊಂದು, ಇವರಿಗೊಂದು?

"ವಿಶ್ಲೇಷಣೆ" ಕೃಷ್ಣ ಪ್ರಸಾದ್

ಹೆಮ್ಮೆಯಿಂದ ಹೇಳುತ್ತಾರೋ ಅಥವಾ ನಾಚಿಕೆಯಿಂದ ಹೇಳುತ್ತಾರೋ ಗೊತ್ತಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರು ಭಾರತ 'ಬುದ್ಧ ಮತ್ತು ಗಾಂಧಿ' ಅವರ ಪವಿತ್ರ ನಾಡು ಎಂದು ಪದೇಪದೇ ನೆನಪಿಸುತ್ತಾರೆ. ಕರ್ನಾಟಕದಲ್ಲಿ ಅವರ ಪಕ್ಷದ ನಾಯಕರು ಮಾತನಾಡುವಾಗಲೆಲ್ಲಾ ಬಸವಣ್ಣ, ವಿವೇಕಾನಂದರ ಹೆಸರು ಪ್ರಸ್ತಾಪಿಸುತ್ತಾರೆ. ಈ ಮಹನೀಯರಿಗೆ 2020ರಲ್ಲಿ ಎಷ್ಟು ಮಹತ್ವ, ಅವರ ಭಾವನೆಗಳಿಗೆ ಎಷ್ಟು ತೂಕ, ಅವರು ಸೂಚಿಸಿದ ಮಾರ್ಗಕ್ಕೆ ಎಷ್ಟು ಮರ್ಯಾದೆ ನೀಡಲಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಬೀದರ್‌ನಿಂದ ಕಳೆದ ವಾರ ಪ್ರಕಟಗೊಂಡ ಎರಡು ಪುಟ್ಟ ಛಾಯಾಚಿತ್ರಗಳನ್ನು ನೋಡಿದರೆ ಸಾಕು.

ಮೊದಲ ಚಿತ್ರದಲ್ಲಿ ಇಬ್ಬರು ಪುಟ್ಟ ಶಾಲಾಬಾಲಕರು ಇದ್ದಾರೆ. ಅವರ ವಯಸ್ಸು 10 ಅಥವಾ 11 ವರ್ಷ ಆಗಿರಬಹುದು. ಇಬ್ಬರು 'ಎಕ್ಸ್‌ಟ್ರಾಲಾರ್ಜ್' ಪೊಲೀಸ್ ಕಾನ್‌ಸ್ಟೆಬಲ್‌ಗಳ ಮುಂದೆ ಕೈಕಟ್ಟಿಕೊಂಡು, ಹೆದರಿಕೊಂಡು ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದಾರೆ. ಇನ್ನೊಬ್ಬ ಕಾನ್‌ಸ್ಟೆಬಲ್ ಈ ದೃಶ್ಯವನ್ನು ವಿಡಿಯೊ ಕ್ಯಾಮೆರಾದಲ್ಲಿ ರೆಕಾರ್ಡ್ ಮಾಡುತ್ತಿದ್ದಾರೆ. ಎರಡನೇ ಚಿತ್ರ ಈ ಹುಡುಗರ ಶಾಲಾ ಕೊಠಡಿಯದು. ಎಲ್ಲಿ ತಮ್ಮ ಪ್ರೀತಿಯ ಮಿಸ್ ನಿಂತು ಪಾಠ ಹೇಳಿರಬಹುದೋ ಅಲ್ಲಿ ಮೀಸೆ ಮಾವಯ್ಯ ನಿಂತು ಮಕ್ಕಳನ್ನು ವಿಚಾರಣೆ ಮಾಡುತ್ತಿದ್ದಾರೆ. ಇಲ್ಲೂ ವಿಡಿಯೊ ಚಿತ್ರೀಕರಣ. ಈ ಎರಡು ಫೋಟೊಗಳನ್ನು ನೋಡಿದಾಗ, ಇದರ ಬಗ್ಗೆ ಕನ್ನಡಿಗರ ಮೌನ, ಮಾಧ್ಯಮಗಳ ಕಾಳಜಿ ನೋಡಿದಾಗ ಕರ್ನಾಟಕದಲ್ಲಿ ಪ್ರಜಾಪ್ರಭುತ್ವ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ.

ಯಾಕೆ ಇಂತಹ ಪೊಲೀಸ್ ಕಸರತ್ತು? ಬೀದರಿನಲ್ಲಿ 30 ವರ್ಷಗಳ ಹಿಂದೆ ಸ್ಥಾಪಿತವಾದ ಪ್ರತಿಷ್ಠಿತ ಶಾಹೀನ್ ಉರ್ದು ಶಾಲೆಯಲ್ಲಿ ಮೂರು ನಿಮಿಷ, ಮೂವತ್ತು ಸೆಕೆಂಡ್‌ಗಳ ಕಿರುನಾಟಕದಲ್ಲಿ ಅಜ್ಜಿ ಮತ್ತು ಮೊಮ್ಮಗಳ ಸಂಭಾಷಣೆಯೊಂದರಲ್ಲಿ ನಾಲ್ಕು– ಐದು ಮತ್ತು ಆರನೇ ತರಗತಿಯ ವಿದ್ಯಾರ್ಥಿಗಳು ಪೌರತ್ವ ತಿದ್ದುಪಡಿ ಕಾಯ್ದೆಯ ಬಗ್ಗೆ ಪ್ರಧಾನಿ ವಿರುದ್ಧ ಆಡಿದ, ಆಡಿರಬಹುದು ಎನ್ನಲಾದ ಒಂದೇ ಒಂದು ವಾಕ್ಯದ ಹಿಂದೆ ಯಾರ ಕೈವಾಡ ಇತ್ತು ಮತ್ತು ಆ ಮಾತು ಏಕೆ ಬಂತು ಎಂಬುದನ್ನು ಪತ್ತೆ ಮಾಡಲು. ಯಾರೇ ಇರಲಿ, ಯಾಕೇ ಇರಲಿ. ಪ್ರಧಾನಿ ಮೋದಿ ಸ್ವತಃ 'ನನ್ನ ನೇತೃತ್ವದ ಸರ್ಕಾರವನ್ನು ಟೀಕಿಸಿ, ಅದರಿಂದ ಪ್ರಜಾಪ್ರಭುತ್ವ ಗಟ್ಟಿ ಆಗುತ್ತದೆ' ಎಂದು ಹಲವು ಬಾರಿ ಹೇಳಿದ್ದಾರೆ. ರಾಜ್ಯ ಸರ್ಕಾರಕ್ಕೆ ಮತ್ತು ಪೊಲೀಸರಿಗೆ ಪ್ರಧಾನಿ ಬಗ್ಗೆ ವಿಶ್ವಾಸವಿಲ್ಲವೋ ಅಥವಾ ಪ್ರಜಾಪ್ರಭುತ್ವದಲ್ಲೇ ವಿಶ್ವಾಸವಿಲ್ಲವೋ?

ಇಷ್ಟು ಕ್ರೂರವಾದ, ಅಮಾನವೀಯ, ಕಾನೂನುಬಾಹಿರವಾದ ಸಂಶೋಧನೆಯ ನಂತರ, ಬುದ್ಧ–ಗಾಂಧಿ– ಬಸವಣ್ಣ– ವಿವೇಕಾನಂದರ ಹೆಸರು ಹೇಳಿ ಮಾರ್ಕೆಟಿಂಗ್ ಮಾಡಿಕೊಳ್ಳುತ್ತಿರುವವರು ಸಾಧಿಸಿರುವುದಾದರೂ ಏನು? ಇಷ್ಟೇ– 26 ವರ್ಷ ವಯಸ್ಸಿನ, ಮನೆ ಕೆಲಸ ಮಾಡಿಕೊಂಡಿರುವ ಬಡ ವಿಧವೆಯೊಬ್ಬರನ್ನು 15 ದಿನಗಳಿಂದ ಜೈಲಿನಲ್ಲಿಟ್ಟು, ಅವರ ಸಂಪಾದನೆಗೆ ಕುತ್ತು ತಂದು, ತನ್ನ 11 ವರ್ಷದ ಮಗಳಿಂದ ದೂರಮಾಡಿರುವುದು. ಅದಲ್ಲದೆ, ಹುಡುಗಿಯು ಕೈಯಲ್ಲಿ ಹಿಡಿದು ತೋರಿಸಿದ ಅಥವಾ ತೋರಿಸಿದಳು ಎನ್ನಲಾದ ಚಪ್ಪಲಿಯನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಹಾಗೆಂದು ವರದಿಯಾಗಿದೆ. ಅವಳ ಪುಟ್ಟ ಕೈಯನ್ನು ಮುಟ್ಟದೆ ಇರುವುದೇ ಅವಳ, ಅವಳ ತಾಯಿಯ ಹಾಗೂ ನಮ್ಮ–ನಿಮ್ಮ ಅದೃಷ್ಟ.

ದಕ್ಷಿಣ ಭಾರತದಲ್ಲಿ ಬಿಜೆಪಿಗೆ ನೆಲೆ ಕಲ್ಪಿಸಿರುವ ಏಕೈಕ ರಾಜ್ಯವೆಂಬುದು ಕರ್ನಾಟಕಕ್ಕೆ ಕೀರ್ತಿಯನ್ನೇನೂ ತಂದಿಲ್ಲ. ಬೀದರ್‌ನಲ್ಲಿ ನಡೆದಿರುವಂತಹ ಘಟನೆಗಳಿಂದ ನಮ್ಮ ರಾಜ್ಯದ ಹೆಸರಿಗೆ ಕೆಸರು ಮೆತ್ತಿದೆ. ರಾಷ್ಟ್ರೀಯ ಮಾಧ್ಯಮಗಳಲ್ಲಿ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಕರ್ನಾಟಕದ ಈ ದುಃಸ್ಥಿತಿಯು ನಗೆಪಾಟಲಿಗೆ ಈಡಾಗಿದೆ. ಮುಖ್ಯಮಂತ್ರಿ ಮತ್ತು ಗೃಹಮಂತ್ರಿ ಇದರ ಬಗ್ಗೆ ಸಹಜವಾಗಿಯೇ ಚಿಂತೆಗೆ ಈಡಾಗಬೇಕು. ಪೊಲೀಸರ ಈ ಪಕ್ಷಪಾತಿ ಕಾರ್ಯಶೈಲಿಯನ್ನು ಕನ್ನಡಿಗರು ಪ್ರಶ್ನಿಸಬೇಕಾಗಿದೆ. ಪೊಲೀಸರು ಈ ರಾಜ್ಯದ ಸೇವಕರೇ ವಿನಾ ಆಡಳಿತದಲ್ಲಿರುವ ಪಕ್ಷದ ಅಥವಾ ಅದರ ಹಿಂದಿರುವ 'ಸಾಂಸ್ಕೃತಿಕ' ಸಂಘಟನೆಗಳ ಸೇವಕರಲ್ಲ.

ಬೀದರ್ ಘಟನೆಯನ್ನು ನಾವು ದೂರದಿಂದ ನೋಡಿದಾಗ ಎದ್ದುಕಾಣುವುದು ಬಿಜೆಪಿ ನೇತೃತ್ವದ ಸರ್ಕಾರದ ಮತ್ತು ಅದರ ಇಲಾಖೆಗಳ ತಾರತಮ್ಯ ಹಾಗೂ ಕರ್ತವ್ಯಲೋಪ. ಒಂದು ಚಿಕ್ಕ ವಿಷಯವನ್ನು ಸ್ಥಳೀಯವಾಗಿ, ಸುಲಭವಾಗಿ, ಸೌಹಾರ್ದದಿಂದ ನಿವಾರಿಸಲು ಪ್ರಯತ್ನಿಸಬಹುದಾಗಿತ್ತು. ಆ ಕೆಲಸದಲ್ಲಿ ಬೀದರಿನ ಪೊಲೀಸರು ಹಾಗೂ ಜಿಲ್ಲೆಯ ಅಧಿಕಾರಿಗಳು ವಿಫಲರಾಗಿದ್ದಾರೆ. ಕಾನೂನು ಗೊತ್ತಿದ್ದೋ ಗೊತ್ತಿಲ್ಲದೆಯೋ ತಮ್ಮ ನಡವಳಿಕೆಯಿಂದ ಒಂದು ಕುಟುಂಬಕ್ಕೆ ಭಾರಿ ಅನ್ಯಾಯ ಮಾಡಿದ್ದಾರೆ, ರಾಜ್ಯಕ್ಕೆ ಕೆಟ್ಟ ಮಾದರಿಯಾಗಿದ್ದಾರೆ, ಕೆಟ್ಟ ಹೆಸರು ತಂದಿದ್ದಾರೆ. ಏಕೆ ಹೀಗಾಯಿತು ಎಂದು ಊಹಿಸಬಹುದಾದರೂ ಮುಂದೆ ಬೇರೆಡೆ ಹೀಗಾಗದಿರಲಿ ಎಂಬ ಕಾರಣಕ್ಕಾದರೂ ಈ ಕುರಿತು ತನಿಖೆಯಾಗಬೇಕು. ಬೀದರ್ ಪ್ರಕರಣದ ಹಿಂದೆ ಕೋಮು ಶಕ್ತಿಗಳ ಕೈವಾಡ ಇದ್ದರೆ ಅದು ಇನ್ನಷ್ಟು ದೌರ್ಭಾಗ್ಯದ ಸಂಗತಿ.

ಒಂದು ಪುಟ್ಟ ವಾಕ್ಯದ ಈ ದೊಡ್ಡ ಪರಿಣಾಮ ನೋಡಿದಾಗ, ಬೀದರಿನ ಚಿಂತನಶೀಲ ಜನರಿಗೆ ಕಾನೂನಿನ ವಿಪರ್ಯಾಸ ಹಾಗೂ ತಮ್ಮ ಸರ್ಕಾರದ ದ್ವಂದ್ವ ನಿಲುವು ಕಾಣುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ಟರ ನೇತೃತ್ವದಲ್ಲಿ ನಡೆಯುವ ಶಾಲೆಯಲ್ಲಿ ಎರಡು ತಿಂಗಳ ಹಿಂದೆ, ಬಾಬರಿ ಮಸೀದಿಯನ್ನು ಹೇಗೆ ಕೆಡವಲಾಯಿತು ಅನ್ನುವ ಬಗ್ಗೆ 800 ಮಕ್ಕಳು 20 ನಿಮಿಷಗಳ ಅವಧಿಯ ನಾಟಕ ಮಾಡಬಹುದಾದರೆ, ಶಾಹೀನ್ ಶಾಲೆಯ ಪುಟ್ಟ ಮಕ್ಕಳು ಪೌರತ್ವ ಕಾಯ್ದೆಯ ಬಗ್ಗೆ ಕಿರುನಾಟಕ ಮಾಡಿದರೆ ಅದು ಯಾವ ದೃಷ್ಟಿಕೋನದಿಂದ, ಯಾವ ಕಾನೂನಿನ ಪ್ರಕಾರ ದೇಶದ್ರೋಹ? ದಕ್ಷಿಣ ಕನ್ನಡ ಜಿಲ್ಲೆಯ ಈ ಪ್ರಕರಣದ ಬಗ್ಗೆ ಎರಡು ತಿಂಗಳಾದರೂ ಪೊಲೀಸರು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಬೀದರಿನಲ್ಲಿ ಯಾಕೆ ಇಷ್ಟು ಅವಸರ? ಅವರಿಗೊಂದು ನ್ಯಾಯ, ಇವರಿಗೊಂದು ನ್ಯಾಯ ಎಂದು ಯಾರಾದರೂ ಭಾವಿಸಿದರೆ, ಅದರಲ್ಲಿ ತಪ್ಪು ಹುಡುಕಲಾಗದು.

ಇದು ಒಂದೇ ಉದಾಹರಣೆ ಆಗಿದ್ದರೆ ಪರವಾಗಿಲ್ಲ. ಆದರೆ, ಕರ್ನಾಟಕದಲ್ಲಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರ ಬಂದ ನಂತರ, ಈ ಬಗೆಯ ಘಟನೆಗಳ ಹಾಗೂ ಪ್ರಚೋದನಾತ್ಮಕ ಹೇಳಿಕೆಗಳ ಸುರಿಮಳೆ ಆಗುತ್ತಿದೆ. ಪೌರತ್ವ ಕಾಯ್ದೆಯನ್ನು ವಿರೋಧಿಸುವವರನ್ನು ಒಬ್ಬ ಸಂಸದ 'ಪಂಚರ್ ಹಾಕುವವರು' ಎಂದು ಕರೆದು ತನ್ನ ಸಂಸ್ಕೃತಿ ತೋರಿಸಿದ್ದಾರೆ. ಶಾಸಕರೊಬ್ಬರು 'ನಾವು 80%, ನೀವು 18%. ನಾವು ನಿಮ್ಮ ಮೇಲೆ ಎಗರಿಬಿದ್ದರೆ ಏನಾಗುತ್ತೆ ಗೊತ್ತಾ?' ಅಂತ ಬೆದರಿಸಿದ್ದಾರೆ. ಎಂ.ಎಂ. ಕಲಬುರ್ಗಿ ಹಾಗೂ ಗೌರಿ ಲಂಕೇಶ್ ಅವರು ತಮ್ಮ ಮನೆ ಬಾಗಿಲಲ್ಲೇ ಗುಂಡೇಟಿಗೆ ಸತ್ತಿರುವಾಗ, ಇನ್ನೊಬ್ಬ ಅವಿವೇಕಿ 'ನಾನು ಗೃಹ ಮಂತ್ರಿ ಆಗಿದ್ದರೆ ಚಿಂತಕರನ್ನು ಕೊಲ್ಲುತ್ತಿದ್ದೆ' ಎಂದು ಹೇಳುತ್ತಾನೆ.

ಪ್ರತಿನಿತ್ಯ ಸುಳ್ಳು ಸುದ್ದಿ ಸೃಷ್ಟಿಸುವುದರಲ್ಲಿ ನಮ್ಮ ರಾಜ್ಯದ್ದು ಎತ್ತಿದ ಕೈ. ಮಂಗಳೂರು ವಿಮಾನ ನಿಲ್ದಾಣದಲ್ಲಿ 'ಬಾಂಬ್' ಇಟ್ಟಿದ್ದು ಅಂತರರಾಷ್ಟ್ರೀಯ ಗ್ಯಾಂಗ್ ಅಂತ ಮಾಧ್ಯಮಗಳು ಬೊಬ್ಬೆ ಹೊಡೆದವು. ಯಾವುದೇ ಪುರಾವೆ ಕೊಡದೆ, ಬೆಂಗಳೂರಿನಲ್ಲಿ ಬಾಂಗ್ಲಾದೇಶದ 3 ಲಕ್ಷ ಅಕ್ರಮ ವಲಸಿಗರು ತುಂಬಿದ್ದಾರೆ ಎಂದು ಪೊಲೀಸ್ ಕಮಿಷನರ್ ಹೇಳಿದ್ದಾರೆ. ಇವೆಲ್ಲವುಗಳೂ ರಾಜ್ಯದ ಸರ್ವರ ಹಿತಾಸಕ್ತಿ ಕಾಪಾಡಬೇಕಾಗಿರುವ ಸರ್ಕಾರಕ್ಕೆ ಸರಿಯೆನಿಸಿದರೆ, ಬೀದರ್ ಮಕ್ಕಳನ್ನು ಕಂಡರೆ ಏಕೆ ಇಷ್ಟು ಭಯ?

ಕರ್ನಾಟಕದ ಜನ ತಾವು ಕಟ್ಟುತ್ತಿರುವ ಕಂದಾಯ, ತೆರಿಗೆಯನ್ನು ಸರ್ಕಾರವು ಯಾವ ಘನ ಕಾರ್ಯಗಳಿಗೆ ಬಳಸುತ್ತಿದೆ, ಗೃಹ ಮತ್ತು ಕಾನೂನು ಇಲಾಖೆ ಅಧಿಕಾರಿಗಳಿಗೆ ಸಂವಿಧಾನದ ಬಗ್ಗೆ ಎಷ್ಟು ಆಳವಾದ ತಿಳಿವಳಿಕೆ ಇದೆ ಅನ್ನುವುದಕ್ಕೆ ಬೀದರ್ ಪ್ರಕರಣ ಕನ್ನಡಿ. ಕರ್ನಾಟಕದ ಜನ ಎಚ್ಚರವಾಗಿ ಇರಬೇಕು. ಇಂದು ಬೀದರ್‌ನಲ್ಲಿ ನಡೆದದ್ದು, ನಾಳೆ ನಿಮ್ಮ ಊರಲ್ಲಿ ಆಗಬಹುದು. ಮಾನವ ಹಕ್ಕುಗಳನ್ನು ಕಾಪಾಡುವುದು ಬರೀ ಬೀದರ್‌ನವರ ಕರ್ತವ್ಯ ಅಲ್ಲ. ನಮ್ಮದೂ ಸಹ.





ಕೃಪೆ: ಪ್ರಜಾವಾಣಿ, 12–02–2020


ಉಡುಪಿ: ಎಂಡೋ ಸಂತ್ರಸ್ತರ, ಅಂಗವಿಕಲರ ಬೇಡಿಕೆ ಈಡೇರಿಸಲು ಆಗ್ರಹಿಸಿ ಡಿ.ಸಿ ಕಚೇರಿ ಮುತ್ತಿಗೆ



ಎಂಡೋ ಸಲ್ಫಾನ್ ಪೀಡಿತರ ಮತ್ತು ಇತರ ಅಂಗವಿಕಲರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ, ಅಂಗವಿಕಲರ ಹಕ್ಕುಗಳ ರಾಷ್ಟ್ರೀಯ ವೇದಿಕೆ(NPRD)ಗೆ ಸಂಯೋಜಿಸಲ್ಪಟ್ಟ ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟ ಉಡುಪಿ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಲಾಯಿತು. ಧರಣಿಯನ್ನುದ್ದೇಶಿಸಿ ಒಕ್ಕೂಟದ ಜಿಲ್ಲಾ ಗೌರವಾಧ್ಯಕ್ಷ ವೆಂಕಟೇಶ ಕೋಣಿ ಮಾತನಾಡಿ, ಜಿಲ್ಲೆಯ ಎಂಡೋ ಸಲ್ಫಾನ್ ಪೀಡಿತರ ಪುನರ್ವಸತಿ ಕೇಂದ್ರ ಹಾಗೂ ವೈದ್ಯಕೀಯ ಆರೈಕೆಯ ಸೌಲಭ್ಯಕ್ಕಾಗಿ ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕಾಗಿ ಬೈಂದೂರಿನ ನಾಡಾ ಗ್ರಾಮ ಪಂಚಾಯತ್ ವ್ಯಾಪ್ತಿಯ, ಸೇನಾಪುರದಲ್ಲಿ ಸರಕಾರದ ವತಿಯಿಂದ 5 ಎಕ್ರೆ ಜಾಗ ಕಾದಿರಿಸಲಾಗಿತ್ತು. ಆದರೆ ಹಲವು ವರ್ಷ ಕಳೆದರೂ ಈ ವರೆಗೆ ಕೇಂದ್ರದ ಕಟ್ಟಡ ಕಾಮಗಾರಿಗೆ ಸರಕಾರ ಅನುದಾನ ನೀಡಿಲ್ಲ. ಆದುದರಿಂದ ಜಿಲ್ಲಾ ಎಂಡೋಸಲ್ಫಾನ್ ಸಮಿತಿಯ ನಿರ್ಣಯದಂತೆ ಶೀಘ್ರವೇ ಕೇಂದ್ರವನ್ನು ಆರಂಭಿಸಬೇಕೆಂದು ಒತ್ತಾಯಿಸಿದರು. ಎಂಡೋಸಲ್ಫಾನ್ ಪೀಡಿತರಿಗೆ ನೀಡುವ ಮಾಸಾಶನವನ್ನು ಕ್ರಮವಾಗಿ 1500 ರೂ. ಗಳಿಂದ 3000 ರೂ. ಹಾಗೂ 3000 ರೂ. ಗಳಿಂದ 6000 ರೂ. ಗೆ ಹೆಚ್ಚಿಸಬೇಕು. ಅಂಗವಿಕಲರಿಗೆ ಅವಶ್ಯವಿರುವ ಸಾಧನ ಸಲಕರಣೆಗಳನ್ನು ಸರಿಯಾದ ಸಮಯದಲ್ಲಿ ಒದಗಿಸಬೇಕು ಎಂದು ಆಗ್ರಹಿಸಿದರು. ಸ್ವ ಉದ್ಯೋಗಕ್ಕಾಗಿ ನೀಡುತ್ತಿರುವ ಆಧಾರ್

ಪುಟ 6 ಕ್ಕೆ

ವಿಡಂಬಾರಿ ಇನ್ನಿಲ್ಲ



ನಾಡಿನ ಹಿರಿಯ ಕವಿ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ಆದ ಖ್ಯಾತ ಚುಟುಕು ಕವಿ ಎಂದೇ ಪ್ರಸಿದ್ಧರಾದ ವಿಡಂಬಾರಿಯವರು ಈಗ ಕಡತೋಕೆಯಲ್ಲಿ ಮಗಳ ಮನೆಯಲ್ಲಿ ನಮ್ಮನ್ನಗಲಿರುವುದು ಅಂತ್ಯಂತ ದುಃಖದ ಸಂಗತಿ. ಇವರು 1935 ಫೆಬ್ರುವರಿ 29 ಜನಿಸಿದವರು. ದೇವದಾಸಿಯ ಮಗನಾಗಿ ಹುಟ್ಟಿ ಈ ಸಮಾಜದ ಬದಲಾವಣೆಗೆ ತನ್ನ ಕೆಲಸ, ಚಿಂತನೆಗಳ ಮೂಲಕ ಕೊನೆಯ ವರೆಗೆ ಶ್ರಮಿಸಿದವರು. ಕಡುಬಡತನದ ಮಧ್ಯೆಯೂ ಮಾನವೀಯ ಮೌಲ್ಯಗಳಿಗಾಗಿ ತುಡಿದವರು. ಸದಾ ಸಮಾಜಮುಖಿ ಚಿಂತನೆ ಮೈಗೂಡಿಸಿಕೊಂಡ ಇವರು ಮೂಢನಂಬಿಕೆ ವಿರುದ್ಧ ಪ್ರಕರವಾಗಿ ಚುಟುಕು ಬರೆಯುತ್ತಿದ್ದರು. ಅಂಚೆ ಪೇದೆಯ ಆತ್ಮಕತೆಯನ್ನೂ ಒಳಗೊಂಡು ಐದಕ್ಕೂ ಹೆಚ್ಚು ಪ್ರಕಟಿತ ಬರಹಗಳನ್ನು ಹೊರತಂದಿದ್ದಾರೆ.

ವಿಡಂಬಾರಿಯವರ ಆಸೆಯಂತೆ ಅವರ ಮರಣದ ನಂತರ ಅವರ ದೇಹವನ್ನು ವೈದ್ಯಕೀಯ ಸಂಶೋಧನೆಯ ಕಾರಣಕ್ಕಾಗಿ ಮೆಡಿಕಲ್ ಕಾಲೇಜಿಗೆ ದಾನ ಮಾಡಲು ಅವರ ಕುಟುಂಬದವರು, ಆಪ್ತರು ನಿರ್ಧರಿಸಿದರು. ಇದು ವಿಡಂಬಾರಿಯವರಿಗೆ ಸಲ್ಲಿಸುವ ನಿಜವಾದ ಗೌರವ, ಪ್ರೀತಿಯಾಗಿರುವುದರಿಂದ ಅವರ ಕುಟುಂಬಕ್ಕೆ ಅಭಿನಂದನೆಗಳು. ಜೀವನದುದ್ದಕ್ಕೂ ಮೌಢ್ಯ, ಕಂದಾಚಾರದ ವಿರುದ್ಧ ಸಿಡಿದೆದ್ದಿದ್ದ ವಿಡಂಬಾರಿಯವರ ದೇಹ ಅವರ ಸಾವಿನ ನಂತರ ಕೂಡ ಒಂದು ಮಹತ್ವದ ಉದ್ದೇಶಕ್ಕೆ ವಿನಿಯೋಗವಾಗುತ್ತಿರುವುದು ನನಗಂತೂ ಹೆಮ್ಮೆಯ ಸಂಗತಿ. ಅವರು ದಾರಿ ನಮಗೆ ದಾರಿದೀಪವಾಗಲಿ.

ಅಮಾಸೆ ಹುಡುಗ!

ಅಮಾಸೆ ಹುಡುಗನ ಬಾಯೊಳಗೆ ಕವಳ
ಮನದಲಿ ತಳಮಳ–ಕಳವಳ
ಮನಸ್ಸು ನಿಗಿನಿಗಿ ಕೆಂಡ
ಮುಖಚರ್ಯೆಯಲಿ ಕುದಿಬಿಂದು
ಹೃದಯದಲಿ ಮಾನವತೆ
ಇದು ವಿಡಂಬಾರಿ ಕವಿತೆ !

ಆಂತರ್ಯದಲಿ ಗುನುಗುನಿಸಿದ, ಹಂಬಲಿಸಿದ,
ಬಯಸಿದ
ಮನುಷ್ಯತ್ವ. . .ಮಾನವತೆ. . .ಬಂಧುತ್ವ
ಜನಮನದಾಳ ದ್ವೇಷದ ಸಿಕ್ಕು ಬಿಡಿಸುತ
ಬೋಧಿಸಿದನೀತ, ಪ್ರೀತಿಯ ಹೂಗಳ
ಅರಳಿಸಿದನೀತ

ಅಕ್ಷರದ ಸಾಂಗತ್ಯ ಇವಗೇಕೆ ಬೇಕು?
ಹೀಗಳೆವರೆನ್ನ ಎನ್ನದೇ, ಬಾಯ್ಬಿಡದೇ
ಬರಸೆಳೆದ ಚಾವಟಿಗೆಯ
ಪಟಾರ್ ಎಂದು ಬೀಸಿದ ಬಿರುಸಿನಲಿ
ಪ್ರಶ್ನಿಸಿದವಗೆ ಬಾಯುತ್ತರ ತಪ್ಪಿ
ಚುಟುಕಿನ ಬಾರೇಟು ಕನ್ನೆತ್ತರು ಗಟ್ಟಿತು

ಅವಮಾನ . . ಅಪಮಾನಗಳ ಮೊಗೆಮೊಗೆದು
ಸೈರಿಸಿದ ಸಂಚಯಿಸಿದ ಜೋಳಿಗೆಯಲಿ,
ಕಂಕುಳ ಪುಸ್ತಕದಲಿ
ಲೇಖನಿಯ ತುದಿ ಮಾತ್ರ ಸವೆಯಲಿಲ್ಲ
ಕಣ್ಣತೇವ ಮಸಿಕುಡಿಕೆ
ಅಕ್ಷಯ ಅಕ್ಷರಕೆ ಸದಾ
ಮುನ್ನುಡಿ ಬರೆಯುತ್ತಲೇ ಹೋದನೀತ!

–ಯಮುನಾ ಗಾಂವ್ಕರ್
(ವಿಡಂಬಾರಿಯವರು ಮುಂಡಗೋಡದಲ್ಲಿ ನಡೆದ ಉಕ ಜಿಲ್ಲಾ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿದಾಗ)

ಉಡುಪಿ: ಸಿಐಟಿಯು ಸುವರ್ಣ ಮಹೋತ್ಸವ ಹಾಗೂ ಕಾರ್ಮಿಕ ಚಳವಳಿಯ 100 ನೇ ವರ್ಷಾಚರಣೆಯ ಸಂಭ್ರಮ

ಕಾರ್ಮಿಕರು ಆರ್ಥಿಕ ಬೇಡಿಕೆ ಮಾತ್ರವಲ್ಲ, ರಾಜಕೀಯ ಬೇಡಿಕೆಗೆ ಜಾಗೃತರಾಗಿ ಹೋರಾಡಬೇಕು–ಡಾ। ಕೆ. ಪ್ರಕಾಶ್



ಬ್ರಿಟೀಷರ ವಿರುದ್ಧ ಹೋರಾಡಿ ಪಡೆದುಕೊಂಡ ಕಾರ್ಮಿಕರ ಪರ ಹಕ್ಕು ಹಾಗೂ ಕಾನೂನುಗಳನ್ನು ಕೇಂದ್ರ ಸರಕಾರ ಒಂದೊಂದನ್ನಾಗಿ ಕಿತ್ತುಕೊಳ್ಳುತ್ತಿರುವುದರಿಂದ ಕಾರ್ಮಿಕರು ಆರ್ಥಿಕ ಬೇಡಿಕೆ ಮಾತ್ರವಲ್ಲ ರಾಜಕೀಯ ಬೇಡಿಕೆಗಳಿಗೆ ಜಾಗ್ರತರಾಗಿ ಹೋರಾಡಬೇಕು ಎಂದು ಸಿಐಟಿಯು ರಾಜ್ಯ ಉಪಾಧ್ಯಕ್ಷ ಡಾ। ಕೆ. ಪ್ರಕಾಶ್ ಹೇಳಿದರು. ಸಿಐಟಿಯು ಸುವರ್ಣ ಮಹೋತ್ಸವ ಹಾಗೂ ಕಾರ್ಮಿಕ ಚಳವಳಿಯ 100 ನೇ ವರ್ಷಾಚರಣೆಯ ಅಂಗವಾಗಿ ಉಡುಪಿ, ಬನ್ನಂಜೆ ಶ್ರೀ ನಾರಾಯಣಗುರು ಸಭಾ ಭವನದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾರ್ಮಿಕ ಚಳವಳಿಗೆ ನೂರು ವರ್ಷ, ದೇಶದಲ್ಲಿ ಕಾರ್ಮಿಕ ಚಳವಳಿಗೆ 100 ವರ್ಷಗಳು ತುಂಬಿದೆ. ಸ್ವಾತಂತ್ರ್ಯ ಹೋರಾಟಗಾರ ಲಾಲಾ ಲಜಪತ್ ರಾಯ್ ಅಧ್ಯಕ್ಷರಾಗಿದ್ದ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೇಸ್ (ಎಐಟಿಯುಸಿ) 1920 ಅಕ್ಟೋಬರ್ ನಲ್ಲಿ ರಚನೆಯಾಗಿತ್ತು. ಅಂದಿನ ಕಾರ್ಮಿಕ ವರ್ಗ ಬ್ರಿಟೀಷರ ವಿರುದ್ಧ ಒಗ್ಗಟ್ಟಿನ ಹೋರಾಟ ನಡೆಸಿದ್ದು, ದಾಖಲೆಗಳಿವೆ. ಬಾಲ ಗಂಗಾಧರ ತಿಲಕರನ್ನು 6 ವರ್ಷಗಳ ಕಾಲ ಜೈಲಿಗೆ ಕಳುಹಿಸಿದಾಗ ಸತತ 6 ದಿನಗಳ ಕಾಲ ಬಾಂಬೆ ಕಾರ್ಮಿಕರು ಮುಷ್ಕರ ನಡೆಸಿದರು. ಅಂತಹ ಸಮರಶೀಲ ಪರಂಪರೆಯನ್ನು ಸ್ವಾತಂತ್ರ್ಯದ ಬಳಿಕ ಮುಖಂಡತ್ವವು ಕೈ ಬಿಟ್ಟಿರಿರುವುದರಿಂದ ಸಿಐಟಿಯು ಅನಿವಾರ್ಯವಾಗಿ ಜನ್ಮ ತಾಳಿತು. ಆದರೆ ಐಕ್ಯತೆ ಮತ್ತು ಹೋರಾಟದ ಘೋಷಣೆ ಮೂಲಕ ಎಲ್ಲಾ ವಿಭಾಗದ ಎಲ್ಲಾ ಕಾರ್ಮಿಕ ಸಂಘಟನೆಗಳ ಕಾರ್ಮಿಕರನ್ನು ಒಂದೇ ವೇದಿಕೆಯಲ್ಲಿ ತರಲು ಪ್ರಯತ್ನಿಸಿದ ಫಲವಾಗಿ ಜನವರಿ 8 ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಜಂಟಿ ಹೋರಾಟಕ್ಕೆ ಅಣಿ ನೆರೆಸುವಲ್ಲಿ ಸಿಐಟಿಯು ಪ್ರಮುಖ ಪಾತ್ರ ವಹಿಸಿದೆ.

ಇದೀಗ ಕಾರ್ಮಿಕರ ಪರ ಕಾನೂನು ಕಸಿದುಕೊಳ್ಳುವ ಮೂಲಕ ಕಾರ್ಮಿಕ ಶಕ್ತಿ ದುರ್ಬಲಗೊಳಿಸುವ ಪ್ರಯತ್ನ ನಡೆಯುತ್ತಿದೆ. ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ಕಾನೂನುಗಳ ವಿರುದ್ಧ ಮಾತನಾಡುವವರನ್ನು ದೇಶ ದ್ರೋಹಿಗಳೆಂದು ಬಿಂಬಿಸಲಾಗುತ್ತಿದೆ. ಕಾರ್ಮಿಕರ ಹಕ್ಕುಗಳನ್ನು ಹತ್ತಿಕ್ಕುವ ಪ್ರಯತ್ನ ನಡೆಸುತ್ತಿದೆ. ಬ್ರಿಟೀಷ್ ಸರಕಾರಕ್ಕೂ ಈಗಿನ ನಮ್ಮ ಸರಕಾರಕ್ಕೂ ವ್ಯತ್ಯಾಸವೇ ಇಲ್ಲ, ಕೇಂದ್ರ ಸರಕಾರದ ಕಾರ್ಮಿಕ ವಿವಾದ ಬಿಲ್ ನಂತೆ ಖಾಯಂ ಕೆಲಸದ ಬದಲು ಗುತ್ತಿಗೆ ಪದ್ಧತಿ, ಬೋನಸ್ಸ್, ಭವಿಷ್ಯನಿಧಿ, ಇಎಸ್ಐ, ಗ್ರ್ಯಾಚುಟಿ ಕೊಡಬೇಕಾಗಿಲ್ಲ. ಈ ಸರಕಾರ ಕನಿಷ್ಠ ವೇತನ ದಿನ ಒಂದರ ಕೇವಲ ರೂ. 178 ನಿಗದಿ ಮಾಡಿರುವ ಕಾರ್ಮಿಕರ ಈ ವೇತನ ಒಪ್ಪಲು ಸಾಧ್ಯವೇ ಇಲ್ಲ. ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಮಾನಾಡಿದರೆ ಬ್ರಿಟೀಷರ ಕಾಲದ ದೇಶ ದ್ರೋಹದ ಕಾಯಿದೆ 124ಎ ಯಂತೆ ದೇಶದ್ರೋಹಿ ಎಂಬುದಾಗಿ ಕಾನೂನು ಕ್ರಮಜರಗಿಸಲಾಗುತ್ತಿದೆ ಎಂದು ಡಾ। ಪ್ರಕಾಶ್ ಆಕ್ರೋಶ ವ್ಯಕ್ತಪಡಿಸಿದರು. ಆದ್ದರಿಂದ ಕಾರ್ಮಿಕರ ಸಂಘಟನೆಯಲ್ಲಿ ತಲಪದೇ ಇರುವವರನ್ನ ತಲಪೋಣ, ಸಿಐಟಿಯು ಉದ್ದೇಶ, ಐಕ್ಯತೆ ಮತ್ತು ಹೋರಾಟವನ್ನು ಬಲಪಡಿಸೋಣ ಎಂದು ಅವರು ಕರೆ ನೀಡಿದರು.

ಆಚರಣಾ ಸಮಿತಿಯ ಅಧ್ಯಕ್ಷ ಪಿ.ವಿಶ್ವನಾಥ ರೈ ಪ್ರಸ್ತಾವನೆಯ ಮಾತನಾಡಿದರು. ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುರೇಶ ಕಲ್ಲಾಗರ್, ವಿಮಾ ನೌಕರರ ಸಂಘದ ಉಡುಪಿ ವಿಭಾಗದ ಪ್ರಧಾನ ಕಾರ್ಯದರ್ಶಿ ಪ್ರಭಾಕರ ಬಿ. ಕುಂದರ್ ಬ್ಯಾಂಕ್ ಎಂಪ್ಲಾಯಿಸ್ ಫೆಡರೇಶನ್ ಆಫ್ ಇಂಡಿಯಾದ ರಾಜ್ಯ ಉಪಾಧ್ಯಕ್ಷ ವಕೀಲ ಬಿ.ಎಂ. ಮಾಧವ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಸಿಐಟಿಯು ಉಡುಪಿ ತಾಲೂಕು ಉಪಾಧ್ಯಕ್ಷ ಶೇಖರ ಬಂಗೇರ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಿಐಟಿಯು ಮುಖಂಡರಾದ ಬಾಲಕೃಷ್ಣಶೆಟ್ಟಿ, ರಾಮಕಾರ್ಕಡ, ಸುಂದರಿ, ಕಮಲ, ಭಾರತಿ ಉಪಸ್ಥಿತರಿದ್ದರು. ಸಭಾ ಕಾರ್ಯಕ್ರಮದ ಮುನ್ನ ಕಾರ್ಮಿಕರ ಬೃಹತ್ ಮೆರವಣಿಗೆ, ಕೆ.ಎಂ. ಮಾರ್ಗ, ಶಿರಿಬೀಡು ದಾರಿಯಾಗಿ ಬನ್ನಂಜೆ ನಾರಾಯಣ ಗುರು ಸಭಾಭವನ ತಲಪಿತು, ಮೆರವಣಿಗೆಯ ಉದ್ದಕ್ಕೂ ಕಾರ್ಮಿಕರು ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಗೆ ಧಿಕ್ಕಾರ ಘೋಷಣೆ ಕೂಗಿದರು. ಜನಪದ ಹಾಡುಗಾರ ನಾದಮಣಿ ನಾಲ್ಕೂರು ಇವರ ಕಂಠಶ್ರೀಯ ಸುಶ್ರಾವ್ಯ ಹಾಡು ಕಾರ್ಯಕ್ರಮಕ್ಕೆ ಹೆಚ್ಚಿನ ಮೆರಗು ನೀಡಿತು. ಕಾರ್ಮಿಕ ಮುಂದಾಳು ವಾಮನ ಪೂಜಾರಿ ಮತ್ತು ಸಂಗಡಿಗರಿಂದ ಮಾಯಾಜಾಲ ಮ್ಯಾಜಿಕ್ ಪ್ರದರ್ಶನ ಸಭಿಕರಿಗೆ ಮನರಂಜನೆ ನೀಡಿತು. ಆಚರಣಾ ಸಮಿತಿ ಕೋಶಾಧಿಕಾರಿ ಶಶಿಧರ ಗೊಲ್ಲ ಎಲ್ಲರನ್ನು ಸ್ವಾಗತಿಸಿದರು. ಕಾರ್ಯದರ್ಶಿ ಕವಿರಾಜ್ ಎಸ್. ಕಾರ್ಯಕ್ರಮ ನಿರೂಪಿಸಿದರು.





ವರದಿ: ವೆಂಕಟೇಶ ಕೋಣಿ



ಮಾಸಾಶನ ಹೆಚ್ಚಳಕ್ಕಾಗಿ ಹಾಗೂ ಬದುಕಿನ ಪ್ರಶ್ನೆಗಳನ್ನಿಟ್ಟುಕೊಂಡು ಅಂಗವಿಕಲರ ಹಾಗೂ ಪಾಲಕರ ಹೋರಾಟ

ಮಾಸಾಶನ ಹೆಚ್ಚಳಕ್ಕಾಗಿ, ಅಂಗವಿಕಲರ ವ್ಯಕ್ತಿಗಳ ಹಕ್ಕುಗಳ ಕಾಯ್ದೆ –2016 ರ ಜಾರಿಗಾಗಿ ಹಾಗೂ ಇತರೆ ಬದುಕಿನ ಪ್ರಶ್ನೆಗಳಿಟ್ಟುಕೊಂಡು ಬೆಂಗಳೂರಿನ ಫ್ರೀಡಂಪಾರ್ಕ್‌ಲ್ಲಿ ರಾಜ್ಯದ ಸರಿಸುಮಾರು 20 ಜಿಲ್ಲೆಗಳಿಂದ ಸಾವಿರಕ್ಕೂ ಹೆಚ್ಚು ಅಂಗವಿಕಲರು ಹಾಗೂ ಪಾಲಕರು ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ರಾಜ್ಯ ಸಮಿತಿ ನಾಯಕತ್ವದಲ್ಲಿ ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ತಮ್ಮ ಹಕ್ಕೊತ್ತಾಯಗಳನ್ನು ಮಂಡಿಸಿದರು.

ಅಂಗವಿಕಲರು ಮನೆಯಿಂದ ಹೊರಗಡೆ ಬರುವುದೇ ಕಷ್ಟಕರದ ಸಂದರ್ಭದಲ್ಲಿ ಸಾಮಾನ್ಯ ಜನರಿಗಿಂತ 10ಪಟ್ಟು ಕಷ್ಟಗಳನ್ನು ತೆಗೆದುಕೊಂಡು ತಮ್ಮ ಕಷ್ಟಗಳನ್ನು ಸರ್ಕಾರಕ್ಕೆ ಹೇಳಿಕೊಳ್ಳಲು ಬೆಂಗಳೂರಿಗೆ ಬಂದಿದ್ದರು. ರಾಜ್ಯದಲ್ಲಿ ಅಂಗವಿಕಲರು ಅತ್ಯಂತ ಕಷ್ಟದ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಅನೇಕ ಅಂಗವಿಕಲರು ಬೀದಿಯಲ್ಲಿ ಬದುಕುತ್ತಿದ್ದಾರೆ. ಭಿಕ್ಷೆ ಬೇಡುತ್ತಿದ್ದಾರೆ. ಈಗಲೂ ಶೇಕಡ 73%ರಷ್ಟು ಅಂಗವಿಕಲ ಮಕ್ಕಳು ಶಾಲೆಗೆ ದಾಖಾಲಾಗುತ್ತಿಲ್ಲ, ಶಿಕ್ಷಣದಿಂದ ವಂಚಿತರಾಗಿರುವವರು ಇತ್ತ ಉದ್ಯೋಗ ಇಲ್ಲದೆ ಇಂದಿಗೂ ಪರಾವಲಂಬಿಗಳಾಗಿ, ಕುಟುಂಬಕ್ಕೆ ಹೊರೆಯಾಗಿ ಜೀವಿಸುತ್ತಿದ್ದಾರೆ. ಸರ್ಕಾರ ನೀಡುವ ಶೇಕಡ 74%ರಷ್ಟು ಕೆಳಗಿರುವ ಅಂಗವಿಕಲತೆಯುಳ್ಳವರಿಗೆ ರೂ.600/–ಗಳು ಹಾಗೂ ಶೇಕಡ 74%ರಷ್ಟು ಮೇಲ್ಪಟ್ಟ ಅಂಗವಿಕಲತೆಯುಳ್ಳವರಿಗೆ ರೂ.1,400/–ಗಳು ಮಾತ್ರ ಸಿಗುತ್ತಿದೆ. ಬಹಳಷ್ಟು ಅಂಗವಿಕಲರು ವೈದ್ಯಕೀಯ ಸಮಸ್ಯೆಗಳಿಂದಾಗಿ ತೊಂದರೆ ಅನುಭವಿಸುತ್ತಿದ್ದಾರೆ. ಈ ಹಿನ್ನಲೆಯಲ್ಲಿ ಸರ್ಕಾರದ ಮಾಸಾಶನದ ನೆರವು ಯಾವುದಕ್ಕೂ ಸಾಕಾಗುತ್ತಿಲ್ಲ. ಇಂದಿನ ಬೆಲೆ ಏರಿಕೆಯ ಸಂದರ್ಭದಲ್ಲಿ ಜೀವನ ವೆಚ್ಚವೂ ಗಣನೀಯವಾಗಿ ಏರಿಕೆಯಾಗಿದೆ. ತಮ್ಮ ದಿನನಿತ್ಯದ ಖರ್ಚುಗಳಿಗೂ ಇನ್ನೊಬ್ಬರಲ್ಲಿ ಕೈ ಚಾಚುವಂತಹ ಪರಿಸ್ಥಿತಿಯಲ್ಲಿದ್ದಾರೆ. ಸರ್ಕಾರ ಅಂಗವಿಕಲರ ಮಾಸಾಶನವನ್ನು ಕನಿಷ್ಠ 5000 ರೂಗಳಿಗೆ ಹೆಚ್ಚಿಸಬೇಕಾಗಿದೆ.

ಇದರೊಟ್ಟಿಗೆ ಅಂಗವಿಕಲರ ಕುಟುಂಬವೂ ಕೂಡ ಸಂಕಷ್ಟಗಳನ್ನು ಅನುಭವಿಸುತ್ತಿದೆ. ತೀವ್ರ ಅಂಗವಿಕಲರ ತಂದೆ ತಾಯಂದಿರಲ್ಲಿ ಅಂಗವಿಕಲರನ್ನು ನೋಡಿಕೊಳ್ಳುವುದಲ್ಲದೇ ಇವರ ಲಾಲನೆ ಪಾಲನೆಯನ್ನು ಮಾಡಬೇಕಾಗುತ್ತದೆ. ಒಬ್ಬರು ಕಾಯಂ ದುಡಿಮೆ ಕಳೆದುಕೊಂಡು ಇವರನ್ನು ಆರೈಕೆ ಮಾಡಬೇಕಾಗುತ್ತದೆ. ಈ ರೀತಿಯ ಕುಟುಂಬಗಳು ರಾಜ್ಯದಲ್ಲಿ ಸಾವಿರಾರು ಇವೆ. ಈ ಕುಟುಂಬಗಳು ವರ್ಷದಲ್ಲಿ ಲಕ್ಷಾಂತರ ರೂಪಾಯಿಗಳ ಆದಾಯದ ದುಡಿಮೆಯನ್ನು ಕಳೆದುಕೊಂಡು ಆರ್ಥಿಕ ಸಂಕಷ್ಟಗಳನ್ನು ಅನುಭವಿಸುತ್ತಿವೆ. ಆದರೆ ಸರ್ಕಾರದಿಂದ ಇಲ್ಲಿಯವರಿಗೆ ಇವರಿಗೆ ಯಾವುದೇ ರೀತಿಯ ಆರ್ಥಿಕ ನೆರವುಗಳಿಲ್ಲ. ತೀವ್ರ ತೊಂದರೆಯುಳ್ಳ ಅಂಗವಿಕಲರನ್ನು ಪಾಲನೆ ಮಾಡುತ್ತಿರುವ ಪೋಷಕರಿಗೆ ಪೋಷಣಾಭತ್ಯೆಯಾಗಿ 3000 ರೂಗಳನ್ನು ನೀಡಬೇಕಿದೆ.

ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಕಾಯ್ದೆ–2016 ಇದು ಅಂಗವಿಕಲರು ಕನಿಷ್ಠ ಘನತೆಯಿಂದ ಜೀವನ ನೆಡೆಸಲು ಅವಕಾಶವನ್ನು ಹೊದಗಿಸುತ್ತದೆ. ಕಾನೂನು ಬಂದು ಮೂರು ವರ್ಷ ಕಳೆದರೂ ಇಲ್ಲಿಯವರಿಗೆ ರಾಜ್ಯದಲ್ಲಿ ಈ ಕಾಯ್ದೆ ಜಾರಿಗೆ ಬಂದಿಲ್ಲ. ಈ ಕಾನೂನು ಜಾರಿಗೆ ಬಡ್ಜೆಟ್‌ಲ್ಲಿ ಹಣ ಒದಗಿಸಿಲ್ಲ. ಕಾಯ್ದೆ ಜಾರಿಗೆ ಸರ್ಕಾರ ನಿರ್ಲಕ್ಷ್ಯಭಾವನೆ ಇದ್ದು ಇದರ ಜಾರಿಗೆ ತರಲು ಮುತುವರ್ಜಿವಹಿಸಬೇಕಾಗಿದೆ.

ಅಂಗವಿಕಲರನ್ನು ಮದುವೆ ಮಾಡಿಕೊಳ್ಳುವವರು ಅತಿ ವಿರಳ. ಬಹಳಷ್ಟು ಮದುವೆಗಳು ಅಂಗವಿಕಲರ ನಡುವೆ ನಡೆಯುವುತ್ತವೆ. ಅಂಗವಿಕಲರ ನಡುವಿನ ಮದುವೆಗಳು ಬಹಳಷ್ಟು ಕಷ್ಟಗಳನ್ನು ತಂದೊಡ್ಡುತ್ತವೆ. ಮದುವೆ ನಂತರದಲ್ಲಿ ಕುಟುಂಬದ ವೆಚ್ಚಗಳು, ಮಕ್ಕಳ ಲಾಲನೆ–ಪಾಲನೆ, ಅವರ ಶಿಕ್ಷಣ, ಆರೋಗ್ಯ ಹೀಗೆ ಬಹಳಷ್ಟು ಕಷ್ಟಗೊಳಗಾಗಿ ಜೀವನವನ್ನು ಕಟ್ಟಿಕೊಳ್ಳಲು ಒದ್ದಾಡುತ್ತಾರೆ. ಇದು ಅಂಗವಿಕಲರನ್ನು ಅಂಗವಿಕಲರಲ್ಲದವರು ಮದುವೆಯಾದಾಗ ಪ್ರೋತ್ಸಾಹ ಧನವಾಗಿ ರೂ.50,000/–ಗಳ ನೆರವು ಸಿಗುತ್ತದೆ. ವಾಸ್ತವದಲ್ಲಿ ಹೆಚ್ಚು ಸಂಕಷ್ಟಗಳನ್ನು ಅನುಭವಿಸುವವರು ಅಂಗವಿಕಲರ ನಡುವೆ ಮದುವೆ ಮಾಡಿಕೊಂಡಿರುವವರು. ಆದರೆ ಇವರಿಗೆ ಯಾವುದೇ ನೆರವುಗಳಿಲ್ಲ. ಆದ್ದರಿಂದ ಅಂಗವಿಕಲರ ನಡುವೆ ಆದ ವಿವಾಹಗಳಿಗೂ ಪ್ರೋತ್ಸಾಹ ಧನ ನೀಡಬೇಕು. ಈಗಾಗಲೇ ಸರ್ಕಾರ ಅಂತರ್ಜಾತಿ ವಿವಾಹವಾದವರಿಗೆ ರೂ.3.00 ಲಕ್ಷ ನೆರವನ್ನು ಘೋಷಿಸಿದೆ. ಅತ್ಯಂತ ಸಂಕಷ್ಟದಲ್ಲಿರುವ ಅಂಗವಿಕಲರಿಗೂ ಈ ನೆರವು ರೂ.3.00 ಲಕ್ಷಕ್ಕೆ ಹೆಚ್ಚಿಸಬೇಕಿದೆ.

ಪುನರ್ವಸತಿ ಕಾರ್ಯಕರ್ತರಿಗೆ ಸರ್ಕಾರ ವೇತನ ಹೆಚ್ಚಿಸಿರುವುದನ್ನು ಅಂಗವಿಕಲರ ಹಾಗೂ ಪಾಲಕರ ಒಕ್ಕೂಟ ಸ್ವಾಗತ ಮಾಡುತ್ತದೆ. ಇವರಿಗೆ ಕನಿಷ್ಠವೇತನ ರೂ.18,000/–ಗಳು ನೀಡಬೇಕು. ಇವರಿಗೆ ಸರ್ಕಾರ ಜಾಬ್‌ಚಾರ್ಟ್ ನಿಗದಿ ಮಾಡಬೇಕು. ಇವರಿಗೆ ಪಂಚಾಯ್ತಿಯಲ್ಲಿ ಕೆಲಸ ಮಾಡಲು ಕುರ್ಚಿ ಮತ್ತು ಮೇಜು ಒದಗಿಸಬೇಕು. ಇವರ ಕೆಲಸದ ಅನುಕೂಲಕ್ಕಾಗಿ ಪ್ರಥಮ ಆಧ್ಯತೆಯ ಮೇಲೆ ಸುಧಾರಿತ ಯಂತ್ರ ಚಾಲಿತ ವಾಹನ ನೀಡಬೇಕು. ಹಾಗಿಯೇ ಎಲ್ಲಾ ಇಲಾಖೆಗಳಲ್ಲಿ ವಾರ್ಷಿಕ ವೆಚ್ಚದಲ್ಲಿ ಅಂಗವಿಕಲರಿಗಾಗಿ ಮೀಸಲಿರಿಸಿದ್ದ ಶೇಕಡ 5%ರ ಹಣವನ್ನು ಅಂಗವಿಕಲರಿಗಾಗಿ ಕಡ್ಡಾಯವಾಗಿ ವೆಚ್ಚ ಮಾಡಬೇಕು. ಶಾಸಕರ, ಸಂಸದರ ಸ್ಥಳೀಯ ಪ್ರದೇಶಾಬಿವೃದ್ಧಿ ಅನುದಾನದಡಿಯಲ್ಲಿ ಅಂಗವಿಕಲರಿಗೆ ಮೀಸಲಿರಿಸಿದ್ದ ಹಣವನ್ನು ಕಡ್ಡಾಯವಾಗಿ ವೆಚ್ಚ ಮಾಡಬೇಕು ಎಂಬುದು ಪ್ರಮುಖ ಬೇಡಿಕೆಗಳಾಗಿವೆ.

ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ರಾಜ್ಯ ಅಧ್ಯಕ್ಷರಾದ ಜಿ.ಎನ್. ನಾಗರಾಜ್ ಮಾತನಾಡಿ ಅಂಗವಿಕಲರಿದ್ದಲ್ಲಿಗೆ ಈ ಎಲ್ಲಾ ಸೌಲಭ್ಯಗಳು ಮುಟ್ಟಬೇಕು. ಆದರೆ ಅಂಗವಿಕಲರು ಬಹಳ ಕಷ್ಟಪಟ್ಟು ಬೆಂಗಳೂರಿಗ ಬಂದು ಸಮಸ್ಯಗಳನ್ನು ಹೇಳಿಕೊಳ್ಳುವಂತಹ ಪರಿಸ್ಥಿತಿಗೆ ನಮ್ಮನ್ನು ತಂದೊಡ್ಡಿವೆ. ನಮ್ಮನ್ನಾಳುವ ಸರ್ಕಾರದ ನೀತಿಗಳು ಈ ರೀತಿಯ ಸಂಕಷ್ಟಗಳನ್ನು ತಂದೊಡ್ಡುತ್ತಿವೆ. ಇದಕ್ಕೆ ಪರಿಹಾರ ಸಿಗುವಂತಾಗಬೇಕಾದರೆ ನಾವು ಇನ್ನಷ್ಟು ದೃಢವಾಗಿ ಹೋರಾಟಕ್ಕೆ ಇಳಿಯಬೇಕಾಗಿದೆ. ಪ್ರತಿ ಪಂಚಾಯ್ತಿಯಲ್ಲೂ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟವನ್ನು ಕಟ್ಟಬೇಕಾಗಿದೆ. ಮುಂದುವರಿದು ಮಾತನಾಡಿ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಕಾಯ್ದೆ –2016 ನಮ್ಮ ಹೋರಾಟದ ಪ್ರತಿಫಲ. ಹಲವು ಬಾರಿ ಹೋರಾಟ ನಡಿಸಿದ್ದಾಗಿದ್ದರಿಂದಲೇ ಈ ಕಾಯ್ದೆ ಜಾರಿಗೆ ಬಂದಿದೆ. ಪ್ರತಿ ತಾಲೂಕು, ಜಿಲ್ಲೆಗಳಲ್ಲಿ ಹೋರಾಟ ತೀವ್ರಗೊಳಿಸುವುದರ ಮುಖಾಂತರ ಈ ಕಾಯ್ದೆಯನ್ನು ಜಾರಿಗೆ ತರುವಂತೆ ನೋಡಿಕೊಳ್ಳಬೇಕಾಗಿದೆ ಎಂದರು.



ಪ್ರಧಾನ ಕಾರ್ಯದರ್ಶಿ ರಂಗಪ್ಪ ದಾಸರ ಮಾತನಾಡಿ ಸಮಾಜದಲ್ಲಿ ಅತ್ಯಂತ ಶೋಷಣೆಗೊಳಗಾಗುತ್ತಿರುವವರು ಅಂಗವಿಕಲರು, ಇವರು ತಮ್ಮದೇ ಆದ ಕಷ್ಟಗಳನ್ನು ಹೊಂದಿರುತ್ತಾರೆ. ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಇದ್ದರೂ ಇವೆರಡರಿಂದ ವಂಚಿತರಾಗಿದ್ದಾರೆ. ಶಿಕ್ಷಣ ಉದ್ಯೋಗ ಇರದೇ ಅಂಗವಿಕಲರ ಘನತೆಯ ಜೀವನ ಸಾಧ್ಯವಿಲ್ಲ. ಸರ್ಕಾರ ಈ ಕುರಿತಂತೆ ವಿಶೇಷ ಕಾಳಜಿ ವಹಿಸಿದಾಗ ಮಾತ್ರ ಅಂಗವಿಕಲರ ಘನತೆಯ ಜೀವನ ಸಾಧ್ಯ ಎಂದರು.

ಸಭೆಯನ್ನು ರಾಜ್ಯದ ಪದಾದಿಕಾರಿಗಳಾದ ಹೆಬ್ಬಾರ್, ಜಿ.ಎನ್. ಯಶಸ್ವಿ, ಅರ್ಪುದ ರಾಜನ್, ಎಸ್. ವೆಂಕಟೇಶ್. ಕರಿಯಪ್ಪ ಅಚ್ಚೊಳ್ಳಿ ಮತ್ತು ಮುಖಂಡರಾದ ಮಲ್ಲಿಕಾರ್ಜುನ ಉಮಾರಾಣಿ, ಕೆಜಿ. ಸುಬ್ರಮಣ್ಯ, ಮುಂತಾದವರು ಮಾತನಾಡಿದರು.

ಪ್ರತಿಭಟನಾ ಸ್ಥಳಕ್ಕೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ರಾಕೇಶ್‌ಸಿಂಗ್, ಅಂಗವಿಕಲರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ನಿರ್ದೇಶಕರಾದ ಶ್ರೀಮತಿ ಲೀಲಾವತಿ ಬೇಟಿ ನೀಡಿ ಅಂಗವಿಕಲರ ಹಾಗೂ ಪಾಲಕರ ಸಮಸ್ಯಗಳನ್ನು ಆಲಿಸಿದರು. ಇದೇ ಸಂದರ್ಭದಲ್ಲಿ ಅಂಗವಿಕಲರ ಹಾಗೂ ಪಾಲಕರ ಹಕ್ಕೊತ್ತಾಯ ಪತ್ರವನ್ನು ಓದಿ ಸಲ್ಲಿಸಲಾಯಿತು. ಸಂಜೆ 4ಗಂಟೆಗೆ ಅಪರ ಮುಖ್ಯ ಕಾರ್ಯದರ್ಶಿಗಳ ಕಚೇರಿಯಲ್ಲಿ ಸಂಘಟನೆಯ ಮುಖಂಡರ ನಿಯೋಗದ ಸಭೆಯನ್ನು ಏರ್ಪಡಿಸಲಾಗಿತ್ತು. ಅಂಗವಿಕಲರ ಬೇಡಿಕೆಗಳ ಕುರಿತು ಸವಿಸ್ತಾರವಾಗಿ ಮಾತನಾಡಲಾಯಿತು. ಭರವಸೆಗಳನ್ನು ನೀಡಿದ್ದಾರೆ. ರಾಜ್ಯ ಸರ್ಕಾರ ಹಣಕಾಸು ಬಿಕ್ಕಟ್ಟಿನಲ್ಲಿದೆ ಎಂಬುದು ನಮ್ಮ ಮುಖಂಡರ ಗಮನದಲ್ಲಿಯೂ ಇದೆ. ಹೋರಾಟ ಮುಂದುವರಿಸುವ ದೃಢ ಹೆಜ್ಜೆ ಇಡಬೇಕಾಗಿದೆ.

ಹಕ್ಕೊತ್ತಾಯಗಳು :

1. ಶೇಕಡ 74%ವರಗಿನ ಅಂಗವೈಕಲ್ಯ ಹೊಂದಿರುವವರಿಗೆ ಮಾಸಿಕ ರೂ.3,000/–ಗಳನ್ನು ಮತ್ತು ಅದಕ್ಕಿಂತ ಹೆಚ್ಚಿನದಕ್ಕೆ ಮಾಸಿಕ ರೂ.5,000/–ಗಳನ್ನು ಜೀವನ ಭತ್ಯೆಯಾಗಿ ನೀಡಬೇಕು.
2. ಅಂಗವಿಕಲರ ಹಕ್ಕುಗಳ ಕಾಯ್ದೆ–2016ರನ್ನು ಸಮರ್ಪಕವಾಗಿ ಜಾರಿಗೆ ತರಬೇಕು. ಈಗಾಗಲೇ ನಿಯಮಗಳ ಪ್ರಕ್ರಿಯೆ ಮುಗಿದಿದ್ದು ಕೂಡಲೇ ಅನುಷ್ಠಾನ ಮಾಡಬೇಕು.
3. ತೀವ್ರ ಅಂಗವಿಕಲತೆಯುಳ್ಳವರನ್ನು ನೋಡಿಕೊಳ್ಳಲು ಹಾರೈಕೆದಾರರಿಗೆ ಅಂಗವಿಕಲರ ಪೋಷಣೆ ಭತ್ಯೆಯಾಗಿ ಮಾಸಿಕ ರೂ.3,000/–ಗಳನ್ನು ನೀಡಬೇಕು.
4. ಗ್ರಾಮೀಣ ಮತ್ತು ನಗರ ಅಂಗವಿಕಲರ ಪುನರ್ವಸತಿ ಕಾರ್ಯಕರ್ತರಿಗೆ ಕನಿಷ್ಠವೇತನ ನೀಡಬೇಕು. ಇವರಿಗೆ ಜಾಬ್‌ಚಾರ್ಟ್ ನಿಗದಿ ಮಾಡಬೇಕು. ಪಂಚಾಯ್ತಿಗಳಲ್ಲಿ ಇವರಿಗೆ ಮೇಜು ಮತ್ತು ಕುರ್ಚಿ ಒದಗಿಸಬೇಕು. ಇವರು ಓಡಾಡಲು ಅನುಕೂಲವಾಗಲು ಪ್ರಥಮ ಆಧ್ಯತೆಯ ಮೇರಿಗೆ ಸುಧಾರಿತ ಯಂತ್ರ ಚಾಲಿತ ವಾಹನ ನೀಡಬೇಕು.
5. ಯು.ಡಿ.ಐ.ಡಿ. (ಸಾರ್ವತಿಕ ಅಂಗವಿಕಲರ ಗುರುತಿನ ಚೀಟಿ) ಪ್ರಮಾಣೀಕರಿಸುವ ಪ್ರಕ್ರಿಯೆಯನ್ನು ವೇಗಗೊಳಿಸಿ, ವಿಳಂಬಕ್ಕೆ ಕಾರಣವಾಗುವ ಲೋಪ–ದೋಷಗಳನ್ನು ಸರಿಪಡಿಸಬೇಕು.
6. ಅಂಗವಿಕಲ ಮಹಿಳೆಯರಿಗೆ ಜೀವನೋಪಾಯ ಮತ್ತು ಮಕ್ಕಳ ಪಾಲನೆ ಮಾಡಲು ಅಗತ್ಯ ಬೆಂಬಲ ನೀಡುವ ಯೋಜನೆ ರೂಪಿಸಿ. ಅಂಗವಿಕಲ ಮಹಿಳೆಯರ ಮೇಲೆ ಹಿಂಸಾಚಾರ, ದೌರ್ಜನ್ಯ ನಿಲ್ಲಿಸಿ, ಸಮಾನತೆಯನ್ನು ಉತ್ತೇಜಿಸಿ. ಅಂಗವಿಕಲ ಮಹಿಳೆಯರಿಗೆ ಮತ್ತು ಹುಡುಗಿಯರಿಗೆ ನಿಶೇಷ ಅವಕಾಶದ ನಿಯಮಗಳನ್ನು ರೂಪಿಸಿ.

ಪುಟ 10 ಕ್ಕೆ

ಭಾರತೀಯ ಪ್ರಜೆಗಳ ಮೇಲೆ ಆಗುತ್ತಿರುವ ಎಲ್ಲಾ ಬಗೆಯ ಹಿಂಸೆಗಳು ಕಳವಳವುಂಟು ಮಾಡುತ್ತಿವೆ. ಮೊದಲನೇಯದಾಗಿ ಸಾರ್ವಜನಿಕ ವಲಯದಲ್ಲಿ ಆಗುತ್ತಿರುವ ಶಾಬ್ದಿಕ ಹಿಂಸೆ, ಬೈಗುಳ, ಬೆದರಿಕೆ, ಅವಮಾನಕರವಾದ ಪದಗಳ ಬಳಕೆ. ಮಾತ್ರವಲ್ಲ, ನೇರವಾಗಿ ಹೊಡೆಯುವ, ಕೊಲ್ಲುವ ಬೆದರಿಕೆಗಳು. ಎರಡನೇ ಬಗೆಯ ಹಿಂಸೆಯೆಂದರೆ ವಿನಾಕಾರಣ ದೇಶದ್ರೋಹದ ಕೇಸುಗಳನ್ನು ಹಾಕುವುದು ಮತ್ತು ಪೋಲೀಸರು ಹಾಗೂ ಕಾನೂನಿನ ಮೂಲಕ ಕಿರುಕುಳಕೊಡುವುದು. ಮೂರನೇಯ ಮತ್ತು ಅತ್ಯಂತ ಮಾರಕವಾದ ಹಿಂಸೆಯೆಂದರೆ ಕಾನೂನಿನ ಅಪವ್ಯಾಖ್ಯಾನ.
ಪ್ರಜಾಪ್ರಭುತ್ವವು ಈಗ ದುರ್ಬಲವಾಗಿ, ಫ್ಯಾಸಿಸಂ ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ಅನೈತಿಕವಾಗಿ ಆಕ್ರಮಿಸಿಕೊಂಡಿದೆ. ಹೀಗಾಗಿ ವಿಮರ್ಶೆ, ಪ್ರತಿರೋಧ, ಪ್ರತಿಭಟನೆಗಳು ದೇಶದ್ರೋಹವಾಗಿ ಭಾಷಾಂತರಗೊಂಡಿವೆ. ಪ್ರಜಾಪ್ರಭುತ್ವದ ಜೀವಾಳವೆಂದರೆ ಅಹಿಂಸೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ವರ್ಣಿಸಿದಂತೆ ಪ್ರಜಾಪ್ರಭುತ್ವವೆಂದರೆ ಯಾವುದೇ ರಕ್ತಪಾತವಿಲ್ಲದೆ ಬಹುಮುಖ್ಯವಾದ, ಆಳವಾದ ಬದಲಾವಣೆಗಳನ್ನು ತರುವ ವ್ಯವಸ್ಥೆಯಾಗಿದೆ. ಎಲ್ಲಾ ರಾಜಕೀಯ ಸ್ಥಿತಿಯಲ್ಲಿಯೂ ಒಂದು ಲಕ್ಷ್ಮಣ ರೇಖೆ ಇರುತ್ತದೆ. ಅದನ್ನು ದಾಟಿದರೆ ಭವಿಷ್ಯದಲ್ಲಿ ಏನಾಗಬಹುದೆಂದು ಯಾರು ಹೇಳಲಾಗದು.

ಪ್ರಜಾಪ್ರಭುತ್ವದೊಳಗೆ ಹಿಂಸೆಯ ಪತಿಷ್ಠಾಪನೆ

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

ಇತ್ತೀಚಿನ ಕರಾಳ ದಿನಗಳಲ್ಲಿ ಭಾರತೀಯ ಪ್ರಜೆಗಳ ಮೇಲೆ ಆಗುತ್ತಿರುವ ಎಲ್ಲಾ ಬಗೆಯ ಹಿಂಸೆಗಳು ಕಳವಳವುಂಟು ಮಾಡುತ್ತಿವೆ. ಮೊದಲನೇಯದಾಗಿ ಸಾರ್ವಜನಿಕ ವಲಯದಲ್ಲಿ ಆಗುತ್ತಿರುವ ಶಾಬ್ದಿಕ ಹಿಂಸೆ, ಬೈಗುಳ, ಬೆದರಿಕೆ, ಅವಮಾನಕರವಾದ ಪದಗಳ ಬಳಕೆ. ಮಾತ್ರವಲ್ಲ, ನೇರವಾಗಿ ಹೊಡೆಯುವ, ಕೊಲ್ಲುವ ಬೆದರಿಕೆಗಳು. ಇದನ್ನು ಮಾಡುತ್ತಿರುವವರು ಬಿ.ಜೆ.ಪಿ ಹಾಗೂ ಸಂಘ ಪರಿವಾರದವರು. ಇವರಲ್ಲಿ ಕೇಂದ್ರ ಮಂತ್ರಿಗಳು, ಜವಾಬ್ದಾರಿ ಸ್ಥಾನದಲ್ಲಿರುವ ಸಂಸತ್ ಸದಸ್ಯರು, ಶಾಸಕರು ಇವರೆಲ್ಲ ಸೇರಿದ್ದಾರೆ. ಇದರ ಪರಾಕಾಷ್ಠೆಯೆಂದರೆ ಕೇಂದ್ರಮಂತ್ರಿ ಅನುರಾಗ್ ಠಾಕೂರ್ ಅವರು ಸಿಎಎ ವಿರುದ್ಧ ಪ್ರತಿಭಟನೆ ಮಾಡುತ್ತಿರುವವರ ಮೇಲೆ ಗುಂಡು ಹಾರಿಸಿ ಎಂದು ನೇರವಾಗಿ ಆಹ್ವಾನ ನೀಡಿದುದು, ಕರ್ನಾಟಕದ ಶಾಸಕರಾದ ಸೋಮಶೇಖರ ರೆಡ್ಡಿ ಅವರು ಶಿವಾಜಿಯ ಹಾಗೆ ಎಲ್ಲಾ ಹಿಂದೂಗಳು ಕೈಯಲ್ಲಿ ಖಡ್ಗ ಹಿಡಿಯುವುದರ ಪರಿಣಾಮಗಳ ಬಗ್ಗೆ ಎಚ್ಚರಿಸಿದ್ದರೆ ಅನೇಕರು ಕೊಲ್ಲುವ ಬೆದರಿಕೆಯನ್ನು ಹಾಕಿದ್ದಾರೆ.

ಎರಡನೇ ಬಗೆಯ ಹಿಂಸೆಯೆಂದರೆ ವಿನಾಕಾರಣ ದೇಶದ್ರೋಹದ ಕೇಸುಗಳನ್ನು ಹಾಕುವುದು ಮತ್ತು ಪೋಲೀಸರು ಹಾಗೂ ಕಾನೂನಿನ ಮೂಲಕ ಕಿರುಕುಳಕೊಡುವುದು. ಇದರಲ್ಲಿ ಕರ್ನಾಟಕದಂಥ "ನಾಗರೀಕ" ರಾಜ್ಯದ ಪೋಲೀಸರು ಉತ್ತರ ಪ್ರದೇಶ ಹಾಗೂ ದೆಹಲಿಯ ಪೋಲೀಸರಿಗಿಂತ ತಾವೇನು ಕಡಿಮೆ ಇಲ್ಲವೆಂದು ತೋರಿಸುತ್ತಿದ್ದಾರೆ. ಮಂಗಳೂರಿನಲ್ಲಿ ಅನಿವಾರ್ಯತೆ ಇಲ್ಲದಿದ್ದರೂ ಮಾಡಿದ ಗೋಲೀಬಾರು, ಬೆಂಗಳೂರಿನಲ್ಲಿ ಕೆಲಸಕ್ಕಾಗಿ ಗುಳೆಬಂದ ಕಾರ್ಮಿಕರ ಗುಡಿಸಲುಗಳನ್ನು ನೆಲಸಮ ಮಾಡಿದ್ದು ಮತ್ತು ಶಾಲೆಯಲ್ಲಿ ಆಡಿದ ನಾಟಕವೊಂದರಲ್ಲಿ ಪ್ರಧಾನ ಮಂತ್ರಿಯವರಿಗೆ ಅವಮಾನಮಾಡುವ ಸಂಭಾಷಣೆ ಇದೆಯೆಂದು ಮಗುವಿನ ತಾಯಿಯ ಮೇಲೆ ದೇಶದ್ರೋಹದ ಕೆಸನ್ನು ಹಾಕಿದ್ದು, ಮೋದಿ ವಿರುದ್ಧವೆನ್ನಲಾದ ಪದ್ಯವನ್ನು ಓದಿದ್ದ ಕವಿಯ ಮೇಲೆ ಕೇಸು ಹಾಕಿದ್ದು – ಹೀಗೆ ದಿನ ದಿನಕ್ಕೆ ಪಟ್ಟಿ ಬೆಳೆಯುತ್ತಿದೆ. ಇದರಲ್ಲಿ ಎದ್ದು ಕಾಣುವ ಅಂಶಗಳೆಂದರೆ ಮೊದಲನೇಯದಾಗಿ ಪ್ರತಿಯೊಂದು ಘಟನೆಯಲ್ಲಿ ಬಲಪಂಥೀಯರೊಬ್ಬರು ದೂರು ಕೊಡುತ್ತಾರೆ ಅಥವಾ ಸಾಮಾಜಿಕ ಮಾಧ್ಯಮದಲ್ಲಿ ಸಂದೇಶ ಹಾಕುತ್ತಾರೆ. ತಕ್ಷಣವೇ ಪೋಲೀಸರು ಅದರಲ್ಲೂ ಕೆಲವರು ಅಧಿಕಾರಿಗಳು ಅದನ್ನು ಶಿರಸಾವಹಿಸಿ ಕಾರ್ಯಾಚರಣೆಗೆ ತೊಡಗುತ್ತಾರೆ. ಇದಕ್ಕೆ ಒಂದು ವಿವರಣೆಯೆಂದರೆ ಇವರು ಬೋಗಸ್ ಐಪಿಎಸ್ ಅರ್ಹತೆಯನ್ನು ಮೋಸದಿಂದ ಪಡೆದಿದ್ದಾರೆ. ಏಕೆಂದರೆ ಕಾನೂನಿನ ಪ್ರಾಥಮಿಕ ಜ್ಞಾನವಿರುವ ಯಾವ ವ್ಯಕ್ತಿಯೂ ಕೇವಲ ಇಂಥ ದೂರುಗಳ ಆಧಾರದ ಮೇಲೆ ಕಾರ್ಯಾಚರಣೆಗೆ ತೊಡಗುವುದಿಲ್ಲ. ಇನ್ನೊಂದು ವಿವರಣೆಯೆಂದರೆ ತಮ್ಮ ರಾಜಕೀಯ ಬಾಸ್ ಗಳನ್ನು ಓಲೈಸಲು ಹೀಗೆ ಮಾಡುತ್ತಾರೆ. ಅಂದರೆ ತಮ್ಮ ವೃತ್ತಿಯ ನೈತಿಕತೆಗೆ ಯಾವುದೇ ಬದ್ಧತೆ ಇಲ್ಲದ ಭ್ರಷ್ಟರು ಈ ಅಧಿಕಾರಿಗಳು.

ಮೂರನೇಯ ಮತ್ತು ಅತ್ಯಂತ ಮಾರಕವಾದ ಹಿಂಸೆಯೆಂದರೆ ಕಾನೂನಿನ ಅಪವ್ಯಾಖ್ಯಾನ, ಹತ್ತಾರು ಬಾರಿ ಭಾರತದ ಅತ್ಯುನ್ನತ ನ್ಯಾಯಾಲಯವು ದೇಶದ್ರೋಹ ಕಾನೂನಿನ ಬಗ್ಗೆ (Sedition Law) ವ್ಯಾಖ್ಯಾನವನ್ನು ವಿವರಣೆಯನ್ನು ನೀಡಿದೆ. ಕೇವಲ ಪ್ರತಿಭಟನೆ ಅಥವಾ ವಿರೋಧಿ ಹೇಳಿಕೆಯನ್ನು ದೇಶದ್ರೋಹವೆಂದು ಪರಿಗಣಿಸಲಾರದು ಎಂದು ಬಹಳ ಖಚಿತವಾಗಿ ಹೇಳಿದೆ. ಇಷ್ಟಾದರೂ ನಮ್ಮ ಪೋಲೀಸರು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಮೀರಿ ದೇಶದ್ರೋಹದ ಕೇಸುಗಳನ್ನು ಹಾಕುತ್ತಿದ್ದಾರೆ. ಕಾರಣವೆಂದರೆ ಬಿಜೆಪಿಯ ಮಂತ್ರಿಗಳು, ಧುರೀಣರು ಮತ್ತು ಸಂಸದ್ ಸದಸ್ಯರು ನಿರ್ಭಿಡೆಯಾಗಿ ವಿಶೇಷವಾಗಿ ಒಂದು ಸಮುದಾಯವನ್ನು ದೇಶದ್ರೋಹಿಯೆಂದು ಕರೆಯುತ್ತಿದ್ದಾರೆ. ಹೀಗೆ ಮಾಡಲು ಅವರಿಗೆ ದೇಶದ ಅತ್ಯುನ್ನತ ಪದವಿ ಹೊಂದಿರುವವರಿಂದ ಆದೇಶವಿದೆಯೆನ್ನುವುದರ ಬಗ್ಗೆ ಸಂಶಯವೇ ಇಲ್ಲ. ಶಾಹೀನ್‌ಬಾಗ್‌ದ ಪ್ರತಿಭಟನಾಕಾರರ ಹಿಂದೆ ಏನೋ ಒಳಸಂಚಿದೆಯೆಂದು ಸ್ವತಃ ಪ್ರಧಾನ ಮಂತ್ರಿಗಳೇ ಹೇಳಿದ್ದಾರೆ. ಹೀಗಾಗಿ ಈಗ ತಾಂಡವವಾಡುತ್ತಿರುವುದು ದ್ವೇಷ ಹಾಗೂ ಕೋಮುವಾದಿ ಧ್ರುವೀಕರಣದ ಅಪಾಯಕಾರಿಯಾದ ವಾತಾವರಣ. ಜಾಮಿಯ ಮಿಲಿಯ ಮತ್ತು ಜೆ.ಎನ್.ಯು ವಿದ್ಯಾರ್ಥಿಗಳ ಮೇಲೆ ನಡೆದ ಹಲ್ಲೆಗಳು, ಪೂರ್ವನಿಯೋಜಿತವಾದ ಹಲ್ಲೆಗಳು. ಈ ಹಲ್ಲೆಗಳಲ್ಲಿ ಭಾಗವಹಿಸಿದ್ದೇವೆ ಎಂದು ತಾನೇ ಹೇಳಿಕೊಂಡ ವಿದ್ಯಾರ್ಥಿಸಂಘಟನೆಯ ಸಮ್ಮೇಳನದಲ್ಲಿ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು ಮಂಗಳೂರಿನಲ್ಲಿ ಭಾಗವಹಿಸುತ್ತಾರೆಂದು ಪತ್ರಿಕಾ ಪ್ರಕಟಣೆಯೊಂದು ತಿಳಿಸುತ್ತದೆ. ಅದೇ ಸಂಘಟನೆಯ ಇನ್ನೊಂದು ಕಾರ್ಯಕ್ರಮದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು ಭಾಗವಹಿಸಿದ್ದಾರೆ. ಅಂದರೆ ನಾವು ಅದೆಂಥ ಅನೈತಿಕ, ಸ್ವಾರ್ಥಪರ ಮನೋಭಾವದವರಾಗಿದ್ದೇವೆ ಎನ್ನುವುದು ಗಾಬರಿಯ ವಿಷಯ.



ಕೃಪೆ: ಸತೀಶ್ ಆಚಾರ್ಯ


ನನ್ನನ್ನು ಕಾಡುತ್ತಿರುವ ಪ್ರಶ್ನೆಗಳು ಹೀಗಿವೆ. ಕಾಶ್ಮೀರದ ವಿಷಯದಲ್ಲಿ ಸರಕಾರವು ಒಂದು ತೀರ್ಮಾನವನ್ನು ತೆಗೆದುಕೊಂಡು ಕಾರ್ಯಾಚರಣೆ ಮಾಡುತ್ತದೆ. ಇದಕ್ಕಾಗಿ ದೇಶದ 50,000 ಸೈನಿಕರನ್ನು ಬಳಸಿಕೊಳ್ಳುತ್ತದೆ. ಇದನ್ನು ಪ್ರಶ್ನಿಸುವುದು ಹೇಗೆ ದೇಶದ್ರೋಹವಾಗುತ್ತದೆ? ಸರಕಾರದ ಯಾವುದೇ ತೀರ್ಮಾನ ಅಥವಾ ಕಾರ್ಯವನ್ನು ಪ್ರಶ್ನಿಸುವುದು ವಿಮರ್ಶಿಸುವುದು ಪ್ರಜಾಪ್ರಭುತ್ವದಲ್ಲಿ ಎಲ್ಲಾ ಪ್ರಜೆಗಳಿಗೆ ಇರುವ ಹಕ್ಕಲ್ಲವೆ? ಇದೇ ರೀತಿ ಸಿಎಎ ಹಾಗೂ ಎನ್.ಆರ್.ಸಿ ಗಳು ಸರಕಾರದ ನೀತಿಗಳು ಹಾಗೂ ಕಾರ್ಯಗಳು. ಇವುಗಳನ್ನು ಪ್ರತಿಭಟಿಸುವುದು ದೇಶದ್ರೋಹ ಹೇಗಾಗುತ್ತದೆ? ಉತ್ತರಗಳು ಈಗ ಸ್ಪಷ್ಟವಾಗುತ್ತಿವೆ. ಪ್ರಜಾಪ್ರಭುತ್ವವು ಈಗ ದುರ್ಬಲವಾಗಿ, ಫ್ಯಾಸಿಸಂ ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ಅನೈತಿಕವಾಗಿ ಆಕ್ರಮಿಸಿಕೊಂಡಿದೆ. ಹೀಗಾಗಿ ವಿಮರ್ಶೆ, ಪ್ರತಿರೋಧ, ಪ್ರತಿಭಟನೆಗಳು ದೇಶದ್ರೋಹವಾಗಿ ಭಾಷಾಂತರಗೊಂಡಿವೆ.

ಪ್ರಜಾಪ್ರಭುತ್ವದ ಜೀವಾಳವೆಂದರೆ ಅಹಿಂಸೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ವರ್ಣಿಸಿದಂತೆ ಪ್ರಜಾಪ್ರಭುತ್ವವೆಂದರೆ ಯಾವುದೇ ರಕ್ತಪಾತವಿಲ್ಲದೆ ಬಹುಮುಖ್ಯವಾದ, ಆಳವಾದ ಬದಲಾವಣೆಗಳನ್ನು ತರುವ ವ್ಯವಸ್ಥೆಯಾಗಿದೆ. ಅಷ್ಟು ಮಾತ್ರವಲ್ಲ ಇನ್ನೆಲ್ಲ ರಾಜಕಿಯ ವ್ಯವಸ್ಥೆಗಳನ್ನು ಪರಿಶೀಲಿಸಿ ಪ್ರಜಾಪ್ರಭುತ್ವವೇ ಸೂಕ್ತವೆಂದು ಆಯ್ಕೆ ಮಾಡಲಾಗಿದೆಯೆಂದೂ ಬಾಬಾ ಸಾಹೇಬರು ಹೇಳಿದರು. ಆದರೆ ಈಗ ಈ ದೇಶದ ಪ್ರಜಾಪ್ರಭುತ್ವದ ಕೇಂದ್ರದಲ್ಲಿಯೇ ಹಿಂಸೆಯು ಬಂದು ಕುಳಿತಿದೆ. ಚರ್ಚೆ, ಸಂವಾದ, ಒಪ್ಪಿಗೆ ಇವುಗಳ ಬದಲಾಗಿ ಬೆದರಿಕೆ, ಹಿಂಸೆಗಳೇ ಮಾಧ್ಯಮಗಳಾಗಿವೆ. ನೆನ್ನೆ (10 ಫೆಬ್ರವರಿ) ಪ್ರತಿಭಟನೆಗೆಂದು ಹೊರಟಿದ್ದ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ತಡೆದ ಪೋಲಿಸರು ನೇರವಾಗಿ ಅವರ ಗುಪ್ತಾಂಗಗಳ ಮೇಲೆ ಲಾಠಿಯಿಂದ ಹೊಡೆದಿದ್ದಾರೆನ್ನುವ ವರದಿಗಳನ್ನು ಸಾಮಾಜಿಕ ತಾಣಗಳಲ್ಲಿ ನೋಡಿದೆ. ಎಲ್ಲಾ ರಾಜಕೀಯ ಸ್ಥಿತಿಯಲ್ಲಿಯೂ ಒಂದು ಲಕ್ಷ್ಮಣ ರೇಖೆ ಇರುತ್ತದೆ. ಅದನ್ನು ದಾಟಿದರೆ ಭವಿಷ್ಯದಲ್ಲಿ ಏನಾಗಬಹುದೆಂದು ಯಾರು ಹೇಳಲಾಗದು. ವಿದ್ಯಾರ್ಥಿ ವಿದ್ಯಾರ್ಥಿನಿಯರ ಗುಪ್ತಾಂಗಗಳ ಮೇಲೆ ಪೋಲೀಸರು ಹೊಡೆದು ಈ ಲಕ್ಷ್ಮಣರೇಖೆಯನ್ನು ದಾಟಿದ್ದಾರೆ. ಇದರಿಂದಾಚೆಗೆ ಪ್ರಜಾಸತ್ತಾತ್ಮಕ ಅಹಿಂಸಾತ್ಮಕ ಹೋರಾಟಗಳ ಬದಲಾಗಿ ಬೇರೆ ಆಯ್ಕೆಗಳು ಹುಟ್ಟಿಕೊಳ್ಳುವುದು ಸಹಜವೆಂದು ಕಾಣುತ್ತದೆ.

ಎಂಡೋ ಸಂತ್ರಸ್ತರ, ಅಂಗವಿಕಲರ ಬೇಡಿಕೆ....... ಪುಟ 4 ರಿಂದ

ಗೂಡಂಗಡಿ ಸಾಲ, ಸಹಾಯ ಧನ ಮೊತ್ತವನ್ನು ರೂ. 2 ಲಕ್ಷಕ್ಕೆ ಹೆಚ್ಚಿಸಬೇಕು. ಅಂಗವಿಕಲರಿಗೆ ಎಲ್ಲಾ ಸರಕಾರಿ ಕಚೇರಿಗಳಲ್ಲಿ, ರೈಲು ನಿಲ್ದಾಣಗಳಲ್ಲಿ, ದೇವಸ್ಥಾನಗಳಲ್ಲಿ, ವಾಹನ ನಿಲುಗಡೆ ಮತ್ತು ಶೌಚಾಲಯವನ್ನು ಉಚಿತವಾಗಿ ಒದಗಿಸಲು ಗುತ್ತಿಗೆ ಆದೇಶದಲ್ಲಿಯೇ ಸೇರಿಸಬೇಕು. ತೀವ್ರ ತರಹದ ಬುದ್ಧಿಮಾಂದ್ಯ ಮತ್ತು ಮಾನಸಿಕ ಅಸ್ವಸ್ಥರನ್ನು ನೋಡಿಕೊಳ್ಳುವ ಸಹಾಯಕರಿಗೆ ಮಾಸಿಕ ಕನಿಷ್ಟ 3000 ರೂ. ನೀಡಬೇಕು ಮತ್ತು ಈ ಹಿಂದಿನಂತೆ ವಿಮಾ ಸೌಲಭ್ಯ ಕಲ್ಪಿಸಬೇಕು ಎಂದು ಅವರು ಒತ್ತಾಯಿಸಿದರು. ಬಳಿಕ ಈ ಕುರಿತ ಮನವಿಯನ್ನು ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗೆ ಸಲ್ಲಿಸಲಾಯಿತು. ಧರಣಿಯಲ್ಲಿ ಜಿಲ್ಲಾಧ್ಯಕ್ಷ ಮಂಜುನಾಥ ಹೆಬ್ಬಾರ್, ಪ್ರಧಾನ ಕಾರ್ಯದರ್ಶಿ ಕೃಷ್ಣ ಪೂಜಾರಿ ಕೋಟೇಶ್ವರ, ಸಹ ಕಾರ್ಯದರ್ಶಿ ನಾರಾಯಣ ಶೇರುಗಾರ್, ಕೃಷ್ಣ ನಾಯ್ಕ್ ಬ್ರಹ್ಮಾವರ, ಖಜಾಂಜಿ ಬಾಬು ದೇವಾಡಿಗ ಉಪ್ಪುಂದ, ಅಂಗವಿಕಲರ ಪುನರ್ವಸತಿ ಕಾರ್ಯಕರ್ತ(VRW) MRW ನೌಕರರ ಒಕ್ಕೂಟದ ಜಿಲ್ಲಾಧ್ಯಕ್ಷೆ ಮಂಜುಳಾ ಸುಭಾಶ್ ಕಾರ್ಕಳ, ಕಾರ್ಯದರ್ಶಿ ಹರೀಶ್ ಶೆಟ್ಟಿ ಕಾರ್ಕಳ ಮತ್ತಿತರರು ಉಪಸ್ಥಿತರಿದ್ದರು. ಅಂಗವಿಕಲರ ಬಾಕಿ ನಿಂತಿರುವ ಪೋಷಣಾ ಭತ್ಯೆ ಈ ಕೂಡಲೆ ಬಿಡುಗಡೆ ಮಾಡಬೇಕು. ಪ್ರತೀ ತಿಂಗಳು 15 ನೇ ತಾರೀಕಿನೊಳಗೆ ಫಲಾನುಭವಿಗಳ ಖಾತೆಗೆ ಜಮಾಗೊಳಿಸಬೇಕು. ಅಂಗವಿಕಲರ ಮಾಸಿಕ ಪೋಷಣಾ ಭತ್ಯೆ 600 ರೂ. ಗಳಿಂದ 3000 ರೂ. ಗಳಿಗೆ ಮತ್ತು 1400 ರೂ. ಗಳಿಂದ 5000 ರೂ. ಗೆ ಹೆಚ್ಚಿಸಬೇಕು. ಬುದ್ಧಿಮಾಂದ್ಯ ಮತ್ತು ಮಾನಸಿಕ ಅಸ್ವಸ್ಥರಿಗೆ ಶೇಕಡಾ 5 ರ ಅನುದಾನ ಗ್ರಾಮ ಪಂಚಾಯತ್‌ಗಳಿಗೆ ಆದ್ಯತೆ ನೀಡಬೇಕು ಎಂದು ವೆಂಕಟೇಶ ಕೋಣಿ ಒತ್ತಾಯಿಸಿದರು. ಸರಕಾರಿ ಕಚೇರಿಗಳಲ್ಲಿ ಅಂಗವಿಕಲರಿಗೆ ಮತ್ತು ಹಿರಿಯ ನಾಗರಿಕರಿಗೆ ಪ್ರತ್ಯೇಕ ಕೌಂಟರ್‌ಗಳನ್ನು ಕಡ್ಡಾಯವಾಗಿ ನಿರ್ವಹಿಸಲು ನಿರ್ದೇಶನ ನೀಡಬೇಕು. ಅಂಗವಿಕಲರಿಗೆ ನೀಡುವ ಸರಕಾರಿ ಬಸ್ಸ್ ಪಾಸ್‌ನ ಪ್ರಯಾಣ ಮಿತಿಯನ್ನು ಹೆಚ್ಚಿಸಬೇಕು. ಸ್ಥಳೀಯ ಶಾಸಕರ ಅನುದಾನದ ನಿಧಿಯಿಂದ ಅಂಗವಿಕಲರಿಗೆ ಮೀಸಲಿರಿಸಿರುವ ಅನುದಾನವನ್ನು ಆಯಾ ವರ್ಷದಲ್ಲಿ ಖರ್ಚು ಮಾಡುವಂತೆ ಕ್ರಮವಹಿಸಬೇಕು. ಜಿಲ್ಲೆಯಾದ್ಯಂತ ದೈಹಿಕ ಅಂಗವಿಕಲರು ಸುಮಾರು 85 ಕ್ಕೂ ಹೆಚ್ಚು ಅರ್ಜಿದಾರರು ತ್ರಿಚಕ್ರ ಮೋಟಾರ್ ಸೈಕಲ್ ವಾಹನ ಕೋರಿ ಅರ್ಜಿ ಸಲ್ಲಿಸಿದ ಅರ್ಹ ಫಲಾನುಭವಿಗಳಿಗೆ ಮೋಟಾರ್ ಸೈಕಲ್ ವಾಹನ ಈ ಕೂಡಲೆ ಮಂಜೂರು ಮಾಡಬೇಕೆಂದು ಅವರು ಆಗ್ರಹಿಸಿದರು.

ವರದಿ: ಕೋವಿನಾಯಕ


'ಗೋಲಿ ಮಾರೋ' ಕರೆಯಿಂದ ಪ್ರೇರಿತನಾಗಿ ಆರ್ಘೂದಿ ಎಂದವರಿಗೆ 'ಯೆ ಲೇ ಲೋ' ಎಂದ, ದಿಲ್ಲಿಯ ಜನತೆ ತಮ್ಮ ತೀರ್ಪನ್ನು ಕೊಟ್ಟು ಅಮಿತ್‌ಷಾಗೆ 'ಯೇ ಲೋ' ಎಂದುತ್ತರಿಸಿದರು



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ದಿಲ್ಲಿ ಚುನಾವಣೆ: ಬಿಜೆಪಿಗೆ ತೀಕ್ಷ್ಣ ಮುಖಭಂಗ

ಪ್ರಕಾಶ ಕಾರಟ್

ಹರ್ಯಾಣದಲ್ಲಿ ಬಹುಮತವನ್ನು ಕಳೆದುಕೊಂಡದ್ದು, ಮಹಾರಾಷ್ಟ್ರದಲ್ಲಿ ಶಿವಸೇನೆಯೊಂದಿಗೆ ಚುನಾವಣಾ-ಪೂರ್ವ ಮೈತ್ರಿ ಮುರಿದು ಬಿದ್ದು ಸರಕಾರ ರಚಿಸಲು ಆಗದೇ ಹೋದದ್ದು ಇವೆಲ್ಲದರ ನಂತರ ಈಗ ದಿಲ್ಲಿ ಫಲಿತಾಂಶ ಬಿಜೆಪಿಗೊಂದು ತೀಕ್ಷ್ಣ ಮುಖಭಂಗ.

ಬಿಜೆಪಿ-ಆರೆಸ್ಸೆಸ್ ಹಿಂದುತ್ವ ಪಡೆಗಳಿಗೆ ವಿರೋಧಕ್ಕೆ ಈ ನಿರ್ಣಾಯಕ ದಿಲ್ಲಿ ತೀರ್ಪಿನಿಂದ ಒಂದು ಉತ್ತೇಜನೆ ಸಿಕ್ಕಿದೆ. ದಿಲ್ಲಿಯ ನಾಗರಿಕರು ದೇಶದ ಎಲ್ಲ ಭಾಗಗಳಿಂದ ಬಂದಿರುವವರು-ವಿವಿಧ ಧರ್ಮಗಳಿಗೆ ಸೇರಿದವರು, ವಿಭಿನ್ನ ಭಾಷೆಗಳನ್ನಾಡುವವರು ಮತ್ತು ಭಿನ್ನ-ಭಿನ್ನ ಪ್ರದೇಶಗಳಿಂದ ಬಂದವರು. ಅವರು ಕಣ್ಮನ ಸೆಳೆಯುವಂತಹ ಒಂದು ತೀರ್ಪನ್ನು ನೀಡಿದ್ದಾರೆ-ನಾವೆಲ್ಲ ಭಾರತೀಯರು, ನಮ್ಮನ್ನು ಕೋಮುವಾದಿ ರಾಜಕೀಯ ಛಿದ್ರಗೊಳಿಸಲಾರದು ಎಂದು ಸಾರಿದ್ದಾರೆ. ಇದು ಪೌರತ್ವದ ಜಾತ್ಯತೀತ ಪರಿಕಲ್ಪನೆಯನ್ನು ರಕ್ಷಿಸಲು ನಡೆಯುತ್ತಿರುವ ಹೋರಾಟಕ್ಕೆ ಮತ್ತು ಹಿಂದುತ್ವ ಸರ್ವಾಧಿಕಾರಶಾಹಿಯ ವಿರುದ್ಧ ಹೋರಾಟಕ್ಕೆ ಒಳ್ಳೆಯ ಲಕ್ಷಣ.







ದಿಲ್ಲಿ ವಿಧಾನಸಭಾ ಚುನಾವಣೆಗಳಲ್ಲಿ ಆಮ್ ಆದ್ಮಿ ಪಾರ್ಟಿ(ಎಎಪಿ)ಯ ವ್ಯಾಪಕ ವಿಜಯ ಒಂದು ಗಮನಾರ್ಹ ಕಾರ್ಯಸಾಧನೆ. 2015 ವಿಧಾನಸಭಾ ಚುನಾವಣೆಗಳಲ್ಲಿ 70ರಲ್ಲಿ 67 ಸ್ಥಾನಗಳನ್ನು ಗಳಿಸಿದ ಅಭೂತಪೂರ್ವ ವಿಜಯದ ನಂತರ, ಈಗ ಕೇಜ್ರಿವಾಲ್ ನೇತೃತ್ವದಲ್ಲಿ ಎಎಪಿ 70ರಲ್ಲಿ 62 ಸ್ಥಾನಗಳನ್ನು ಪಡೆದು ಮತ್ತೊಂದು ಸಮಗ್ರ ವಿಜಯವನ್ನು ದಾಖಲಿಸಿದೆ.

ಈ ವಿಜಯದ ಹಿಂದಿರುವ ದೊಡ್ಡ ಜನಬೆಂಬಲವನ್ನು ಅದು ಈ ಬಾರಿ ಪಡೆದ 53.6ಶೇ. ಮತಗಳು ಎತ್ತಿ ತೋರುತ್ತವೆ. 2015ರಲ್ಲಿ ಅದು 54.3ಶೇ. ಮತಗಳಿಸಿತ್ತು, ಅಂದರೆ ಕಳೆದ ಬಾರಿಗಿಂತ 1ಶೇ.ಕ್ಕಿಂತಲೂ ಕಡಿಮೆ ವ್ಯತ್ಯಾಸ.

ಎಎಪಿ ಪರವಾದ ಈ ತೀರ್ಪು ಎಎಪಿ ಸರಕಾರ ಮತ್ತು ಅದರ ದಾಖಲೆಯ ಬಗ್ಗೆ ಭಾರೀ ವಿಶ್ವಾಸದ ಮತವೂ ಆಗಿದೆ. ಬಿಜೆಪಿ ಕೇಂದ್ರ ಸರಕಾರ ಹಲವಾರು ರೀತಿಗಳಲ್ಲಿ ಅಡೆ-ತಡೆ ತಂತ್ರಗಳನ್ನು ನಡೆಸಿದರೂ ಲೆಕ್ಕಿಸದೆ, ಎಎಪಿ ಸರಕಾರ ಸರಕಾರೀ ಶಾಲೆಗಳನ್ನು ಉತ್ತಮಪಡಿಸುವಲ್ಲಿ, ಮೊಹಲ್ಲಾ ಕ್ಲಿನಿಕ್‌ಗಳ ಮೂಲಕ ಸಾರ್ವಜನಿಕ ಆರೋಗ್ಯ ಸೌಕರ್ಯಗಳನ್ನು ವಿಸ್ತರಿಸುವಲ್ಲಿ ಮತ್ತು ಮುಫತ್ತಾಗಿ ವಿದ್ಯುತ್ ಮತ್ತು ಆರೋಗ್ಯವನ್ನು ಒದಗಿಸುವ ಮೂಲಕ ದಿಲ್ಲಿಯ ಬಡ ಮತ್ತು ದುಡಿಯುವ ಜನಗಳ ಬದುಕನ್ನು ಉತ್ತಮಗೊಳಿಸುವಲ್ಲಿ ಒಳ್ಳೆಯ ಕೆಲಸ ಮಾಡಿತು.

ಸರಕಾರದ ಈ ದಾಖಲೆಗಳು ಮತ್ತು ಈ ಸೇವೆಗಳನ್ನು ಮತ್ತಷ್ಟು ಬಲಪಡಿಸುವ ಹಾಗೂ ವಿಸ್ತರಿಸುವ ಅದರ ಆಶ್ವಾಸನೆಗಳ ಆಧಾರದಲ್ಲಿ ಎಎಪಿ ಕಾಮಿಕ ವರ್ಗ, ಕೆಳ ಮಧ್ಯಮ ವರ್ಗಗಳು, ಮಹಿಳೆಯರು, ದಲಿತರು ಮತ್ತು ಅಲ್ಪಸಂಖ್ಯಾತರ ಬೆಂಬಲವನ್ನು ಪಡೆಯಿತು.

ತದ್ವಿರುದ್ಧವಾಗಿ, ಬಿಜೆಪಿಯ ಚುನಾವಣಾ ಪ್ರಚಾರ ಒಂದು ಕೋಮು ಧ್ರುವೀಕರಣವನ್ನು ಸೃಷ್ಟಿಸುವ ಗುರಿ ಹೊಂದಿತ್ತು. ದಿನಗಳೆದಂತೆ, ಮುಸ್ಲಿಂ ಮಹಿಳೆಯರು ಸಿಎಎ-ಎನ್‌ಆರ್‌ಸಿ ವಿರುದ್ಧ ಪ್ರತಿಭಟಿಸಿ ಕೂತಿದ್ದ ಶಾಹೀನ್ ಬಾಗ್ ಒಂದು ದ್ವೇಷ ಪ್ರಚಾರದ ಕೇಂದ್ರ ವಿಷಯವಾಯಿತು. ಅದನ್ನು "ಮಿನಿ ಪಾಕಿಸ್ತಾನ" ಎಂದರು, ರಾಷ್ಟ್ರ-ವಿರೋಧಿ ಚಟುವಟಿಕೆಗಳ ಕೇಂದ್ರ ಎಂದರು, "ದೇಶದ್ರೋಹಿಗಳನ್ನು ಹೊಡೆದುರುಳಿಸಿ" ಎಂಬ ಕರೆಗಳನ್ನು ಕೊಡಲಾಯಿತು. ಈ ವಿಷಮಯ ಪ್ರಚಾರಕ್ಕೆ ನೇತೃತ್ವ ನೀಡಿದವರು ಸ್ವತಃ ಗೃಹಮಂತ್ರಿ ಅಮಿತ್ ಷಾರವರೇ. ಇದರಿಂದಾಗಿ ಜಾಮಿಯ ವಿದ್ಯಾರ್ಥಿಗಳು ಮತ್ತು ಶಾಹಿನ್ ಬಾಗ್ ಪ್ರತಿಭಟನಾಕಾರರ ಮೇಲೆ ಮೂರು ಗುಂಡು ಹಾರಿಸುವ ಘಟನೆಗಳು ನಡೆದವು.

ಇದಕ್ಕೆ ನಿರ್ದೇಶನ ತುತ್ತತುದಿಯಿಂದಲೇ ಬಂದಿತ್ತು ಎಂಬುದು ಪ್ರಧಾನ ಮಂತ್ರಿ ಮೋದಿ ಸೀಲಂಪುರ್, ಶಾಹೀನ್ ಬಾಗ್ ಮತ್ತು ಜಾಮಿಯಾದ ಪ್ರತಿಭಟನೆಗಳು ಒಂದು ಸಂಯೋಗವಲ್ಲ, ಬದಲಿಗೆ ಒಂದು ಪ್ರಯೋಗ ಎಂದು ರ್‍ಯಾಲಿಯೊಂದರಲ್ಲಿ ಹೇಳಿದಾಗ ಸ್ಪಷ್ಟವಾಯಿತು.

ಈ ಪ್ರತಿಭಟನೆಗಳ ಹಿಂದೆ ಒಂದು ರಾಜಕೀಯ ತಂತ್ರ ಇದೆ ಎಂದು ಆಪಾದಿಸುತ್ತ ಅವರು "ಭಾರತವನ್ನು ಚೂರು ಚೂರಾಗಿಸಲು ಬಯಸುವವರನ್ನು ಉಳಿಸಲು" ಎಎಪಿ ಮತ್ತು ಕಾಂಗ್ರೆಸ್ ಮುಂದಾಗಿವೆ ಎಂದು ದೂಷಿಸಿದರು.



ನೀವು ಇಲ್ಲಿ ಇವಿಎಂ ಬಟನ್ ಬಲವಾಗಿ ಒತ್ತಿದರೆ, ಅಲ್ಲಿ ಶಾಹೀನ್ ಬಾಗ್‌ನಲ್ಲಿ ಕರೆಂಟ್ ಹರಿಯಬೇಕು ಎಂದು ಷಾ ಕರೆ ನೀಡಿದರು!

ವ್ಯಂಗ್ಯಚಿತ್ರ: ಮಂಜುಲ್, ಮುಂಬೈ ಮಿರರ್

ಈ ಚುನಾವಣಾ ಪ್ರಚಾರಕ್ಕೆ ಬಿಜೆಪಿ ಹತ್ತಾರು ಕೇಂದ್ರ ಮಂತ್ರಿಗಳನ್ನು, ಐವರು ಮುಖ್ಯಮಂತ್ರಿಗಳನ್ನು ಮತ್ತು 240ಕ್ಕೂ ಹೆಚ್ಚು ಎಂಪಿಗಳನ್ನು ಹಚ್ಚಿತು. ಇದರ ಬೆನ್ನಿಗೆ ಭಾರಿ ಹಣಬಲವು ನಿಂತಿತ್ತು, ಮತದಾರರಿಗೆ ಹಣ ಹಂಚಿಕೆಯೂ ನಡೆಯಿತು. ಲೋಕಸಭಾ ಚುನಾವಣೆಗಳ ವೇಳಲ್ಲೂ ಕಂಡು ಬಂದಂತೆ, ಚುನಾವಣಾ ಆಯೋಗ ಉತ್ತರಪ್ರದೇಶದ ಮುಖ್ಯಮಂತ್ರಿ ಆದಿತ್ಯನಾಥ, ಕೇಂದ್ರ ಮಂತ್ರಿ ಅನುರಾಗ್ ಠಾಕುರ್ ಮತ್ತು ಸಂಸತ್ ಸದಸ್ಯ ಪರ್ವೇಶ್ ವರ್ಮಾರ ದ್ವೇಷ ಪ್ರಚಾರವನ್ನು ಪರಿಣಾಮಕಾರಿಯಾಗಿ ತಡೆಯುವಲ್ಲಿ ವಿಫಲವಾಗಿದೆ.

ಈ ಕೋಮುವಾದಿ ದ್ವೇಷಪ್ರಚಾರವನ್ನು ತಿರಸ್ಕರಿಸಿ ಎಎಪಿಗೆ ಒಂದು ಭಾರೀ ಜನಾದೇಶವನ್ನು ನೀಡಿರುವ ಕೀರ್ತಿ ದಿಲ್ಲಿಯ ಜನತೆಗೆ ಸಲ್ಲುತ್ತದೆ. ಕೇಜ್ರಿವಾಲ್ ಮತ್ತು ಎಎಪಿ ಒಂದು ಕೋಮು ಧ್ರುವೀಕರಣ ನಡೆಯದಂತೆ ತಡೆಯಲು, ಬಿಜೆಪಿಯ ಉನ್ನತ್ತ ಕೋಮುವಾದಿ ಪ್ರಚಾರವನ್ನು ಮುಖಾಮುಖಿಯಾಗಿ ಎದುರಿಸದಿರುವ ದಾರಿಯನ್ನು ಪ್ರಜ್ಞಾಪೂರ್ವಕವಾಗಿಯೇ ಅನುಸರಿಸಿತು. ಹೀಗೆ ಮಾಡುವ ಮೂಲಕ ಮೋದಿ ಬೆಂಬಲಿಗರ ಒಂದು ವಿಭಾಗ ಸರಕಾರದ ಕೆಲಸದ ಮೇಲೆ ಎಎಪಿಗೆ ಮತನಿಡಲು ಅನುಕೂಲ ಕಲ್ಪಿಸಿ ಕೊಟ್ಟಿತು. ಮೇ 2019ರ ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿ ಎಲ್ಲ ಏಳು ಸ್ಥಾನಗಳನ್ನು ಪಡೆದಿತ್ತು, 56.6ಶೇ. ಮತಗಳನ್ನು ಗಳಿಸಿತ್ತು. ಆಗ ಅದು 70ರಲ್ಲಿ 65 ವಿಧಾಸಭಾ ಕ್ಷೇತ್ರಗಳಲ್ಲಿ ಮುನ್ನಡೆ ಪಡೆದಿತ್ತು. ಈ ಬಾರಿ ಅದಕ್ಕೆ ಕೇವಲ 38.5 ಶೇ. ಮತ ಪಡೆಯಲು ಸಾಧ್ಯವಾಯಿತಷ್ಟೇ, ಅಂದರೆ 18ಶೇ.ದಷ್ಟು ಇಳಿಕೆ. ಆದರೆ 2015ರ ವಿಧಾನಸಭಾ ಚುನಾವನೆಗಳಲ್ಲಿ ಪಡೆದ 32.3ಶೇ. ಮತಗಳಿಗೆ ಹೋಲಿಸಿದರೆ, ಅದರ ಮತಗಳಿಕೆಯಲ್ಲಿ 6ಶೇ.ದಷ್ಟು ಹೆಚ್ಚಳವಾಗಿದೆ. ಇದರಲ್ಲಿ ಬಹುಪಾಲು ಕಾಂಗ್ರೆಸಿನಿಂದ ಬಂದಂತೆ ಕಾಣುತ್ತದೆ, ಏಕೆಂದರೆ, ಅದರ ಮತಗಳಿಕೆ ಪ್ರಮಾಣ 2015ರಲ್ಲಿ 9.7ಶೇ. ಇದ್ದದ್ದು ಈ ಬಾರಿ 4.3ಶೇ.ಕ್ಕೆ ಇಳಿದಿದೆ.

ಬಿಜೆಪಿ-ಆರೆಸ್ಸೆಸ್ ಹಿಂದುತ್ವ ಪಡೆಗಳಿಗೆ ವಿರೋಧಕ್ಕೆ ಈ ನಿರ್ಣಾಯಕ ದಿಲ್ಲಿ ತೀರ್ಪಿನಿಂದ ಒಂದು ಉತ್ತೇಜನೆ ಸಿಕ್ಕಿದೆ. ಹರ್ಯಾಣದಲ್ಲಿ ಬಹುಮತವನ್ನು ಕಳೆದುಕೊಂಡದ್ದು, ಮಹಾರಾಷ್ಟ್ರದಲ್ಲಿ ಶಿವಸೇನೆಯೊಂದಿಗೆ ಚುನಾವಣಾ-ಪೂರ್ವ ಮೈತ್ರಿ ಮುರಿದು ಬಿದ್ದು ಸರಕಾರ ರಚಿಸಲು ಆಗದೇ ಹೋದದ್ದು ಇವೆಲ್ಲದರ ನಂತರ ದಿಲ್ಲಿ ಫಲಿತಾಂಶ ಬಿಜೆಪಿಗೊಂದು ತೀಕ್ಷ್ಣ ಮುಖಭಂಗ.

ದಿಲ್ಲಿಯ ನಾಗರಿಕರು ದೇಶದ ಎಲ್ಲ ಭಾಗಗಳಿಂದ ಬಂದಿರುವವರು-ವಿವಿಧ ಧರ್ಮಗಳಿಗೆ ಸೇರಿದವರು, ವಿಭಿನ್ನ ಭಾಷೆಗಳನ್ನಾಡುವವರು ಮತ್ತು ಭಿನ್ನ-ಭಿನ್ನ ಪ್ರದೇಶಗಳಿಂದ ಬಂದವರು. ಅವರು ಕಣ್ಮನ ಸೆಳೆಯುವಂತಹ ಒಂದು ತೀರ್ಪನ್ನು ನೀಡಿದ್ದಾರೆ-ನಾವೆಲ್ಲ ಭಾರತೀಯರು, ನಮ್ಮನ್ನು ಕೋಮುವಾದಿ ರಾಜಕೀಯ ಛಿದ್ರಗೊಳಿಸಲಾರದು ಎಂದು ಸಾರಿದ್ದಾರೆ. ಇದು ಪೌರತ್ವದ ಜಾತ್ಯತೀತ ಪರಿಕಲ್ಪನೆಯನ್ನು ರಕ್ಷಿಸಲು ನಡೆಯುತ್ತಿರುವ ಹೋರಾಟಕ್ಕೆ ಮತ್ತು ಹಿಂದುತ್ವ ಸರ್ವಾಧಿಕಾರಶಾಹಿಯ ವಿರುದ್ಧ ಹೋರಾಟಕ್ಕೆ ಒಳ್ಳೆಯ ಲಕ್ಷಣ.

ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ನ್ಯೂಸ್‌ಸ್ಟಿಂಗ್









ಸಂವಿಧಾನ ಸಂರಕ್ಷಣೆಗಾಗಿ ಮಹಿಳೆಯರು ಕಲಬುರಗಿಯಲ್ಲಿ ಬೃಹತ್ ಸಮಾವೇಶ

'ಅಭಿವೃದ್ಧಿ ಕೆಲಸಗಳನ್ನು ಮಾಡದೆ ದಿನದ ಮೂರು ಹೊತ್ತು ಪಾಕಿಸ್ತಾನ ಪಾಕಿಸ್ತಾನ ಎಂದು ಬಡಬಡಿಸುವ ನರೇಂದ್ರ ಮೋದಿ ಹಾಗೂ ಅಮೀತ ಶಾ ನೇತೃತ್ವದ ಬಿಜೆಪಿಯನ್ನು ಚುನಾವಣೆಯಲ್ಲಿ ಹೀನಾಯವಾಗಿ ಸೋಲಿಸುವ ಮೂಲಕ ದೆಹಲಿಯ ಮತದಾರರು ಮೋದಿ ಹಾಗೂ ಶಾ ಕಪಾಳಕ್ಕೆ ಸರಿಯಾದ ಏಟನ್ನೇ ಕೊಟ್ಟಿದ್ದಾರೆ' ಎಂದು ಸಿಪಿಐಎಂ ಪಾಲಿಟ್ ಬ್ಯೂರೊ ಸದಸ್ಯೆ ಹಾಗೂ ಮಾಜಿ ಸಂಸದೆ ಮಹಿಳಾ ಚಳುವಳಿಯ ನಾಯಕಿ ಬೃಂದಾ ಕಾರಾಟ್ ಹೇಳಿದರು.

ಜನವಾದಿ ಮಹಿಳಾ ಸಂಘಟನೆಯು ಆಯೋಜಿಸಿದ ಸಂವಿಧಾನ ಸಂರಕ್ಷಣೆಗಾಗಿ ನಾವು ಮಹಿಳೆಯರು ವೇದಿಕೆಯಿಂದ ಗುರುವಾರ ಕಲಬುರಗಿ ನಗರದಲ್ಲಿ ಹಮ್ಮಿಕೊಂಡಿದ್ದ ವಿಭಾಗ ಮಟ್ಟದ ಎನ್‌ಪಿಆರ್, ಎನ್‌ಆರ್‌ಸಿ, ಸಿಎಎ ವಿರೋಧಿ ಸಮಾವೇಶವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಚುನಾವಣೆ ಮುಗಿವವರೆಗೂ ಪಾಕಿಸ್ತಾನ ಹಾಗೂ ಶಾಹಿನ್ ಬಾಗ್ ಎಂಬ ಎರಡು ಹೆಸರುಗಳನ್ನು ಬಿಟ್ಟರೆ ಮೋದಿಯವರು ಯಾವುದೇ ಅಭಿವೃದ್ಧಿಯ ಒಂದೇ ಒಂದು ಮಾತನಾಡಲಿಲ್ಲ. ಹಾಗೆ ಮಾಡುವ ಮೂಲಕ ಹಿಂದೂ ಮತಗಳ ಧ್ರುವೀಕರಣ ಸಾಧ್ಯವಾಗಲಿದೆ ಎಂದು ಅವರು ನಂಬಿದ್ದರು. ಆದರೆ ಅವರುಗಳ ಕೋಮುಭಾವನೆಗಳನ್ನು ಕೆರಳಿಸುವ ಮಾತುಗಳಿಗೆ ಕಿವಿಗೊಡದ ದೆಹೆಲಿಯ ಮತದಾರರು ವಿವೇಕದ ನೆಲೆಯಲ್ಲಿ ಮತ ಚಲಾಯಿಸಿದ್ದಾರೆ. ಸಂಸತ್ತಿನಲ್ಲಿ ಬಹುಮತ ಇದೆ ಎಂಬ ದುರಹಂಕಾರದಿಂದ ಮೋದಿ ಸರಕಾರವು ಸಿಎಎ ಜಾರಿಗೆ ಮುಂದಾಗಿದೆ. ಈ ಕಾಯ್ದೆಯು ಸಂವಿಧಾನದ ಹೃದಯಕ್ಕೆ ಗಾಯ ಮಾಡಿದೆ. ಈ ಕಾಯ್ದೆಯಿಂದ ಕೇವಲ ಮುಸ್ಲಿಮರು ಮಾತ್ರ ಕಷ್ಟಕ್ಕೆ ಒಳಗಾಗುತ್ತಾರೆ ಎಂಬ ಮೇಲ್ನೋಟದ ಅಭಿಪ್ರಾಯವನ್ನು ಹರಡಿಸಲಾಗಿಗದೆ. ಆದರೆ ಎನ್‌ಪಿಆರ್–ಎನ್‌ಆರ್‌ಸಿ ನಡುವೆ ಕ್ರಮವಾಗಿ ನೇರ ಸಂಬಂಧವಿದ್ದು ಭಾರತದ ಜನತೆಯನ್ನು ಒಡೆಯುವುದಲ್ಲದೆ ಎಲ್ಲ ಬಡವರನ್ನು ಬಲಿಪಡೆಯಲು ಹೊರಟ ಹುನ್ನಾರವಾಗಿದೆ. ಜನತೆಯ ಬದುಕನ್ನು ಬಡತನಕ್ಕೆ ತಳ್ಳಿ ಕಾರ್ಪೋರೆಟ್‌ಗಳಿಗೆ ಮಣೆ ಹಾಕುವ ಮೋದಿ ಸರಕಾರವು ಇದನ್ನು ಮರೆ ಮಾಚಲೆಂದೇ ಈ ಕರಾಳ ಕಾಯ್ದೆಯನ್ನು ಜಾರಿಗೆ ತಂದಿದೆ. ಈ ಬಾರಿ ಬಜೆಟ್ಟಿನಲ್ಲಿ ಉದ್ಯೋಗ ಖಾತ್ರಿಗಾಗಿ 13% (9500 ಕೋಟಿ) ಬಜೆಟ್ಟನ್ನು ಕಡಿಮೆ ಕೊಡಲಾಗಿದೆ. ಬಡ ಮಹಿಳೆಯರಿಗೆ ಸಿಗುವ ಪೆನ್‌ಷನ್ ಒಂದು ಪೈಸೆಯೂ ಹೆಚ್ಚಳ ಮಾಡಿಲ್ಲ. ಬೋಲೋ ಭಾರತ ಮಾತಾಕಿ ಜೈ ಎಂದು ಘೋಷಣೆ ಕೊಡುವ ಇವರು ಮಾತೆಯರ ಅಭಿವೃದ್ಧಿಯ ನ್ಯಾಯದ ಪ್ರಶ್ನೆ ಬಂದಾಗ ಹಿಂದೆ ಸರಿಯುವರು. ಗೋಲಿ ಮಾರೋ ಸಾಲೋಂಕೋ ಎಂದ ಮಂತ್ರಿಯನ್ನು ಸನ್ಮಾಸಿದ ಮೋದಿ ಸರಕಾರವು ಆರನೆಯಈಯತ್ತೆ ಓದುವ ಮಗು ನಾಟಕದಲ್ಲಿ ಆಡಿದ ಒಂದು ಶಬ್ದಕ್ಕಾಗಿ ದೇಶದ್ರೋಹಿ ಕೇಸಿನಡಿ ಅವಳ ತಾಯಿಯನ್ನು ಶಿಕ್ಷಕಿಯನ್ನು ಬಂಧಿಸಿದೆ. ತನ್ಮೂಲಕ ಅದು ಕಾನೂನನ್ನು ದುರ್ಬಳಕೆ ಮಾಡಿಕೊಂಡಿರುವುದನ್ನು ಎಲ್ಲರೂ ತೀವ್ರವಾಗಿ ಖಂಡಿಸಬೇಕಿದೆ. ಯಡಿಯೂರಪ್ಪ ಮುಖ್ಯಮಂತ್ರಿಗೆ ಮಾನಮರ್ಯಾದೆ ಇದ್ದರೆ ಕೂಡಲೇ ತಾಯಿ ಮತ್ತು ಶಿಕ್ಷಕಿಯನ್ನು ಬಿಡುಗಡೆಗೊಳಿಸಿ ಕೇಸು ರದ್ದುಗೊಳಿಸಬೇಕು ಎಂದು ಬೃಂದಾ ಕಾರಾಟ್ ಆಗ್ರಹಿಸಿದರು. ಕೊರೆವ ಚಳಿಯಲ್ಲಿ ಶಾಹಿನ್ ಬಾಗ್ ನಲ್ಲಿ ಮಹಿಳೆಯರು ಹೋರಾಟ ಮಾಡುತ್ತಿದ್ದಾರೆ. ಉರಿವ ಬಿಸಿಲಿನಲ್ಲಿ ಇಲ್ಲಿ ಮಹಿಳೆಯರು ಸಭೆ ನಡೆಸುತ್ತಿರುವಿರಿ. ಮಹಿಳೆಯರು ಐಕ್ಯತೆಯಿಂದ ಹೋರಾಟ ಮಾಡಬೇಕಿದೆ. ಹಿಮ್ಮೆಟ್ಟದೆ ಬಲಿಷ್ಠವಾದ ಚಳುವಳಿ ಕಟ್ಟಬೇಕಿದೆ. ದೇಶದ ಸಂವಿಧಾನ ಉಳಿಸುವ ಹೊಣೆಗಾರಿಕೆ ಮಹಿಳೆಯರ ಹೆಗಲ ಮೇಲಿದೆ ಎಂದು ಬೃಂದಾ ಹೇಳಿದರು.

ಭಾರತವು ಜಾತ್ಯಾತೀತ ಪರಂಪರೆಯ ಬಹುಸಾಂಸ್ಕೃತಿಕ ನಾಡು. ಸಂವಿಧಾನದ ಹೃದಯ ಭಾಗವೇ ಜಾತ್ಯಾತೀತತೆ ಆಗಿದೆ. ಮೋದಿ ಸರಕಾರವು ಈ ಹೃದಯಕ್ಕೇ ಗಾಯ ಮಾಡಿದೆ. ಸಿಎಎ, ಎನ್‌ಆರ್‌ಸಿ, ಎನ್‌ಪಿಆರ್ ಗಳ ದುಷ್ಪರಿಣಾಮಕ್ಕೆ ಮೊದಲ ಬಲಿ ಮಹಿಳೆಯೇ ಆಗಲಿದ್ದಾಳೆ. ಈ ಕಾಯ್ದೆ ಜಾರಿಯ ಮೂಲಕ ಸಂವಿಧಾನ ಪರ ಮತದಾರರ ಓಟಿನ ಹಕ್ಕನ್ನು ಕಿತ್ತುಕೊಳ್ಳುವ ದುರುದ್ಧೇಶ ಮೋದಿ ಸರಕಾರ ಹೊಂದಿದೆ. ನಮ್ಮ ಪೌರತ್ವ ಸಾಬೀತು ಪಡಿಸುವಂತೆ ಕೇಳುವ ಮೋದಿ ಮತ್ತು ಶಾ ಇವರು ಖಂಡಿತ ನಮ್ಮ ದೇಶದ ಸಾಂಸ್ಕೃತಿಕ ಪರಂಪರೆಯವರಲ್ಲ. ಬದಲಿಗೆ ಇವರು ಹಿಟ್ಲರ್ ನಾಜಿ ವಂಶಸ್ಥರು ಆಗಿದ್ದಾರೆ. ಜನಾಂಗೀಯ ನೆಲೆಯಲ್ಲಿ ಯಹೂದಿಗಳನ್ನು ಆರ್ಯರನ್ನು ಪ್ರತ್ಯೇಕಿಸಿ ಲಕ್ಷಗಟ್ಟಲೆ ಯಹೂದಿಗಳನ್ನು ಕ್ರೂರವಾಗಿ ಕೊಂದು ಹಾಕಿದ ಹಿಟ್ಲರ್ ಸಂತತಿಯೇ ಇವರಾಗಿದ್ದಾರೆ. ಇಂತಹದೇ ಗುರಿಯೂ ಹೊಂದಿದ್ದಾರೆ. ಆದ್ದರಿಂದ ದೇಶವನ್ನು ಮತೀಯ ನೆಲೆಯಲ್ಲಿ ಒಡೆಯಲೆಂದೇ ಇವರು ತಂದ ಸಿಎಎ ಕಾಯ್ದೆಯನ್ನು ಹಿಮ್ಮೆಟ್ಟಿಸಲೇಬೇಕಿದೆ. ಎನ್‌ಪಿಆರ್ ಗೆ ಯಾರೂ ದಾಖಲೆ ಕೊಡಬಾರದು. ದೇಶದಲ್ಲಿ ಬಡತನ ನಿರುದ್ಯೋಗ ಹೆಚ್ಚಾಗಿದೆ. ಆದ್ದರಿಂದ 'ಸಿಎಎ, ಎನ್‌ಪಿಆರ್, ಎನ್ನಾರ್ಸಿ ಭಗಾವೊ ಉದ್ಯೋಗ ಖಾತ್ರಿ ಬಚಾವೊ' ಇಂದಿನ ನಮ್ಮ ಘೋಷಣೆಯಾಗಿದೆ. ಉದ್ಯೋಗ ಖಾತ್ರಿ ಕಾಯ್ದೆಯ ಕತ್ತು ಹಿಸುಕಲು ಹೊರಟ ಮೋದಿ ಸರಕಾರವನ್ನು ಕೆಳಗಿಳಿಸುವ ಗುರಿಯೂ ಜನತೆಯದ್ದಾಗಿದೆ ಎಂದು ಕೆ. ನೀಲಾ ಹೇಳಿದರು.

ಸುಮಾರು ಐದು ಸಾವಿರದಷ್ಟು ಜನ ಮಹಿಳೆಯರು ಭಾಗವಹಿಸಿದ ಸಮಾವೇಶದ ವೇದಿಕೆಯ ಮೇಲೆ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷೆ ದೇವಿ, ಕಾರ್ಯದರ್ಶಿ ಗೌರಮ್ಮ, ಮುಖಂಡರಾದ ರೇಶ್ಮಾ ಹಂಸರಾಜ್, ಅಮೀನಾ ಬೇಗಂ, ರೀನಾ, ಚಂದಮ್ಮ, ಜಗದೇವಿ ನೂಲಕರ್, ಸುರೇಖಾ ರಜಪೂತ, ಮಂಡ್ಯದಿಂದ ಶೋಭಾ, ಅಂಬುಬಾಯಿ ಮಾಳಗೆ, ಹೇಮಾ ಅಟ್ಟೂರ, ಮುಂತಾದವರು ಹಾಗೂ ಲವಿತ್ರ ವಸ್ತ್ರದ್ ಸಭೆಯ ನಿರ್ವಹಣೆ, ಅಶ್ವಿನಿ ಮದನಕರ್ ಸ್ವಾಗತ ಮಾಡಿದರು. ಹಮ್‌ದೇಖೆಂಗೆ ಹಾಡಿನೊಂದಿಗೆ ಸಮಾವೇಶವು ಮುಕ್ತಾಯ ಮಾಡಲಾಯಿತು. ಕಾಯ್ದೆಯನ್ನು ರದ್ದುಗೊಳಿಸಲು ಆಗ್ರಹಿಸಿ ಸಾವಿರಾರು ಜನರು ಸಹಿ ಮಾಡಿದರು. ಪ್ರತಿರೋಧದ ಪೋಸ್ಟರ್ ಗಳನ್ನು ಪ್ರದರ್ಶಿಸಲಾಗಿತ್ತು.





ಜೈಲಿನಲ್ಲಿ ಬಂಧಿಯಾಗಿರುವವರನ್ನ ಭೇಟಿಯಾದ ಬೃಂದಾಕಾರಟ್.. ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಗರಂ ಆದ ಮಾಜಿ ರಾಜ್ಯಸಭಾ ಸದಸ್ಯೆ..!

ಬೀದರ ಜಿಲ್ಲೆಯ ಶಾಹಿನ್ ಶಿಕ್ಷಣ ಸಂಸ್ಥೆಯಲ್ಲಿ ಪ್ರಧಾನಿ ನರೇಂದ್ರಮೋದಿ ಅವರಿಗೆ ಅವಹೇಳ ನಾಟಕ ಪ್ರದರ್ಶನ ಪ್ರಕರಣದಲ್ಲಿ ಬಂಧಿತರಾಗಿರುವ ಸಂಸ್ಥೆಯ ಹೆಚ್.ಎಂ. ಫರೀದಾ ಬೇಗಂ ಹಾಗೂ ಬಾಲಕಿಯ ಪೊಷಕರಾದ ನಜಮುನ್ನಿಸಾ ರನ್ನ ಬೀದರ್ ಜಿಲ್ಲಾ ಕಾರಾಗೃಹದಲ್ಲಿ ರಾಜ್ಯಸಭಾ ಸದಸ್ಯೆ ಬೃಂದಾ ಕಾರಟ್ ಭೇಟಿಯಾದರು.. ಜೈಲಿನಲ್ಲಿ ಬಂಧೀಯಾಗಿರುವ ಇಬ್ಬರು ಜತೆ ಕೆಲ ಕಾಲ ಮಾತುಕತೆ ನಡೆಸಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವ್ರು, ರಾಜ್ಯ ಹಾಗೂ ಕೇಂದ್ರ ಬಿಜೆಪಿ ಸರ್ಕಾರದ ವಿರುದ್ಧ ಹರಿಹಾಯ್ದರು, ಪ್ರಕರಣದ ಸಂಪೂರ್ಣ ಮಾಹಿತಿ ಪಡೆದ್ದು, ವಿನಾಕಾರಣ ಅವರನ್ನ ಬಂಧಿಸಿದ್ದಾರೆ, ದೆಹಲಿಯಲ್ಲಿ ಕೇಂದ್ರ ಸಚಿವರುಗಳು ಬಾಯಿಗೆ ಬಂದಂತೆ ಹೇಳಿಕೆಗಳನ್ನ ನೀಡುತ್ತಿದ್ದಾರೆ, ಮಕ್ಕಳು ಒಂದು ಸಣ್ಣ ನಾಟಕ ಪ್ರದರ್ಶನ ಮಾಡಿದ್ದಕ್ಕೆ ಅವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಿದ್ದಾರೆ, ಇದು ಮಕ್ಕಳ ಮೇಲೆ ಅನ್ಯಾಯ ಮಾಡಿದ್ದಾರೆ, ಸರ್ಕಾರವನ್ನ ದುರುಪಯೋಗ ಪಡೆಸಿಕೊಳ್ಳುತ್ತಿದ್ದಾರೆ, ಎಂದು ಗರಂ ಆದ್ರು, ಇನ್ನು ಮೋದಿಯವರ ಸಚಿವರೇ ಗಳೇ ಹೇಳುತ್ತಾರೆ ಗುಂಡಿಟ್ಟು ಕೊಲ್ಲಿ ಎಂದು ಆದ್ರೆ ಅವರ ಮೇಲೆ ಎಫ್‌ಐಆರ್ ಆಗೋದಿಲ್ಲಾ, ಆದ್ರೆ ಮಕ್ಕಳ ನಾಟಕ ಮಾಡಿದ್ರೆ ಕೇಸ್ ಮಾಡುತ್ತಾರೆ ಇದು ಯಾವ ನ್ಯಾಯ ಎಂದು ಪ್ರಶ್ನಿಸಿದ್ರು...?

ಸಿಡಿ ಆಚರಣೆಗೆ ಕುಮ್ಮಕ್ಕು: ಶಾಸಕ ರೇಣುಕಾಚಾರ್ಯ ವಿರುದ್ಧ ಕ್ರಮಕ್ಕೆ ಆಗ್ರಹ

ಕೆಂಚಿಕೊಪ್ಪದಲ್ಲಿ ಅಸ್ಪೃಶ್ಯತೆ ನಿವಾರಣೆಗೆ ಒತ್ತಾಯ

ಆ ಮಹಿಳೆಯ ವಯಸ್ಸು ಸುಮಾರು 40 ಇರಬಹುದು. ಹೆಸರು ರೇಖಾ. ದಲಿತ ಕುಟುಂಬದ ಮಹಿಳೆ. ಮತ್ತೊಬ್ಬ ಹಿರಿಯ ಮಹಿಳೆಯ ಹೆಸರು ಮರಿಯಮ್ಮ. ವಯಸ್ಸು 50 ಇರಬಹುದು. ಕೆಂಚಿಕೊಪ್ಪ ಗ್ರಾಮದಲ್ಲಿ ನಡೆದ ಸಿಡಿ ಉತ್ಸವದಲ್ಲಿ ಈ ದಲಿತ ಮಹಿಳೆಯರನ್ನು ಕಂಬಕ್ಕೆ ಕಟ್ಟಿ ನೇತು ಹಾಕಿ ತೂಗಿಸುವ ಆಚರಣೆಯನ್ನು ಆಚರಿಸಲಾಗಿದೆ. ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಹಾಗೂ ಹೊನ್ನಾಳಿ ಕ್ಷೇತ್ರದ ಶಾಸಕರಾದ ರೇಣುಕಾಚಾರ್ಯ ಅವರ ಸಮ್ಮುಖದಲ್ಲಿಯೇ ಈ ಆಚರಣೆ ನಡೆದಿದೆ. ರೇಣುಕಾಚಾರ್ಯ ಅವರು ಈ ಸಿಡಿ ಆಚರಣೆಗೆ ತಾವೇ ಚಾಲನೆ ಕೊಟ್ಟದ್ದಲ್ಲದೇ ಈ ಅಮಾನವೀಯ, ಅಪಾಯಕಾರಿ ಆಚರಣೆಯನ್ನು ಬಹಿರಂಗವಾಗಿ ಸಮರ್ಥಿಸಿದ್ದಾರೆ.

ಸಿಡಿ ಆಚರಣೆಯು ದಲಿತರು ಮತ್ತು ದಲಿತ ಮಹಿಳೆಯರ ಮೇಲೆ ನಡೆಯುತ್ತಿರುವ ಸಾಮೂಹಿಕ ದೌರ್ಜನ್ಯವಾಗಿದೆ. ಮಾತ್ರವಲ್ಲ ಅವರನ್ನು ಸಾಮಾಜಿಕವಾಗಿ ಅಪಮಾನಿಸುವ ಮತ್ತು ಅವರನ್ನು ಅಪಾಯಕ್ಕೆ ನೂಕುವ ಒಂದು ಜಾತಿ ದೌರ್ಜನ್ಯವಾಗಿ ಬಹಳಷ್ಟು ಕಡೆ ಆಚರಣೆಯಲ್ಲಿದೆ. ಸಿಡಿಯಾಡುವ ಮಹಿಳೆಯರನ್ನು ಕೆಲವು ದಿನಗಳ ಕಾಲ ಉಪವಾಸವಿರುವಂತೆ ಮಾಡಿ, ಅವರ ಬೆನ್ನಿಗೆ ಉಕ್ಕಿನ ಕೊಕ್ಕೆಯನ್ನು ಹಾಕಿ 18–20 ಅಡಿಗಳ ಮೇಲೆ ಸಿಡಿಗಂಬದ ತುದಿಯಲ್ಲಿ ನೇತಾಡುವಂತೆ ಮಾಡಲಾಗುತ್ತದೆ.

ಇತ್ತೀಚೆಗೆ ತಾನೆ ಯಡಿಯೂರಪ್ಪನವರ ನೇತೃತ್ವದ ರಾಜ್ಯ ಸರಕಾರವು ಅಪಾಯಕಾರಿ, ಅಮಾನವೀಯ ಮೌಢ್ಯಗಳ ಆಚರಣೆಯನ್ನು ನಿಷೇಧಿಸುವ ಕಾಯ್ದೆಗೆ ನಿಯಮಗಳನ್ನು ರೂಪಿಸಿ, ಅದನ್ನು ಜಾರಿಗೊಳಿಸುವಂತೆ ಆದೇಶ ಹೊರಡಿಸಿದೆ. ಈ ಕಾಯ್ದೆ ಪ್ರಕಾರ ಸಿಡಿ ಆಚರಣೆಯು ನಿಷೇಧಿಸಲ್ಪಟ್ಟಿದೆ. ಅದೊಂದು ಶಿಕ್ಷಾರ್ಹ ಅಪರಾಧ. ಸಿಡಿ ಆಚರಣೆಗೆ ಬೆಂಬಲ ಕೊಡುವುದು ಸಹ ಅಪರಾಧ.

ಈ ಹಿನ್ನೆಲೆಯಲ್ಲಿ ದಲಿತ ಹಕ್ಕುಗಳ ಸಮಿತಿ, ಕರ್ನಾಟಕ., ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ, ಭಾರತ ಜ್ಞಾನ ವಿಜ್ಞಾನ ಸಮಿತಿ, ಕರ್ನಾಟಕ, ಮುಂತಾದ ಸಂಘಟನೆಗಳ ಮುಖಂಡರುಗಳ ನಿಯೋಗವು ಫೆಬ್ರವರಿ 11, 2020 ರಂದು ಹೊನ್ನಾಳಿ ವಿಧಾನ ಸಭಾ ಕ್ಷೇತ್ರದ ನ್ಯಾಮತಿ ತಾಲ್ಲೂಕಿನ ಕೆಂಚಿಕೊಪ್ಪ ಗ್ರಾಮಕ್ಕೆ ಭೇಟಿ ನೀಡಿ ಜನವರಿ –28, 2020 ರಂದು ಧಾರ್ಮಿಕ ಸಿಡಿ ಆಚರಣೆಯಲ್ಲಿ ಪಾಲ್ಗೊಂಡ ದಲಿತ ಮಹಿಳೆಯರು ಮತ್ತು ಕುಟುಂಬ ಸದಸ್ಯರು ಹಾಗೂ ದಲಿತ ಕೇರಿಯ ಜನರೊಂದಿಗೆ ಮಾತುಕತೆ ನಡೆಸಿ ದಲಿತ ಕುಟುಂಬಗಳ ಸಮಸ್ಯೆಯನ್ನು ಹಾಗೂ ಒಟ್ಟು ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿತು. ಹಾಗೂ ಗ್ರಾಮದಲ್ಲಿ ಸರ್ಕಾರದ ಸೌಲಭ್ಯ ಮತ್ತು ಯೋಜನೆಗಳ ಫಲ ದೊರೆಯದೇ ಕಡುಬಡತನದಲ್ಲಿ ನರಳುತ್ತಾ, ಕೂಲಿಗಾಗಿ ಸವರ್ಣೀಯರನ್ನೇ ಅವಲಂಬಿಸಿರುವ ದಲಿತ ಕುಟುಂಬಗಳು ಸವರ್ಣೀಯರ ಪರೋಕ್ಷ ಒತ್ತಡವನ್ನು ಎದುರಿಸಲು ಸಾಧ್ಯವಾಗದೇ ಜನವರಿ 28 ರಂದು ಧಾರ್ಮಿಕ ಸಿಡಿ ಆಚರಣೆಯಲ್ಲಿ ಭಾಗಿಯಾಗಿದ್ದಾರೆ ಎಂಬ ಅಭಿಪ್ರಾಯಕ್ಕೆ ಬಂದಿತು. ಕೆಂಚಿಕೊಪ್ಪ ಪ್ರಕರಣದಲ್ಲಿ ದಲಿತ ಮಹಿಳೆಯರಿಗೆ ಬೆನ್ನಿಗೆ ಕೊಕ್ಕೆಯನ್ನು ಸಿಕ್ಕಿಸಿಲ್ಲದಿದ್ದರೂ ಸಹ ಮೂರು ದಿನಗಳ ಕಾಲ ದಲಿತ ಮಹಿಳೆಯರನ್ನು ಉಪವಾಸವಿರಿಸಿ, ಹಬ್ಬದಂದು ಸಿಡಿ ಕಂಬದ ತುದಿಗೆ ಕಟ್ಟಿ ಸುಮಾರು ಇಪ್ಪತ್ತು ಅಡಿಗೂ ಹೆಚ್ಚು ಎತ್ತರದಲ್ಲಿ ತೂಗಿಸಲಾಗಿದೆ.

ಗ್ರಾಮದಲ್ಲಿನ ದಲಿತರಲ್ಲಿ ಆರ್ಥಿಕ ಸ್ವಾವಲಂಬನೆಯಿಲ್ಲ. ಉದ್ಯೋಗಾಕಾಂಕ್ಷಿಗಳು

ಆರ್. ರಾಮಕೃಷ್ಣ

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಉದ್ಯೋಗ ಮಾಡಲು ಸಿದ್ಧವಿದ್ದರೂ ಅವರಿಗೆ ಈ ಯೋಜನೆಯಡಿ ಉದ್ಯೋಗ ದೊರೆಯುತ್ತಿಲ್ಲ. ಈ ದಲಿತರ ನಡುವೆ ಸ್ವಂತ ಭೂಮಿ ಇರುವವರು ಕಡಿಮೆ. ಇದ್ದ ಕೆಲವರಿಗೂ ಅರ್ಧ ಎಕರೆ ಒಂದು ಎಕರೆ ತುಂಡು ಭೂಮಿ ಮಾತ್ರ ಇದೆ. ದಲಿತರು ಜೀವನೋಪಾಯಕ್ಕಾಗಿ ಊರಿನ ಸವರ್ಣೀಯರ ಮೇಲೆ ಅವಲಂಬಿಸಬೇಕಾಗಿದೆ. 1978 ರಲ್ಲಿ ಈ ಗ್ರಾಮದ ಕೆಲ ದಲಿತ ಕುಟುಂಬಗಳಿಗೆ ಸರ್ಕಾರದಿಂದ ಭೂಮಿ ಮಂಜೂರಾಗಿದ್ದರೂ ಸಹ, ಅವೇ ದಲಿತ ಕುಟುಂಬಗಳು ಅಂದಿನಿಂದ ಇಂದಿನವರೆಗೆ ಈ ಭೂಮಿಯಲ್ಲಿ ಸಾಗುವಳಿ ಮಾಡುತ್ತಾ ಬರುತ್ತಿದ್ದರೂ ಸಹ ಇತ್ತೀಚೆಗೆ ಈ ಸರಕಾರದ ಇಲಾಖೆಯಲ್ಲಿ ಅವರ ಜಮೀನಿಗೆ ಪಹಣಿ ದಾಖಲೆಗಳು ಸಿಗುತ್ತಿಲ್ಲ. ಕಾರಣ ಏನೆಂದು ತಿಳಿಯದೇ ಅವರು ಆತಂಕಕ್ಕೆ ಒಳಗಾಗಿದ್ದಾರೆ.

ಬಲಾಢ್ಯರಾದ ಸವರ್ಣೀಯರ ಒತ್ತಡದಿಂದಾಗಿ ಗ್ರಾಮದಲ್ಲಿ ದಲಿತರಿಗೆ ಕ್ಷೌರದ ಸೇವೆ ದೊರೆಯುವುದಿಲ್ಲ. ವಿನಂತಿಸಿದರೂ ಈ ಸೇವೆಯನ್ನು ನಿರಾಕರಿಸಲಾಗುತ್ತದೆ. ವಯಸ್ಸಾದವರೂ, ರೋಗಿಗಳೂ ಸಹ ಕ್ಷೌರಕ್ಕೆ ದೂರದ ನ್ಯಾಮತಿಗೆ ಹೋಗಬೇಕಾಗಿದೆ. ಊರಿನ ದೇವಾಲಯಕ್ಕೆ ದಲಿತರಿಗೆ ಪ್ರವೇಶವಿಲ್ಲ. ಇಂತಹ ಪರಿಸ್ಥಿತಿಯಲ್ಲಿ ದಲಿತರು ಸಾಂಪ್ರದಾಯಿಕವಾದ ಧಾರ್ಮಿಕ ಸಿಡಿ ಮುಂತಾದ ಆಚರಣೆಗಳನ್ನು ಮುಂದುವರಿಸಬೇಕೆಂಬ ಸವರ್ಣೀಯರ ಪ್ರತ್ಯಕ್ಷ ಮತ್ತು ಪರೋಕ್ಷ ಒತ್ತಡಗಳಿಗೆ ಒಳಗಾಗಿದ್ದಾರೆ ಎಂದು ನಿಯೋಗವು ಕಂಡುಕೊಂಡಿತು.

ಈ ಒಟ್ಟು ಮಾಹಿತಿಗಳನ್ನು ಪಡೆದ ನಂತರ ನಿಯೋಗವು ಸಂಜೆ ದಾವಣಗೆರೆಯ ಹೆಚ್ಚುವರಿ ಜಿಲ್ಲಾಧಿಕಾರಿಗಳಾದ ಶ್ರೀ ಪೂಜಾರ ವೀರಮಲ್ಲಪ್ಪ ಅವರನ್ನು ಕಂಡು ಈ ಪ್ರಕರಣಗಳ ಸಂಬಂಧ ಚರ್ಚಿಸಿ, ನಾಲ್ಕು ಲಿಖಿತ ಮನವಿ ಪತ್ರಗಳನ್ನು ಸಲ್ಲಿಸಿ, ವಿವಿಧ ಪರಿಹಾರ ಕ್ರಮಗಳಿಗೆ ಒತ್ತಾಯಿಸಿತು.

ಜಿಲ್ಲಾಡಳಿತವು ಧಾರ್ಮಿಕ ಸಿಡಿ ಆಚರಣೆಯನ್ನು ತಡೆಯುವುದರ ಜೊತೆಗೆ ಕೆಂಚಿಕೊಪ್ಪ ಗ್ರಾಮದ ದಲಿತರಿಗೆ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೂಡಲೇ ಉದ್ಯೋಗವನ್ನು ಒದಗಿಸಬೇಕೆಂದು, ಭೂಮಿಯಿಲ್ಲದ ಈ ದಲಿತರಿಗೆ ಅಗತ್ಯ ಕೃಷಿ ಭೂಮಿಯನ್ನು ಮಂಜೂರು ಮಾಡಬೇಕೆಂದು, 1978 ರಲ್ಲಿ ಜಮೀನು ಮಂಜೂರಾತಿ ಪಡೆದಿದ್ದರೂ ಸಹ ಇತ್ತೀಚೆಗೆ ಪಹಣಿ ದಾಖಲೆ ದೊರೆಯದೇ ಕಂಗಾಲಾಗಿರುವ ಗಂಗಪ್ಪ ಮತ್ತು ದಲಿತ ಕುಟುಂಬದ ಸಮಸ್ಯೆಯನ್ನು ಬಗೆಹರಿಸಬೇಕೆಂದು, ಅದರ ಜೊತೆಗೆ ಗ್ರಾಮದಲ್ಲಿ ದಲಿತರಿಗೆ ಕ್ಷೌರದ ಸೇವೆ ದೊರೆಯುವಂತೆ ಹಾಗೂ ಗ್ರಾಮದ ದೇವಾಲಯಕ್ಕೆ ದಲಿತರು ಪ್ರವೇಶ ಮಾಡುವುದಕ್ಕೆ ಹಾಗೂ ಅಸ್ಪೃಶ್ಯತೆಯ ಆಚರಣೆಯನ್ನು ನಿವಾರಿಸುವುದಕ್ಕೆ ಪೂರಕವಾಗಿ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿತು.

ಜನವರಿ 28, 2020 ರಂದು ದಾವಣಗೆರೆ ಜಿಲ್ಲೆಯ ಹೊನ್ನಾಳಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ 'ಕೆಂಚಿಕೊಪ್ಪ' ಗ್ರಾಮದಲ್ಲಿ ಧಾರ್ಮಿಕ ಸಿಡಿ ಆಚರಣೆ ನಡೆದ ಸಂಬಂಧ ವಿವಿಧ ಜನಪರ ಸಂಘಟನೆಗಳ ನಿಯೋಗವು ಫೆಬ್ರವರಿ 11, 2020 ರಂದು ಕೆಂಚಿಕೊಪ್ಪ ಗ್ರಾಮಕ್ಕೆ ಭೇಟಿ ನೀಡಿ ಪರಿಸ್ಥಿತಿಯನ್ನು ಅವಲೋಕಿಸಿತು. ಹಾಗೂ ದಾವಣಗೆರೆ ಜಿಲ್ಲಾಧಿಕಾರಿಗಳನ್ನು ಕಂಡು ಗ್ರಾಮದಲ್ಲಿ ಸಿಡಿ ಆಚರಣೆಗೆ ಕುಮ್ಮಕ್ಕು ನೀಡಿರುವ ಶಾಸಕ ರೇಣುಕಾಚಾರ್ಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಹಾಗೂ ಕೆಂಚಿಕೊಪ್ಪ ಗ್ರಾಮದಲ್ಲಿ ಸಿಡಿ ಮುಂತಾದ ಮೌಢ್ಯಾಚರಣೆ ಹಾಗೂ ಗ್ರಾಮದಲ್ಲಿ ಇಂದಿಗೂ ಜೀವಂತ ಇರುವ ಅಸ್ಪೃಶ್ಯತೆಯ ಆಚರಣೆಗಳ ನಿವಾರಣೆಗೆ ಜಿಲ್ಲಾಡಳಿತ ತುರ್ತು ಕ್ರಮ ಕೈಗೊಂಡು ದಲಿತರ ಸಬಲೀಕರಣಕ್ಕೆ ಮುಂದಾಗಬೇಕೆಂದು ಒತ್ತಾಯಿಸಿತು.



ದಲಿತರ ಸಮಸ್ಯೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿದ ಮಾನ್ಯ ಜಿಲ್ಲಾಧಿಕಾರಿಗಳು ತಕ್ಷಣವೇ ನ್ಯಾಮತಿ ತಹಸೀಲ್ದಾರರನ್ನು ಸಂಪರ್ಕಿಸಿ, ಸಂಬಂಧಿಸಿದ ಅಧಿಕಾರಿಗಳೊಂದಿಗೆ ತತ್‌ಕ್ಷಣವೇ ಗ್ರಾಮಕ್ಕೆ ಭೇಟಿ ನೀಡಿ, ಜನವರಿ 28, 2020 ರಂದು ನಡೆದ ಸಿಡಿ ಆಚರಣೆಯ ಸಂಬಂಧ ಅಗತ್ಯ ಕಾನೂನು ಕ್ರಮ ಕೈಗೊಳ್ಳಬೇಕೆಂದೂ, ಗ್ರಾಮದಲ್ಲಿ ಅಗತ್ಯವುಳ್ಳವರಿಗೆ ಉದ್ಯೋಗ ಖಾತ್ರಿ ಯೋಜನೆಯನ್ನು ಒದಗಿಸುವ ಬಗೆಗೆ, ದಲಿತರ ಜಮೀನಿಗೆ ಇತ್ತೀಚೆಗೆ ಪಹಣಿ ದಾಖಲೆ ದೊರೆಯದ ಬಗೆಗೆ ಪರಿಶೀಲನೆ ನಡೆಸಿ ಕಾರಣ ಪತ್ತೆ ಹಚ್ಚಿ ಸಮಸ್ಯೆ ಬಗೆಹರಿಸಬೇಕೆಂದು ಆದೇಶಿಸಿದರು.

ಇದಲ್ಲದೇ ಕೆಂಚಿಕೊಪ್ಪದಲ್ಲಿ ದಲಿತರಿಗೆ ಕ್ಷೌರದ ಸೇವೆ ದೊರೆಯುಂತಾಗಲೂ ಮತ್ತು ದಲಿತರಿಗೆ ದೇವಸ್ಥಾನ ಪ್ರವೇಶವನ್ನು ನಿರಾಕರಿಸದಂತೆ ಕ್ರಮವಹಿಸಬೇಕೆಂದು ಆದೇಶಿಸಿದರು. ಹಾಗೂ ಈ ವಿವಿಧ ಕ್ರಮಗಳ ಬಗೆಗೆ ತಹಸೀಲ್ದಾರರು ಕ್ರಮವಹಿಸಿ, ತಮಗೆ ಕಾಲಮಿತಿಯಲ್ಲಿ ವರದಿ ಮಾಡಬೇಕೆಂದೂ ಸಹ ಸೂಚಿಸಿದರು. ಭೂಮಿ ಇಲ್ಲದ ದಲಿತರಿಗೆ ಭೂಮಿ ಮಂಜೂರು ಮಾಡುವ ಬಗೆಗೆ ಸಹಾನುಭೂತಿಯಿಂದ ಪರಿಶೀಲಿಸುವುದಾಗಿಯೂ ಭರವಸೆ ನೀಡಿದರು.

ನಿಯೋಗವು ಜಿಲ್ಲೆಯ ನಾನಾ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ಸದ್ಯದಲ್ಲಿ ಊರ ಹಬ್ಬಗಳ ಸಂದರ್ಭದಲ್ಲಿ ಎಲ್ಲೆಲ್ಲಿ ಸಿಡಿ ಆಚರಣೆಗಳು ನಡೆಯುವ ಸಾಧ್ಯತೆ ಇವೆ ಎಂಬ ಪಟ್ಟಿಯನ್ನು ಕೊಟ್ಟು ಅಲ್ಲಿ ಸಿಡಿ ಆಚರಣೆ ನಡೆಯದಂತೆ ಜಿಲ್ಲಾಡಳಿತವು ಜನಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡು ಆಚರಣೆಯನ್ನು ತಡೆಯಬೇಕೆಂದು ಒತ್ತಾಯಿಸಿತು. ಈ ಸಂಬಂಧವೂ ಜಿಲ್ಲಾಧಿಕಾರಿಗಳು ಅಗತ್ಯ ಕ್ರಮಕೈಗೊಳ್ಳುವುದಾಗಿ ಭರವಸೆ ನೀಡಿದರು.

ಕೆಂಚಿಕೊಪ್ಪ ಗ್ರಾಮದಲ್ಲಿ ಮೌಢ್ಯ ಪ್ರತಿಬಂಧಕ ಕಾಯ್ದೆಯನ್ನು ಉಲ್ಲಂಘಿಸಿ ಸಿಡಿ ಆಚರಣೆಗೆ ಚಾಲನೆ ನೀಡುವ ಮೂಲಕ ನಿಷೇಧಿತ ಮೌಢ್ಯಾಚರಣೆಗೆ ಕುಮ್ಮಕ್ಕು ನೀಡಿರುವ ಹೊನ್ನಾಳಿ ಕ್ಷೇತ್ರದ ಶಾಸಕ ರೇಣುಕಾಚಾರ್ಯ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ರಾಜ್ಯ ವಿಧಾನ ಸಭೆಯ ಸ್ಪೀಕರ್‌ರವರು ಹಾಗೂ ರಾಜ್ಯದ ರಾಜ್ಯಪಾಲರಿಗೆ ಮನವಿ ಮಾಡಿ, ಜಿಲ್ಲಾಧಿಕಾರಿಗಳ ಮೂಲಕ ಮನವಿ ಪತ್ರವನ್ನು ಸಲ್ಲಿಸಲಾಯಿತು. ಈ ಮನವಿ ಪತ್ರಗಳನ್ನು ಮುಂದಿನ ಕ್ರಮಕ್ಕಾಗಿ ಸಂಬಂಧಿಸಿದವರಿಗೆ ರವಾನಿಸುವ ಏರ್ಪಾಟು ಮಾಡುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು.


ಈ ಒಟ್ಟು ಪ್ರಕರಣದಲ್ಲಿ ಆಗಿರುವ ಪ್ರಗತಿಯನ್ನು ಪರಿಶೀಲಿಸಲು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಂತ್ರಸ್ತರು ಹಾಗೂ ಜನಪರ ಸಂಘಟನೆಗಳ ಪ್ರತಿನಿಧಿಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳ ಸಭೆಯನ್ನು ಕರೆಯಬೇಕೆಂದು ಸಹ ನಿಯೋಗವು ಜಿಲ್ಲಾಧಿಕಾರಿಗಳನ್ನು ಒತ್ತಾಯಿಸಿತು.

ದಲಿತ ಹಕ್ಕುಗಳ ಸಮಿತಿ, ಕರ್ನಾಟಕದ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿ, ರಾಜ್ಯ ಸಮಿತಿಯ ಸದಸ್ಯರಾದ ಶರಣಪ್ಪ ವಾಲಿ, ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ರಾಜ್ಯ ಅಧ್ಯಕ್ಷರೂ ಹಾಗೂ ಜಿಲ್ಲಾ ಅಧ್ಯಕ್ಷರೂ ಆದ ರೇಣುಕಮ್ಮ ಟಿ.ವಿ., ಭಾರತ ಜ್ಞಾನ ವಿಜ್ಞಾನ ಸಮಿತಿ, ಕರ್ನಾಟಕದ ರಾಜ್ಯ ಜಂಟಿ ಕಾರ್ಯದರ್ಶಿ ಆರ್. ರಾಮಕೃಷ್ಣ, ಕರ್ನಾಟಕ ಪ್ರಾಂತ ರೈತ ಸಂಘದ ದಾವಣಗೆರೆ ಜಿಲ್ಲಾ ಮುಖಂಡರೂ, ವಕೀಲರೂ ಆದ ಶ್ರೀನಿವಾಸ, ಕರ್ನಾಟಕ ರಾಜ್ಯ ಔಷಧ ಮಾರಾಟ ಪ್ರತಿನಿಧಿಗಳ ಸಂಘಟನೆಯ ದಾವಣಗೆರೆ ಜಿಲ್ಲಾ ಮುಖಂಡರಾದ ಆನಂದ ರಾಜ್ ಕೆ.ಎಚ್. ಈ ನಿಯೋಗದಲ್ಲಿದ್ದರು.



ಫೆ. 15ರಂದು ಕ್ರಿಯಾ ಪ್ರಕಟಿಸಿರುವ 'ಜೆ.ಎನ್.ಯು ಅಂಗಳದಲ್ಲಿ ರಾಷ್ಟ್ರೀಯವಾದದ ಕ್ಲಾಸುಗಳು' ಪುಸ್ತಕದ ಬಿಡುಗಡೆಯನ್ನು ಜೆ.ಎನ್.ಯು ಕನ್ನಡ ವಿಭಾಗದ ಪ್ರೊ. ಪುರುಷೋತ್ತಮ ಬಿಳಿಮಲೆ ಬಿಡುಗಡೆ ಮಾಡಲಿದ್ದಾರೆ. ಈ ಸಂದರ್ಭದಲ್ಲಿ ಪುಸ್ತಕದ ಪ್ರಸ್ತಾವನೆಯಿಂದ ಆಯ್ದ ಭಾಗ ಮತ್ತು ರಕ್ಷಾ ಪುಟದ ಭಾಗಗಳು.

ರಾಷ್ಟ್ರೀಯವಾದದ ಅರ್ಥ ಹುಡುಕುತ್ತಾ



ಸರಕಾರವೊಂದು ತನ್ನನ್ನು 'ರಾಷ್ಟ್ರ'ದೊಂದಿಗೆ ಸಮೀಕರಿಸಿಕೊಂಡು, ತನ್ನ ಟೀಕಾಕಾರರನ್ನು, ಭಿನ್ನಮತೀಯರನ್ನು 'ರಾಷ್ಟ್ರ-ವಿರೋಧಿ' ಎಂದು ಕರೆಯುವುದು ಜರೆಯುವುದು ಜಗತ್ತಿನಲ್ಲಾಗಲಿ ಭಾರತದಲ್ಲಾಗಲಿ ಹೊಸದೇನಲ್ಲ. ಅಂತಹವರ ಮೇಲೆ 'ದೇಶದ್ರೋಹ'ದ ಕೇಸು ದಾಖಲಿಸಿ ಬಂಧಿಸುವುದೂ ಹೊಸದಲ್ಲ. ಆದರೆ ಫೆಬ್ರವರಿ 9, 2016ರಂದು ಜವಾಹರಲಾಲ ನೆಹರೂ ವಿಶ್ವವಿದ್ಯಾಲಯದ (ಜೆ.ಎನ್.ಯು) ವಿದ್ಯಾರ್ಥಿ ಸಂಘದ ಚುನಾಯಿತ ಅಧ್ಯಕ್ಷ ಕನ್ಹಯ್ಯಾ ಕುಮಾರ್ ನನ್ನು ಮತ್ತಿತರ ವಿದ್ಯಾರ್ಥಿಗಳನ್ನು 'ದೇಶದ್ರೋಹ'ದ ಕೇಸು ಹಾಕಿ ಬಂಧಿಸಿದ್ದು ಒಂದು ಹೊಸ ಟ್ರೆಂಡಿನ ಆರಂಭವಾಗಿತ್ತು. ದೇಶವ್ಯಾಪಿಯಾಗಿ ಉನ್ನತ ಶಿಕ್ಷಣದ ಸಾರ್ವಜನಿಕ ಶಿಕ್ಷಣ ಸಂಸ್ಥೆಗಳ ವೆಚ್ಚ ಏರಿಸುವ, ಅದನ್ನು ಬಡ ವಿದ್ಯಾರ್ಥಿಗಳಿಗೆ ನಿಲುಕದಂತೆ ಮಾಡುವ, ಅಲ್ಲಿನ ಕ್ಯಾಂಪಸ್ ಪ್ರಜಾಪ್ರಭುತ್ವವನ್ನು ಕೊನೆಗೊಳಿಸುವ ನೀತಿಗಳ ಜಾರಿ, ಅದನ್ನು ವಿರೋಧಿಸಿದ ಅದಕ್ಕೆ ಪ್ರತಿರೋಧ ಒಡ್ಡಿದ ವಿದ್ಯಾರ್ಥಿ ನಾಯಕರು ಹಾಗೂ ವಿದ್ಯಾರ್ಥಿಗಳ ಮೇಲೆ ಮತ್ತು ಜತೆಗೆ ಎಲ್ಲಾ ರಾಜಕೀಯ ವಿರೋಧಿಗಳ ಮೇಲೆ 'ದೇಶ-ವಿರೋಧಿ', 'ದೇಶ-ದ್ರೋಹಿ' ಎಂದು ವ್ಯಾಪಕವಾಗಿ ಅಪಪ್ರಚಾರ ಮಾಡುವುದು, ಖಾಸಗಿ ಸಶಸ್ತ್ರ ಗ್ಯಾಂಗುಗಳು ಅವರ ಮೇಲೆ ದಾಳಿ-ಹಿಂಸಾಚಾರಗಳನ್ನು ಎಸಗುವುದು ಈ ಹೊಸ ಟ್ರೆಂಡಿನ ಮುಖ್ಯ ಗುಣಗಳಾಗಿದ್ದವು. ಜೆ.ಎನ್.ಯು ಮತ್ತಿತರ ಉನ್ನತ ಶಿಕ್ಷಣಗಳ ಮೇಲೆ ಡಿಸೆಂಬರ್ 2019ರಿಂದ ನಡೆದ ಇನ್ನೊಂದು ಸುತ್ತಿನ ದಾಳಿ ಇನ್ನಷ್ಟು ತೀವ್ರವಾಗಿದ್ದು, ಇದು ತಾರಕಕ್ಕೆ ಮುಟ್ಟಿದೆ.

2016ರಿಂದಲೂ ಇದಕ್ಕೆ ಪ್ರತಿರೋಧವೂ ಬೆಳೆಯುತ್ತಾ ಬಂದಿದೆ ಮತ್ತು ಅದು ಹೆಚ್ಚೆಚ್ಚು ವ್ಯಾಪ್ತಿ ಹಾಗೂ ಆಳಗಳನ್ನು ಪಡೆಯುತ್ತಿದೆ. ಈ ಟ್ರೆಂಡ್ ಒಂದು ಹೊಸ ಸಕಾರಾತ್ಮಕ ಸಂಗತಿಯನ್ನು ಹುಟ್ಟು ಹಾಕಿತ್ತು. ದೇಶ/ರಾಷ್ಟ್ರವೆಂದರೇನು? ರಾಷ್ಟ್ರವಾದ ಎಂದರೇನು? ರಾಷ್ಟ್ರವಾದದ ಹಲವು ವಿಧಗಳಿವೆಯೇ? ಇದ್ದರೆ 'ಸರಿಯಾದ' ರಾಷ್ಟ್ರವಾದವನ್ನು ನಿರ್ಧರಿಸುವವರು ಯಾರು? ಒಂದು ಪ್ರದೇಶದ ಅಥವಾ ಒಂದು ಜನವಿಭಾಗದ ಜನರು ತಮ್ಮ ಆಶೋತ್ತರಗಳು ಈಡೇರದಿದ್ದಾಗ ಅಥವಾ ದಮನಕ್ಕೊಳಗಾದಾಗ ಅವರು ಆಳುವವರ ಪ್ರಭುತ್ವದ ಅಧಿಕೃತ 'ರಾಷ್ಟ್ರವಾದ'ವನ್ನು ಪ್ರಶ್ನಿಸುವುದು, ಅದಕ್ಕೆ ಬದಲಿ ಪ್ರಸ್ತಾವಿಸುವುದು ತಪ್ಪೆ? 'ದೇಶದ್ರೋಹ'ವೇ? 2016ರ ಜೆ.ಎನ್.ಯು ಮೇಲೆ ದಾಳಿಯ ಸಂದರ್ಭದಲ್ಲೇ ಈ ಪ್ರಶ್ನೆಗಳು ಜೆ.ಎನ್.ಯು ನ ಒಳಗೂ ಹೊರಗೂ ತೀವ್ರ ಚರ್ಚೆಗೆ ಒಳಗಾದವು. ಇದಕ್ಕೆ ಉತ್ತರ ಹುಡುಕುವ ಭಾಗವಾಗಿ ಜೆ.ಎನ್.ಯು ಅಧ್ಯಾಪಕರ ಸಂಘ ಜೆ.ಎನ್.ಯು ಆಡಳಿತ ಬ್ಲಾಕಿನ ಅಂಗಳದಲ್ಲಿ ರಾಷ್ಟ್ರವಾದದ ಕುರಿತ ವಿವಿಧ ಜ್ಞಾನಕ್ಷೇತ್ರಗಳ (ಇತಿಹಾಸ, ರಾಜಕೀಯಶಾಸ್ತ್ರ, ಸಮಾಜಶಾಸ್ತ್ರ, ಭಾಷಾಶಾಸ್ತ್ರ ಇತ್ಯಾದಿ) ಹಲವು ಪರಿಣತರಿಂದ ಉಪನ್ಯಾಸ ಮಾಲೆ ಏರ್ಪಡಿಸಿತು. ಸುಮಾರು ಒಂದು ತಿಂಗಳ ಕಾಲ ನಡೆದ 24 ಉಪನ್ಯಾಸಗಳಲ್ಲಿ ರೊಮಿಲಾ ಥಾಪರ್, ಪ್ರಭಾತ್ ಪಟ್ನಾಯಕ್, ಗೋಪಾಲ ಗುರು ರಂತಹ ಪ್ರಸಿದ್ಧ ಜೆ.ಎನ್.ಯು ಪ್ರಾಧ್ಯಾಪಕರಲ್ಲದೆ, ಅಚಿನ್ ವನೈಕ್, ಜೈರಸ್ ಬಾನಾಜಿ ರಂತಹ ದೇಶ/ವಿದೇಶಗಳ ಪ್ರಸಿದ್ಧ ವಿ.ವಿಗಳ ಪರಿಣತರೂ ಉಪನ್ಯಾಸ ನೀಡಿದರು. ಇದು 2016ರಲ್ಲೇ ಇಂಗ್ಲೀಷಿನಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾಯಿತು.

ಕ್ರಿಯಾಕ್ಕೆ ಆಗಿನಿಂದಲೂ ಇದನ್ನು ಕನ್ನಡಕ್ಕೆ ತಂದು ರಾಷ್ಟ್ರವಾದದ ಬಗೆಗಿನ ಗಂಭೀರ ಚರ್ಚೆಯನ್ನು ಕರ್ನಾಟಕದಲ್ಲೂ ಆರಂಭಿಸುವ ಕನಸಿತ್ತು. ನಮ್ಮ ಕೋರಿಕೆಯ ಮೇರೆಗೆ ಬಿ.ಶ್ರೀಪಾದ ಭಟ್ ಅವರು ಸಮರ್ಥವಾಗಿ ಅನುವಾದಿಸುವ ಮೂಲಕ ಈ ಕನಸನ್ನು ನನಸು ಮಾಡಿದ್ದಾರೆ. ಈ 24 ಉಪನ್ಯಾಸಗಳಲ್ಲಿ 14ನ್ನು ಆರಿಸಿ ಕನ್ನಡಕ್ಕೆ ತರಲಾಗಿದೆ. ಮೂಲ ಸಂಪಾದಕರಾದ ಪ್ರೊ. ಜಾನಕಿ ನಾಯರ್ ಅವರ ಒಟ್ಟು ಚರ್ಚೆಯನ್ನು ಸಂಕ್ಷಿಪ್ತವಾಗಿ ತಿಳಿಸುವ ಮುನ್ನುಡಿಯನ್ನು ಕೊಡಲಾಗಿದೆ. ಅನುವಾದಕರು ಕಳೆದ ಎರಡು ವರ್ಷಗಳ ಬೆಳವಣಿಗೆಗಳ ಹಿನ್ನೆಲೆಯಲ್ಲಿ ರಾಷ್ಟ್ರವಾದದ ಬಗೆಗಿನ ಚರ್ಚೆಯ ಹೆಚ್ಚಿದ ಪ್ರಸ್ತುತತೆ ಕುರಿತು ಬರೆದಿದ್ದಾರೆ.

ರಾಷ್ಟ್ರವಾದದ ಬಗೆಗಿನ ವಿವಿಧ ಅಭಿಪ್ರಾಯಗಳ, ಹಲವು ಮಗ್ಗುಲುಗಳಿಂದ ನೋಡುವ, ಹಲವು ಆಯಾಮಗಳನ್ನು ಪ್ರಸ್ತುತಪಡಿಸುವ ಈ ಪುಸ್ತಕ, ಕರ್ನಾಟಕದ ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕರಿಗೆ ಬಹಳ ಉಪಯೋಗಿ ಆಕರ ಗ್ರಂಥವಾಗಬಲ್ಲದು. ರಾಷ್ಟ್ರವಾದದ ಬಗೆಗಿನ ಚರ್ಚೆಯ ಕುರಿತು ಆಸಕ್ತಿ ಇರುವ ಎಲ್ಲರಿಗೂ ಇದೊಂದು ಉತ್ತಮ ಕೈಪಿಡಿ. ಕರ್ನಾಟಕದಲ್ಲಿ ರಾಷ್ಟ್ರವಾದದ ಕುರಿತು ಭಿನ್ನಾಭಿಪ್ರಾಯಗಳನ್ನು ಲಾಠಿ-ಮಚ್ಚುಗಳ ಮತ್ತು ಐಪಿಸಿ ಕಲಮುಗಳ ಭಾಷೆಯಲ್ಲಿ 'ಪರಿಹರಿಸು'ವುದರಿಂದ ಗಂಭೀರ ವಾಗ್ವಾದದತ್ತ ಹೊರಳಿಸುವುದರಲ್ಲಿ ಈ ಪುಸ್ತಕ ನೆರವಾಗುವುದು ಎಂಬುದು ನಮ್ಮ ಆಶಯ.

ನಮ್ಮ ವಸಾಹತುಶಾಹಿ-ವಿರೋಧಿ ರಾಷ್ಟ್ರೀಯವಾದವು ಫ್ಯಾಸಿಸಂ ಕಾಲದಲ್ಲಿ ಉತ್ತುಂಗಕ್ಕೇರಿದ್ದ ಯುರೋಪಿನ ಮಹಾನ್-ವೈಭವೀಕರಣದ ರಾಷ್ಟ್ರೀಯವಾದಕ್ಕಿಂತ ಹಲವು ರೀತಿಗಳಲ್ಲಿ ಮೂಲಭೂತವಾಗಿ ಭಿನ್ನವಾಗಿದೆ.. ....ಸಾಮಾಜಿಕ ಒಡಂಬಡಿಕೆಯ ಆಧಾರದ ಮೇಲೆ ಒಂದಾಗಿ ದೇಶವಾಗುತ್ತಿರುವ ಜನರು ಈ ಸಾಮಾಜಿಕ ಒಡಂಬಡಿಕೆಯನ್ನು ಉಲ್ಲಂಘಿಲಾಗುತ್ತಿದೆ ಎಂದಾಗ ಅದನ್ನು ಸಹಿಸಿಕೊಳ್ಳಬೇಕು, ಸ್ವೀಕರಿಸಬೇಕು ಮತ್ತು ಆ ಹಕ್ಕನ್ನು ಗುರುತಿಸಬೇಕು. ಇದು ಭಾರತದ ಆದರ್ಶವಾಗಿತ್ತು. ಆದರೆ ಈಗ ಆಗಿಲ್ಲ, ಯಾಕೆಂದರೆ, ನಾವು



ಒಳಗೊಳ್ಳುವಿಕೆಯ, ವಸಾಹತುಶಾಹಿ ವಿರೋಧಿ, ರಾಷ್ಟ್ರೀಯವಾದದಿಂದ ಮಹಾನ್-ವೈಭವೀಕರಣದ ರಾಷ್ಟ್ರೀಯವಾದದ ಕಲ್ಪನೆಯೆಡೆಗೆ ಚಲಿಸುತ್ತಿದ್ದೇವೆ... ..ಈ ಮಹಾನ್-ವೈಭವೀಕರಣದ ರಾಷ್ಟ್ರೀಯವಾದವು ಈಗ ದೇಶವನ್ನು ಆಳುತ್ತಿರುವ ಕಾರ್ಪೋರೇಟ್ ಮತೀಯವಾದಿಗಳ ಮೈತ್ರಿಕೂಟದ ಸಿದ್ಧಾಂತವಾಗಿದೆ.

ಪ್ರಭಾತ್ ಪಟ್ನಾಯಕ್

ಭಾರತದಲ್ಲಿನ ವೈವಿಧ್ಯತೆಗಳು ಪರಸ್ಪರ ಹೇಗೆ ಸಂಬಂಧಿಸಿವೆ ಎನ್ನುವ ಪ್ರಶ್ನೆಗೆ ಉತ್ತರ ಹುಡುಕಲು ನಿರಾಕರಿಸಿದ ವಸಾಹತುಶಾಹಿ ಇತಿಹಾಸವು ಎಲ್ಲಾ ಧರ್ಮಗಳು ಏಕರೂಪಿ ಎಂದು ಚಿತ್ರಿಸಿ ಈ ವೈವಿಧ್ಯತೆಯನ್ನು ಏಕೀಕರಿಸಿದವು. ವಿವಿಧ ಧಾರ್ಮಿಕ ಪಂಥಗಳು ಸ್ವಾಯತ್ತವಾಗಿವೆ ಅಥವಾ ಒಂದು ಧರ್ಮದೊಂದಿಗೆ ಆಂಶಿಕವಾಗಿಯಷ್ಟೇ ಹೆಣೆದುಕೊಂಡಿವೆ ಎಂಬುದನ್ನು ತಿರಸ್ಕರಿಸಿ, ಎಲ್ಲವನ್ನೂ ಒಂದರೊಳಗೆ ಹೊಲಿದುಬಿಟ್ಟರು. ಸಂಘರ್ಷಗಳನ್ನು ನಾಟಕೀಯಗೊಳಿಸಿ ಅವು ಹಿಂದೂ ಧರ್ಮ ಮತ್ತು ಮುಸ್ಲಿಂ ಧರ್ಮಗಳ ನಡುವಿನ ಸಂಘರ್ಷ ಎಂದು ತಮ್ಮ ಎರಡು-ದೇಶಗಳ ಸಿದ್ಧಾಂತಕ್ಕೆ ಅನುಗುಣವಾಗಿ ಚಿತ್ರಿಸಿದರು.



ರೊಮಿಲಾ ಥಾಪರ್

ಅಂಗವಿಕಲರ ಹಾಗೂ ಪಾಲಕರ ಹೋರಾಟ.......

ಪುಟ 5 ರಿಂದ


7. ಎಲ್ಲಾ ಅಂಗವಿಕಲ ಮಕ್ಕಳನ್ನು ಶಾಲೆಗಳಲ್ಲಿ ಸೇರಿಸಲಾಗಿದಿಯೇ ಎಂದು ಖಚಿತ ಪಡಿಸಿಕೊಳ್ಳಿ, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿಯನ್ನು ಅನುಸರಿಸಲಾಗಿದಿಯೇ ಎಂದು ಖಚಿತ ಪಡಿಸಿಕೊಳ್ಳಿ, ಸೂಕ್ತವಾದ ಸ್ವರೂಪ ಮತ್ತು ವಿಧಾನಗಳನ್ನು ಬಳಸಿ ಕಲಿಸಿ. ಎಲ್ಲಾ ಕಲಿಕಾ ಸಾಮಾಗ್ರಿಗಳು ಮತ್ತು ಸಹಾಯಕ ಸಾಧನಗಳನ್ನು ಉಚಿತವಾಗಿ ಒದಗಿಸಿ.
8. ಅಂಗವಿಕಲರಿಗೆ ಉಚಿತ ಆರೋಗ್ಯ ಸೇವೆ, ಸುಲಭ ಸಾಧ್ಯವಾದ ವಿಮಾ ಯೋಜನೆಗಳು, ಪಾಲಿಸಿಗಳನ್ನು ರೂಪಿಸಿ.
9. ಭೌತಿಕ ಪರಿಸರ, ಸಾರಿಗೆ, ಮಾಹಿತಿ ಮತ್ತು ಸಂವಹನ, ಗ್ರಾಹಕ ಸರಕುಗಳು ಮತ್ತು ಎಲ್ಲಾ ಇತರೆ ಸೇವೆಗಳನ್ನು ಸಂಪೂರ್ಣವಾಗಿ ಸುಲಭ ಪ್ರವೇಶಿಸುವಂತೆ ಮಾಡಿ.
10. ಈಗ ಸರ್ಕಾರಿ ವಲಯದಲ್ಲಿರುವಂತೆ ಉದ್ಯೋಗ ಮೀಸಲಾತಿಯನ್ನು ಖಾಸಗೀ ವಲಯಕ್ಕೂ ವಿಸ್ತರಿಸಬೇಕು. ಕಟ್ಟುನಿಟ್ಟಾಗಿ ಅನುಷ್ಠಾನ ಮಾಡಬೇಕು.
11. ಅಂಗವಿಕಲ ಮಹಿಳೆಯರನ್ನು ಮದುವೆಯಾಗುವ ಕುಟುಂಬಕ್ಕೆ ನೀಡುವ ಪ್ರೋತ್ಸಾಹ ಹಣವನ್ನು ಈಗಿನ ರೂ.50,000/-ಗಳಿಂದ ರೂ.3.00 ಲಕ್ಷಗಳಿಗೆ ಹಚ್ಚಿಸಬೇಕು. ಅಂಗವಿಕಲರ ನಡುವೆ ಮದುವೆಯಾದವರಿಗೂ ಪ್ರೋತ್ಸಾಹ ಧನ ಅನ್ವಹಿಸಬೇಕು.
12. ಅಂಗವಿಕಲರಿಗೆ ಕಡ್ಡಾಯ ಉದ್ಯೋಗ ನೀಡಬೇಕು. ಅಂಗವಿಕಲತೆಯ ಆಧಾರದಲ್ಲಿ ಸರ್ಕಾರ ಉದ್ಯೋಗಗಳನ್ನು ಸೃಷ್ಟಿಸಬೇಕು.
13. ಸಂಸದರು ಹಾಗೂ ಶಾಸಕರ ಅನುದಾನದಡಿಯಲ್ಲಿ ಅಂಗವಿಕಲರಿಗೆ ಮೀಸಲಿರಿಸಿದ ರೂ.20/- ಲಕ್ಷಗಳ ಹಣವನ್ನು ಅಂಗವಿಕಲರಿಗಾಗಿ ಖರ್ಚು ಮಾಡಬೇಕು.
14. ಅಂಗವಿಕಲರ ಸಾಲ ಸೌಲಭ್ಯಗಳನ್ನು ಹೆಚ್ಚಿಸಲು ಕ್ರಮವಹಿಸಬೇಕು. ಈಗಿರುವ ಆಧಾರ ಸಾಲ ಸೌಲಭ್ಯವನ್ನು ತಾಲೂಕಿಗೆ 10ಕ್ಕೆ ಹೆಚ್ಚಿಸಬೇಕು. ಮತ್ತು ಈಗಿರುವ ಮೊತ್ತ ರೂ.1.00 ಲಕ್ಷದಿಂದ ರೂ.2.00 ಲಕ್ಷಕ್ಕೆ ಹೆಚ್ಚಿಸಬೇಕು.
15. ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳು, ಪಂಚಾಯಿತಿ ಮತ್ತು ಪೌರಾಡಳಿತ ಸಂಸ್ಥೆಗಳು ಶೇಕಡ 5%ರಷ್ಟು ಹಣವನ್ನು ಅಂಗವಿಕಲರಿಗಾಗಿ ವೆಚ್ಚ ಮಾಡಬೇಕು.
16. ಗ್ರಾಮ ಪಂಚಾಯ್ತಿ ಮತ್ತು ಪುರಸಭೆ, ನಗರಸಭೆಗಳಲ್ಲಿ ಬರುವ ಅಂಗವಿಕಲರ ಮನೆಗಳಿಗೆ ಅವರಿಗೆ ಮನೆ ತೆರಿಗೆ ಮತ್ತು ನೀರಿನ ತೆರಿಗೆಯಿಂದ ವಿನಾಯ್ತಿ ಅಥವಾ ರಿಯಾಯಿತಿ ಧರವನ್ನು ನಿಗದಿ, ಪಡಿಸಬೇಕು.
17. ಅಂಗವಿಕಲ ವ್ಯಕ್ತಿಗಳ ಮನೆಗಳಿಗೆ 40ಯುನಿಟ್‌ವರೆಗೆ ಉಚಿತವಾಗಿ ವಿದ್ಯುತ್ ನೀಡಬೇಕು.
18. ಅಂಗವಿಕಲರಿಗೆ ನೀಡುವ ಉಚಿತ ರಿಯಾಯಿತಿ ಬಸ್‌ಪಾಸ್‌ನ್ನು 100 ಕಿ.ಮೀ.ನ ಬದಲಾಗಿ ರಾಜ್ಯಾದ್ಯಾಂತ ವಿಸ್ತರಿಸಬೇಕು.
19. ನಿರುದ್ಯೋಗಿ ಅಂಗವಿಕಲರಿಗೆ ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ಸ್ವಯಂ ಉದ್ಯೋಗ ಕೈಗೊಳ್ಳಲು ಉಚಿತ ತರಬೇತಿ ನೀಡಬೇಕು.
20. ಸ್ವಯಂ ಉದ್ಯೋಗ ಕೈಗೊಳ್ಳಲು ರಾಜ್ಯದಲ್ಲಿರುವ ಕೆ.ಎಸ್.ಎಫ್.ಸಿ. ಜಿಲ್ಲಾ ಸಹಕಾರಿ ಬ್ಯಾಂಕಗಳು, ಹಿಂದುಳಿದ ವರ್ಗಗಳ ಬ್ಯಾಂಕ್‌ಗಳಿಂದ ಅಂಗವಿಕಲರಿಗೆ ಮೀಸಲಿರಿಸಿದ ಶೇಕಡ 5%ರಷ್ಟು ಸಾಲ ಸೌಲಭ್ಯವನ್ನು ನೀಡಲು ಆದೇಶಿಸಬೇಕು.
21. ನೂತನ ಕಾಯ್ದೆಯ ಪ್ರಕಾರ ಪ್ರಕಟಗೊಂಡಿರುವ 21 ಅಂಗವಿಕಲತೆಗಳ ಕುರಿತು ರಾಜ್ಯಾದ್ಯಾಂತ ಸಮೀಕ್ಷೆ ನಡೆಯಬೇಕು.
22. ಅಂಗವಿಕಲರ ಅಭಿವೃದ್ಧಿಗಾಗಿ ಪ್ರತ್ಯೇಕ ಸಚಿವಾಲಯ ಆಗಬೇಕು.
23. ಅಂಗವಿಕಲರ ಕ್ಷೇಮಾಭಿವೃದ್ಧಿಗಾಗಿ ಪ್ರತ್ಯೇಕ ಹಣಕಾಸು ನಿಗಮ ಸ್ಥಾಪಿಸಬೇಕು.

ಕೆ.ಎನ್.ಹರಿಲಾಲ್
ಅನು: ವಸಂತರಾಜ ಎನ್.ಕೆ.

ಕೇರಳ ಬಜೆಟ್ 2020-21

ನವ-ಉದಾರವಾದದ ವಿರುದ್ಧ ಹೋರಾಟದ ಸಾಧನ

ಕೇರಳದ 2020-21 ಎಲ್.ಡಿ.ಎಫ್ ಬಜೆಟ್ ನವ-ಉದಾರವಾದಿ ನೀತಿಗಳ ಹೋರಾಟದ ವಿರುದ್ಧ ಸಾಧನವಾಗಿದೆ. ಕೇಂದ್ರದ ಬಜೆಟ್ ಆರ್ಥಿಕಕ್ಕೆ ಚೇತರಿಕೆ ನೀಡಲು ಪೂರೈಕೆ ಭಾಗದಲ್ಲಿ ಮಧ್ಯಪ್ರವೇಶಕ್ಕೆ ಮಾತ್ರ ಗಮನ ಹರಿಸುತ್ತಾ ಕಾರ್ಪೊರೇಟ್ ಮತ್ತು ಶ್ರೀಮಂತರಿಗೆ ಪ್ರೋತ್ಸಾಹಗಳನ್ನು ನೀಡಿದೆ. ಇದಕ್ಕೆ ವ್ಯತಿರಿಕ್ತವಾಗಿ ಕೇರಳದ ಬಜೆಟ್ ಹಳೆಯ ಮತ್ತು ಹೊಸ ಕಲ್ಯಾಣ ಕ್ರಮಗಳ ಮೂಲಕ ಪ್ರಾಥಮಿಕವಾಗಿ ಬೇಡಿಕೆಯ ಭಾಗಕ್ಕೆ ಉತ್ತೇಜನೆ ನೀಡುವುದಕ್ಕೆ ಒತ್ತು ಕೊಡುತ್ತದೆ. ಸುಮಾರು 50 ಲಕ್ಷ ಜನರಿಗೆ ಕಲ್ಯಾಣ ಪೆನ್ಶನನ್ನು ರೂ. 100 ಹೆಚ್ಚಿಸಿ ರೂ. 1300 ಮಾಡಲಾಗಿದೆ.
ಕೇಂದ್ರದಿಂದ ಹೊರಿಸಲಾಗಿರುವ ಹಣಕಾಸು ಒತ್ತಡದಿಂದಾಗಿ ವಾರ್ಷಿಕ ಯೋಜನೆ (2020-21)ಯಲ್ಲಿ 3000 ಕೋಟಿ ರೂ. ನಷ್ಟು ಕಡಿತ ಮಾಡಬೇಕಾಗಿ ಬಂದಿದೆ. ಹಾಗಾಗಿ ಸಂಪನ್ಮೂಲ ನಿರ್ಬಂಧಗಳನ್ನು ಪರಿಗಣಿಸಿ ಆದ್ಯತೆಗಳನ್ನು ಪುನರ್ರೂಪಿಸಲಾಗಿದೆ.
ಸಾರ್ವಜನಿಕ ಆರೋಗ್ಯ, ಸಾಮಾನ್ಯ ಶಿಕ್ಷಣ, ಪರಿಸರ ಮತ್ತು ಕೊಳಚೆ ನಿರ್ಮೂಲನ, ಬಡವರಿಗೆ ಮನೆ ನಿರ್ಮಾಣ ಗಳಿಗೆ ವೆಚ್ಚವನ್ನು ಹೆಚ್ಚಿಸಲಾಗಿದೆ. ರಾಜ್ಯದ ಸಾರ್ವಜನಿಕ ಉದ್ಯಮಗಳು ಬಂಡವಾಳದ ಹಿಂತೆಗೆತ ಅಥವಾ ಖಾಸಗೀಕರಣವನ್ನು ಮಾಡಲಾಗುವುದಿಲ್ಲ. ಅವುಗಳ ಮೇಲೆ ಹೂಡಿಕೆಯನ್ನು ಹೆಚ್ಚಿಸಲಾಗಿದೆ. ಕೇರಳ ಮೂಲಸೌಕರ್ಯ ಹೂಡಿಕೆ ನಿಧಿ ಮಂಡಳಿ ವೆಚ್ಚದಲ್ಲಿ ಬಜೇಟೇತರ ಸಾಲಗಳು ಸೇರಿದಂತೆ 2020-21ರಲ್ಲಿ ಒಟ್ಟು 20,000 ಕೋಟಿ ರೂ. ವೆಚ್ಚ ಮಾಡಲಿದೆ.



1990ರಿಂದ ದೇಶದ ಮೇಲೆ ನವ-ಉದಾರವಾದಿ ಆರ್ಥಿಕ ನೀತಿಗಳ ದಾಳಿ ಆರಂಭವಾಗಿದೆ. ಈಗ ಮೋದಿ ಆಳ್ವಿಕೆಯಲ್ಲಿ ಅದು ತಾರಕಕ್ಕೆ ಮುಟ್ಟಿದೆ. ಈ ಅವಧಿಯ ((ನಿರ್ಮಲಾ ಸೀತಾರಾಮನ್ ಅವರ ಈ ವರ್ಷದ್ದು ಸೇರಿದಂತೆ) ನವ-ಉದಾರವಾದಿ ಬಜೆಟುಗಳು, ಈ ನೀತಿಗಳನ್ನು ಜಾರಿ ಮಾಡುವ ಸಾಧನಗಳಾಗಿವೆ. ಇವುಗಳ ಫಲಿತಗಳಾದ ಆರ್ಥಿಕ ಸ್ಥಗಿತತೆ, ಹೆಚ್ಚುತ್ತಿರುವ ಅಸಮಾನತೆ, ಬಹುಸಂಖ್ಯಾತರನ್ನು ನಿರ್ಗತಿಕರಾಗಿಸಿರುವುದು ದೇಶವನ್ನು ದುರಂತದತ್ತ ಒಯ್ದಿವೆ. ಕೇರಳದ 2020-21 ಎಲ್.ಡಿ.ಎಫ್ ಬಜೆಟ್ ಈ ನವ-ಉದಾರವಾದಿ ನೀತಿಗಳ ಹೋರಾಟದ ವಿರುದ್ಧ ಸಾಧನವಾಗಿದೆ. ವ್ಯಾಪಕ ಬೇಡಿಕೆ ಕುಸಿತದಿಂದಾಗಿ ಸತತವಾಗಿ ಆರ್ಥಿಕ ಬೆಳವಣಿಗೆ ಕುಸಿಯುತ್ತಿರುವಾಗ, ನವ-ಉದಾರವಾದಿ ಬಜೆಟುಗಳು ಸರಕಾರದ ಖರ್ಚು ಮತ್ತು ಒಟ್ಟು ಬೇಡಿಕೆಗಳಲ್ಲಿ ಕಡಿತ ಮಾಡುವ ಆರ್ಥಿಕ ಚಕ್ರಕ್ಕೆ ಪೂರಕವಾಗಿ ಕೆಲಸ ಮಾಡುತ್ತವೆ. ಆದರೆ ಕೇರಳದ ಎಲ್.ಡಿ.ಎಫ್ ಬಜೆಟ್ ಆರ್ಥಿಕ ಚಕ್ರದ ವಿರುದ್ಧ ಕೆಲಸ ಮಾಡುತ್ತಿದೆ. ರಾಜ್ಯ ಸರಕಾರಕ್ಕೆ ಸೀಮಿತ ಸಂಪನ್ಮೂಲದ ಅವಕಾಶವಿದ್ದರೂ ಸರಕಾರದ ವೆಚ್ಚ ಮತ್ತು ಒಟ್ಟು ಬೇಡಿಕೆ ಹೆಚ್ಚಿಸುವ ಕ್ರಮಗಳನ್ನು ಕೈಗೊಂಡಿವೆ. ಹಣಕಾಸು ಮಂತ್ರಿ ಥಾಮಸ್ ಐಸಾಕ್ ಹೇಳಿದಂತೆ ಕೇರಳದ ಈ ಬಜೆಟ್, ಆರ್ಥಿಕ ಕುಸಿತದ ಬೆದರಿಕೆಯ ವಿರುದ್ಧ ಉತ್ತೇಜಕದ ಒಂದು ಪ್ಯಾಕೇಜು ಆಗಿದೆ.


ಕೇಂದ್ರದ ಬಜೆಟ್ ಆರ್ಥಿಕಕ್ಕೆ ಚೇತರಿಕೆ ನೀಡಲು ಪೂರೈಕೆ ಭಾಗದಲ್ಲಿ ಮಧ್ಯಪ್ರವೇಶಕ್ಕೆ ಮಾತ್ರ ಗಮನ ಹರಿಸುತ್ತಾ ಕಾರ್ಪೊರೇಟ್ ಮತ್ತು ಶ್ರೀಮಂತರಿಗೆ ಪ್ರೋತ್ಸಾಹಗಳನ್ನು ನೀಡಿದೆ. ಇದಕ್ಕೆ ವ್ಯತಿರಿಕ್ತವಾಗಿ ಕೇರಳದ ಬಜೆಟ್ ಹಳೆಯ ಮತ್ತು ಹೊಸ ಕಲ್ಯಾಣ ಕ್ರಮಗಳ ಮೂಲಕ ಪ್ರಾಥಮಿಕವಾಗಿ ಬೇಡಿಕೆಯ ಭಾಗಕ್ಕೆ ಉತ್ತೇಜನೆ ನೀಡುವುದಕ್ಕೆ ಒತ್ತು ಕೊಡುತ್ತದೆ. ಸುಮಾರು 50 ಲಕ್ಷ ಜನರಿಗೆ ಕಲ್ಯಾಣ ಪೆನ್ಶನನ್ನು ರೂ. 100 ಹೆಚ್ಚಿಸಿ ರೂ. 1300 ಮಾಡಲಾಗಿದೆ. ಈ ಎಲ್.ಡಿ.ಎಫ್ ಸರಕಾರ ಅಧಿಕಾರ ವಹಿಸಿಕೊಂಡಾಗಿನಿಂದ ಬಜೆಟಿಂದ ಬಜೆಟಿಗೆ ಹೆಚ್ಚುತ್ತಾ ಈ ಕಲ್ಯಾಣ ಪೆನ್ಶನು ದುಪ್ಪಟ್ಟಾಗಿದೆ. ಬಡವರ ಜೀವನ ಪರಿಸ್ಥಿತಿ ಸುಧಾರಿಸಲು ಕೈಗೊಂಡಿರುವ ಹಲವಾರು ಕ್ರಮಗಳಲ್ಲಿ ಇದು ಒಂದು ಉದಾಹರಣೆಯಷ್ಟೇ. ವೃದ್ಧರು, ಮಕ್ಕಳು, ವಿಕಲಚೇತನರು, ಮತ್ತಿತರ ದುರ್ಬಲ ಗುಂಪುಗಳ ಜನರ ಆದಾಯವನ್ನು ಹೆಚ್ಚಿಸುವ ವ್ಯಾಪಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆರ್ಥಿಕ ಉತ್ತೇಜನದ ಉಪಕರಣವಾಗಿ ಕೈಗೊಳ್ಳಲಾದ ಪ್ರಮುಖ ಮೂಲಸೌಕರ್ಯಗಳ ಕಾರ್ಯಕ್ರಮಗಳು ಸದ್ಯದಲ್ಲಿ ಆದಾಯ ಮತ್ತು ಬೇಡಿಕೆ ಹೆಚ್ಚಿಸುವುದಲ್ಲದೆ, ಖಾಸಗಿ ಹೂಡಿಕೆಯನ್ನು ಆಕರ್ಷಿಸುವ ಮೂಲಕ ದೂರಗಾಮಿ ಬೆಳವಣಿಗೆಯನ್ನು ಉತ್ತೇಜಿಸುತ್ತವೆ.





ಕೇರಳ ಸರಕಾರದ ಆರ್ಥಿಕ ಬೆಳವಣಿಗೆಗೆ ಉತ್ತೇಜನ ಕೊಡುವ ಈ ಕ್ರಮಗಳು ಉತ್ತಮ ಫಲಗಳನ್ನು ನೀಡಿದೆ ಎಂದು ರಾಜ್ಯದ ಆರ್ಥಿಕ ಪರಾಮರ್ಶೆ ವರದಿ ತೋರಿಸುತ್ತದೆ. ರಾಷ್ಟ್ರೀಯ ಆರ್ಥಿಕಕ್ಕೆ ಹೋಲಿಸಿದರೆ ರಾಜ್ಯ ಹೆಚ್ಚಿನ ದರದಲ್ಲಿ (ಶೇ. 7.2) ಬೆಳವಣಿಗೆ ಸಾಧಿಸಿದೆ. ಕೈಗಾರಿಕಾ ಕ್ಷೇತ್ರದ ಸಾಧನೆ ಬೆಳವಣಿಗೆಯ ಪ್ರಮುಖ ಕಥನವಾಗಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ಕೈಗಾರಿಕಾ ಕ್ಷೇತ್ರದ ಪಾಲು 2014-15ರಲ್ಲಿ ಶೇ. 9.8 ರಿಂದ 2018-19ರಲ್ಲಿ ಶೇ. 13.2ಕ್ಕೇರಿದೆ. ರಾಜ್ಯದ ಜನರ ತಲಾ ಆದಾಯ ರಾಷ್ಟ್ರೀಯ ತಲಾ ಉದಾಯದ 1.6 ಪಟ್ಟಿನಷ್ಟು ಹೆಚ್ಚು ಇದೆ. ರಾಜ್ಯದ ಜನರ ತಲಾ ಆದಾಯ ಮತ್ತು ರಾಷ್ಟ್ರೀಯ ತಲಾ ಉದಾಯಗಳ ನಡುವಿನ ಕಂದಕ ಹೆಚ್ಚುತ್ತಲೇ ಇದೆ. ಈ ಸಾಧನೆಯನ್ನು 2017ರ ಒಕಿ ಚಂಡ ಮಾರುತ, 2018-2019ರ ಭೀಕರ ನೆರೆಗಳು, ಹಣಕಾಸು ಅವಕಾಶ ಕುಗ್ಗುವಿಕೆ ಮತ್ತು ಕೇಂದ್ರ ಸರಕಾರದ ಪ್ರತಿಕೂಲ ನೀತಿಗಳ ಸವಾಲುಗಳ ನಡುವೆ ಮಾಡಲಾಗಿದೆ ಎಂಬುದು ಗಮನಾರ್ಹ.

ಮಲಯಾಳಿಗಳ ವಲಸೆ ದುಡಿಮೆಗಾರರ ಅಲ್ಲಿನ ರಾಷ್ಟ್ರ ಕಟ್ಟುವ ಅಪಾರ ಸೇವೆಗೆ ಪ್ರತಿಯಾಗಿ, ಕೇರಳ ಭೀಕರ ಪ್ರಾಕೃತಿಕ ಪ್ರಕೋಪ ಎದುರಿಸುತ್ತಿದ್ದಾಗ, ಪಶ್ಚಿಮ ಏಶ್ಯಾದ ಕೊಲ್ಲಿ ದೇಶಗಳ ಸರಕಾರಗಳು ಕೊಡಬೇಕೆಂದಿದ್ದ ನೆರವಿಗೆ ಕೇಂದ್ರ ಸರಕಾರ ತಡೆಯೊಡ್ಡಿತ್ತು. ಸರಕಾರಗಳ ಸಾಲಯೆತ್ತುವ ಕುರಿತ ಎಫ್.ಆರ್.ಬಿ.ಎಂ ಕಾಯಿದೆಯ ಶೇ. 3 ಮಿತಿಯನ್ನು ಮೀರಿ ಸಾಲಯೆತ್ತಲೂ ರಾಜ್ಯ ಸರಕಾರಕ್ಕೆ ಅವಕಾಶ ಕೊಡಲಿಲ್ಲ. ಮಾತ್ರವಲ್ಲ, ಗಾಯದ ಮೇಲೆ ಬರೆ ಎಳೆಯುವಂತೆ, ಸರಕಾರದ ಇಲಾಖೆಗಳು ಮತ್ತು ಉದ್ಯೋಗಿಗಳು ಬೊಕ್ಕಸದಲ್ಲಿ ಇಟ್ಟಿರುವ ಹಣವನ್ನು ಸರಕಾರದ ಸಾಲಭಾರ ಎಂದು ಪರಿಗಣಿಸುವ ಅಕೌಂಟಿಂಗ್ ಮಾಡುವ ಕ್ರಮ ಬದಲಿಸುವ ಮೂಲಕ, ಆ ಮಿತಿಯನ್ನು ಇನ್ನಷ್ಟು ಕಡಿತಗೊಳಿಸಿತು. ಜತೆಗೆ ಜಿ.ಎಸ್.ಟಿಯ ರಾಜ್ಯದ ಪಾಲಿನಲ್ಲಿ ಕಡಿತ ಮತ್ತು ವಿಳಂಬಗಳು. ಈ ವರ್ಷದ ಕೊನೆಯ ಕಾಲುಭಾಗದಲ್ಲಿ ಕೇಂದ್ರದ ಬಟವಾಡೆ ಮತ್ತು ತೆಗೆದುಕೊಳ್ಳಬಹುದಾದ ಸಾಲದಲ್ಲಿ ರೂ. 8330 ಕೋಟಿ ರೂ. ಖೋತಾ ಇರುತ್ತದೆ. ಕೇಂದ್ರದ ಇಂತಹ ಪ್ರತಿಕೂಲ ವರ್ತನೆಗಳಿಂದ ರಾಜ್ಯದ ಬೊಕ್ಕಸದ ಮೇಲೆ ತೀವ್ರ ಒತ್ತಡ ಬಂದಿದ್ದು, ಯೋಜನೆ ಮತ್ತು ಪಾವತಿಗಳಲ್ಲಿ ಕಡಿತ ಮಾಡಬೇಕಾಗಿದೆ.



ಕೇಂದ್ರದಿಂದ ಹೊರಿಸಲಾಗಿರುವ ಈ ಹಣಕಾಸು ಒತ್ತಡದಿಂದಾಗಿ ವಾರ್ಷಿಕ ಯೋಜನೆ (2020-21)ಯಲ್ಲಿ 3000 ಕೋಟಿ ರೂ. ನಷ್ಟು ಕಡಿತ ಮಾಡಬೇಕಾಗಿ ಬಂದಿದೆ. ಅಭಿವೃದ್ಧಿ ಯೋಜನೆಗಳಿಗೆ ಗರಿಷ್ಠ ವೆಚ್ಚ ಮಾಡಲು ಬಯಸುವ ಸರಕಾರವೊಂದು ಇಂತಹ ಕಠಿಣ ನಿರ್ಧಾರಕ್ಕೆ ಬರಬೇಕಾಗಿರುವ ಪರಿಸ್ಥಿತಿ ಇದೆ. ಆದರೆ ಯೋಜನೆಯಲ್ಲಿ ಕಡಿತ ಮತ್ತು ರೆವಿನ್ಯೂ ಕೊರತೆ ಅನುದಾನವಾಗಿ 15,323 ಕೋಟಿ ರೂ. ಕೊಡುವ 15ನೇ ಹಣಕಾಸು ಅಯೋಗದ ನಿರ್ಧಾರಗಳು ವಿಳಂಬವಿಲ್ಲದೆ ಜಾರಿಯಾದರೆ ರಾಜ್ಯದ ಬೊಕ್ಕಸದ ಮೇಲೆ ಒತ್ತಡ ಸ್ವಲ್ಪ ಕಡಿಮೆಯಾಗಲಿದೆ. ಹಿಂದಿನ ಯು.ಡಿ.ಎಫ್ ಸರಕಾರ ಆಗ ಬೊಕ್ಕಸದ ಮೇಲೆ ಒತ್ತಡ ಬಂದಾಗ ಕೈಗೊಂಡ ಹಲವು ಬೇಕಾಬಿಟ್ಟಿ ತಾತ್ಕಾಲಿಕ ಕ್ರಮಗಳು (ಬಿಲ್ ಗಳ ಕ್ಯೂ, ಬಜೆಟ್ ಅನುದಾನಗಳಲ್ಲಿ ಬೇಕಾಬಿಟ್ಟಿ ಕಡಿತ ಇತ್ಯಾದಿ) ಹಲವು ಗಂಭೀರ ದೂರಗಾಮಿ ರಾಜಕೀಯ, ಆರ್ಥಿಕ ಪರಿಣಾಮ ಬೀರುವಂಥದ್ದಾಗಿದ್ದವು. ಯೋಜನಾ ವೆಚ್ಚದಲ್ಲಿ ಕಡಿತ ಅದಕ್ಕಿಂತ ಉತ್ತಮ ಕ್ರಮ ಎಂದು ಎಲ್.ಡಿ.ಎಫ್ ಭಾವಿಸಿದೆ. ಆದರೆ ಯೋಜನಾ ಗಾತ್ರದಲ್ಲಿ ಕಡಿತದಿಂದಾಗಿ ಕಲ್ಯಾಣ ಯೋಜನೆ ಮತ್ತು ಅಭಿವೃದ್ಧಿ ವೆಚ್ಚದಲ್ಲಿ ಕಡಿತ ಆಗುವುದಿಲ್ಲ. ಅಂತಹ ಕ್ರಮ ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ಸಾಧುವೂ ಅಲ್ಲ. ಸಂಪನ್ಮೂಲ ನಿರ್ಬಂಧಗಳನ್ನು ಪರಿಗಣಿಸಿ ಆದ್ಯತೆಗಳನ್ನು ಪುನರ್ರೂಪಿಸಲಾಗಿದೆ.

ಸಾರ್ವಜನಿಕ ಆರೋಗ್ಯ, ಸಾಮಾನ್ಯ ಶಿಕ್ಷಣ, ಪರಿಸರ ಮತ್ತು ಕೊಳಚೆ ನಿರ್ಮೂಲನ, ಬಡವರಿಗೆ ಮನೆ ನಿರ್ಮಾಣ ಗಳಿಗೆ ವೆಚ್ಚವನ್ನು ಹೆಚ್ಚಿಸಲಾಗಿದೆ. ರಾಜ್ಯದ ಸಾರ್ವಜನಿಕ ಉದ್ಯಮಗಳ ಬಂಡವಾಳದ ಹಿಂತೆಗೆತ ಅಥವಾ ಖಾಸಗೀಕರಣವನ್ನು ಮಾಡಲಾಗುವುದಿಲ್ಲ. ಅವುಗಳ ಮೇಲೆ ಹೂಡಿಕೆಯನ್ನು ಹೆಚ್ಚಿಸಲಾಗಿದೆ. ಇತ್ತೀಚೆಗೆ ರಾಜ್ಯದ ಸಾರ್ವಜನಿಕ ಉದ್ಯಮಗಳು ಲಾಭ ಮತ್ತಿತರ ಸೂಚಕಗಳಲ್ಲಿ ಉತ್ತಮ ಸಾಧನೆ ತೋರಿಸಿವೆ ಎಂದು ಗಮನಿಸಬೇಕು. ಕೇರಳ ಮೂಲಸೌಕರ್ಯ ಹೂಡಿಕೆ ನಿಧಿ ಮಂಡಳಿ (ಕೆ.ಐ.ಐ.ಎಫ್.ಬಿ) ಯಂತಹ ಸಂಸ್ಥೆಗಳ ವೆಚ್ಚದಲ್ಲಿ ಬಜೇಟೇತರ ಸಾಲಗಳು ಸೇರಿದಂತೆ ಹೆಚ್ಚು ಮಾಡಲಾಗಿದೆ. ಆದ್ದರಿಂದ ಪ್ರಾಜೆಕ್ಟುಗಳಲ್ಲಿ ಪ್ರಗತಿ ಮತ್ತು ಹೂಡಿಕೆ ಹೆಚ್ಚಲಿವೆ. ಕೆ.ಐ.ಐ.ಎಫ್.ಬಿ ಈಗಾಗಲೇ 4500 ಕೋಟಿ ರೂ.ಗಳ ಮೂಲಸೌಕರ್ಯ ಪ್ರಾಜೆಕ್ಟುಗಳನ್ನು ಪೂರ್ಣಗೊಳಿಸಿವೆ. 35,028 ಕೋಟಿ ರೂ.ಗಳ 675 ಹೊಸ ಪ್ರಾಜೆಕ್ಟುಗಳಿಗೆ ಪ್ರಾಥಮಿಕ ಅಂಗೀಕಾರ ಕೊಡಲಾಗಿದೆ. ಕೆ.ಐ.ಐ.ಎಫ್.ಬಿ 2020-21ರಲ್ಲಿ ಒಟ್ಟು 20,000 ಕೋಟಿ ರೂ. ವೆಚ್ಚ ಮಾಡಲಿದೆ.

ಅಭಿವೃದ್ಧಿ ವೆಚ್ಚಕ್ಕೆ ಬಜೇಟೇತರ ಸಾಲಗಳ ಮೇಲೆ ಅವಲಂಬಿತವಾಗುವುದು ಎಲ್.ಡಿ.ಎಫ್ ಸರಕಾರದ ಮೊದಲ ಆಯ್ಕೆಯಂತೂ ಅಲ್ಲ. ಸಾರ್ವಜನಿಕ ವೆಚ್ಚದ ಮೇಲಿನ ಪ್ರಜಾಸತ್ತಾತ್ಮಕ ನಿಯಂತ್ರಣ ಮತ್ತು ಅನಿಶ್ಚಿತತೆಗಳ ನಿರ್ವಹಣೆಯ ದೃಷ್ಟಿಯಿಂದ ಅದು ಉತ್ತಮ ಆಯ್ಕೆಯೂ ಅಲ್ಲ. ಸರಕಾರ ಆದಾಯ-ವೆಚ್ಚಗಳ ಏರುಪೇರು ತೂಗಿಸುವಲ್ಲಿ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯುವಲ್ಲಿ ಜಾಗರೂಕವಾಗಿ ಇರದಿದ್ದರೆ ಈ ಆಯ್ಕೆ ಹಲವು ತೊಡಕುಗಳನ್ನು ಸೃಷ್ಟಿಸಬಲ್ಲುದು.

ಪ್ರಸಕ್ತ ಎಲ್.ಡಿ.ಎಫ್ ಸರಕಾರ ಇಂತಹ ಜಾಗರೂಕತೆಯನ್ನು ವಹಿಸಲಿದೆ. ಬಜೆಟ್ ಮತ್ತು ಬಜೆಟೇತರ ಸಂಪನ್ಮೂಲಗಳ ಬಳಕೆಯ ಸಮಗ್ರ ನಿರ್ವಹಣೆ ಮಾಡಲಿದೆ. 15ನೇ ಹಣಕಾಸು ಆಯೋಗ ಬಜೆಟೇತರ ಸಾಲಗಳನ್ನು ಕಡಿಮೆ ಮಾಡಿ ಇಲ್ಲವಾಗಿಸಬೇಕೆಂದು ಶಿಫಾರಸು ಮಾಡಿದೆ. ಈಗಿನ ದುಸ್ತರ ಆರ್ಥಿಕ ಪರಿಸ್ಥಿತಿಯಲ್ಲಿ ಇದು ಖಂಡಿತ ಒಳ್ಳೆಯ ಶಿಫಾರಸೇನಲ್ಲ. ಆಯೋಗ ಹಣಕಾಸು ಕೊರತೆಯ ಈಗಿರುವ ಮಿತಿಯನ್ನು ಗಣನೀಯವಾಗಿ ಹೆಚ್ಚಿಸಬೇಕು ಅಥವಾ ಬಜೇಟೇತರ ಸಾಲದ ಆಯ್ಕೆಯನ್ನು ಇಡಬೇಕು. ಆಯೋಗದ ರೆವಿನ್ಯೂ ಕೊರತೆ ಅನುದಾನವನ್ನು ಕೇಂದ್ರ ಸರಕಾರ ಜಾರಿ ಮಾಡುವಂತೆ ನೋಡಿಕೊಳ್ಳಬೇಕು. ಈಗಿನ ದುಸ್ತರ ಆರ್ಥಿಕ ಪರಿಸ್ಥಿತಿಯಲ್ಲಿ ಕೇಂದ್ರ ಸರಕಾರ ಮತ್ತು ಹಣಕಾಸು ಆಯೋಗಗಳು ಜವಾಬ್ದಾರಿಯಿಂದ ನೀತಿ ನಿರ್ಧಾರಗಳನ್ನು ಕೈಗೊಳ್ಳಬೇಕು.

ಹಣದುಬ್ಬರ ದರದಲ್ಲಿ ಏರಿಕೆ, ನಿರುದ್ಯೋಗ ದರದಲ್ಲಿ ಏರಿಕೆ, ಅಡುಗೆ ಅನಿಲ ಬೆಲೆಗಳಲ್ಲಿ ಅತಿ ತೀಕ್ಷ್ಣ ಏರಿಕೆ......

ದಿಲ್ಲಿ ವಿಧಾನಸಭಾ ಚುನಾವಣೆಗಳ ಫಲಿತಾಂಶಗಳ ಮರುದಿನವೇ ಅಡುಗೆ ಅನಿಲ ದರಗಳಲ್ಲಿ 144.50ರೂ.ಗಳ ತೀವ್ರ ಏರಿಕೆಯನ್ನು ಮಾಡಲಾಗಿದೆ. ಇದು 2014ರ ನಂತರದ ಅತಿ ತೀವ್ರ ಏರಿಕೆ ಎನ್ನಲಾಗಿದೆ. ಇದಕ್ಕೆ ಅಂತರ್ರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಕಚ್ಚಾತೈಲ ಬೆಲೆಗಳಲ್ಲಿ ಏರಿಕೆಯ ಸಬೂಬನ್ನೂ ಕೊಡುವಂತಿಲ್ಲ. ಏಕೆಂದರೆ ಅದು ಏರುತ್ತಿಲ್ಲ, ಬದಲಿಗೆ ಸ್ವಲ್ಪ ಪ್ರಮಾಣದಲ್ಲಿ ಇಳಿಯುತ್ತಿದೆ. ಇದರಿಂದಾಗಿ ಕಳೆದ ವಾರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳ ಇಳಿಕೆಯೂ ಆಗಿತ್ತು. ನಿಜ ಹೇಳಬೇಕೆಂದರೆ, ಇದು ಸರಕಾರದ ದುರಾಡಳಿತ ಕಾರಣ ಎಂದು ಹೇಳಲಾಗುತ್ತಿದೆ. ತೆರಿಗೆಗಳ ವಸೂಲಿಯ ಕೊರತೆಯಿಂದಾಗಿ ಮೋದಿ ಸರಕಾರ ತನ್ನ ಖರ್ಚು–ವೆಚ್ಚಗಳನ್ನು ನಿಭಾಯಿಸಲು ಸಾರ್ವಜನಿಕ ವಲಯದ ತೈಲ ಕಂಪನಿಗಳಿಂದ ಹೆಚ್ಚೆಚ್ಚು ಡಿವಿಡೆಂಡ್‌ಗಳನ್ನು ಕಿತ್ತುಕೊಳ್ಳುತ್ತ ಬಂದಿರುವ ದುಷ್ಪರಿಣಾಮ ಇದು. ಈಗ ಈ ತೈಲ ಕಂಪನಿಗಳು ತಮ್ಮ ಬ್ಯಾಲನ್ಸ್ ಶೀಟುಗಳನ್ನು ಸರಿಪಡಿಸಲು ಈ ತೀವ್ರ ಏರಿಕೆಯನ್ನು ಮಾಡಿವೆ ಎಂಬ ಸಂಗತಿಯತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ ಯೆಚುರಿ ಗಮನ ಸೆಳೆದಿದ್ದಾರೆ.

ಇದರ ಹಿಂದಿನ ದಿನವೇ ಜನವರಿ ತಿಂಗಳಲ್ಲಿ ಹಣದುಬ್ಬರ ದರ 7.59%ಕ್ಕೆ ಏರಿದೆ ಎಂಬ ಸುದ್ದಿ ಬಂದಿತ್ತು. ಕಳೆದ ತಿಂಗಳು ಇದು 7.35% ಇತ್ತು. ಭಾರತೀಯ ರಿಝರ್ವ್ ಬ್ಯಾಂಕ್ ಪ್ರಕಾರ ಹಣದುಬ್ಬರ ದರ 6ಶೇ. ದಾಟಬಾರದು. ಆದರೆ ಈಗ ಸತತ ಎರಡನೇ ತಿಂಗಳೂ ಅದು ಈ ಮೇಲಣ ಮಿತಿಯನ್ನು ದಾಟಿದೆ. ಜನವರಿ 2019ರಲ್ಲಿ ಹಣದುಬ್ಬರ ದರ 1.97 ಶೇ. ಮಾತ್ರ ಇತ್ತು ಎಂಬುದನ್ನು ಗಮನಿಸಬಹುದು. ಈ ತಿಂಗಳೂ ಈ ತೀವ್ರ ಏರಿಕೆಗೆ ಆಹಾರ ವಸ್ತುಗಳ ಬೆಲೆಗಳಲ್ಲಿ 13.63ಶೇ. ದಷ್ಟು ತೀವ್ರ ಏರಿಕೆಯೇ ಕಾರಣ.

ಜನವರಿ 2020 ರಲ್ಲಿ ನಗರಪ್ರದೇಶಗಳಲ್ಲಿನ ನಿರುದ್ಯೋಗ ದರವೂ 9.7ಶೇ. ಕ್ಕೇರಿದೆ ಎಂದು ಸಿಎಂಐಇ(ಭಾರತೀಯ ಅರ್ಥವ್ಯವಸ್ಥೆ ಮೇಲ್ವಿಚಾರಣಾ ಕೇಂದ್ರ) ಬಿಡುಗಡೆ ಮಾಡಿರುವ ದತ್ತಾಂಶ ತಿಳಿಸಿದೆ. ಡಿಸೆಂಬರ್‌ನಲ್ಲಿ ಇದು 9 ಶೇ. ಇತ್ತು. ಆದರೆ ಒಟ್ಟಾರೆಯಾಗಿ ನಿರುದ್ಯೋಗ ದರ ಕಳೆದ ತಿಂಗಳ 7.6ಶೇ. ದಿಂದ 7.16ಶೇ.ಕ್ಕೆ ಇಳಿದಿದೆ. ಕಳೆದ ಒಂದು ವರ್ಷದ ಸರಾಸರಿ ದರ 7.4ಶೇ. ಅಂದರೆ ಬಹಳಷ್ಟು ಆತಂಕಕಾರಿ ಮಟ್ಟದಲ್ಲೇ ಇದೆ.

ಇದಕ್ಕೆ ಮೊದಲು ಕೂಲಿ ಮತ್ತು ಸಂಬಳಗಳ ಏರಿಕೆಯ ದರಗಳಲ್ಲಿ



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ಛೂಬಾಣ, ವಾರ್ತಾಭಾರತಿ

2011ರಿಂದ 2018ರ ಅವಧಿಯಲ್ಲಿ ತೀವ್ರ ಇಳಿಕೆ ಕಂಡು ಬಂದಿದೆ ಎಂದು ಒಂದು ಅಧ್ಯಯನ ತಿಳಿಸಿರುವುದಾಗಿ ವರದಿಯಾಗಿತ್ತು. 2017–18 ಹಾಗೂ ಅದರ ಮೊದಲಿನ ಆವಧಿಕ ಶ್ರಮಶಕ್ತಿ ಸರ್ವೆ(ಪಿಎಲ್‌ಎಫ್‌ಎಸ್) ಅಂಕಿ–ಅಂಶಗಳಲ್ಲಿ ಆಧಾರದಲ್ಲಿ ನಡೆಸಿರುವ ಈ ಅಧ್ಯಯನದ ಪ್ರಕಾರ ಹಿಂದಿನ ಏಳು ವರ್ಷಗಳಲ್ಲಿ (2004ರಿಂದ 2011) ಅವಧಿಯಲ್ಲಿ ಹೆಚ್ಚಳ ದರ 6.47ಶೇ. ಇದ್ದಿದ್ದರೆ 2011–18ರ ಅವಧಿಯಲ್ಲಿ ಇದು 1.05 ಶೇ.ಕ್ಕೆ ಇಳಿದಿದೆ. ಇದು ಹಿಂದೆಂದೂ ಕಂಡಿರದ ಸಂಗತಿ. ಎಲ್ಲ ಉತ್ಪಾದನಾ ವಲಯಗಳಲ್ಲೂ ಈ ಇಳಿಕೆ ಕಂಡು ಬಂದಿದೆ. ಸಾರಿಗೆ, ದಾಸ್ತಾನು, ಸಂಪರ್ಕ, ವ್ಯಾಪಾರ, ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳು, ಹಣಕಾಸು ಸೇವೆಗಳು, ರಿಯಲ್ ಎಸ್ಟೇಟ್ ಮತ್ತು ಸಾರ್ವಜನಿಕ ಆಡಳಿತ ವಲಯಗಳಲ್ಲಿ ಈ ಅವಧಿಯಲ್ಲಿ ಕೂಲಿ ಮತ್ತು ಸಂಬಳಗಳಲ್ಲಿ ಇಳಿಕೆ ಕೂಡ ದಾಖಲಾಗಿದೆ.

ಅಂದರೆ ದರಗಳೆಲ್ಲ ಏರುತ್ತಿವೆ, ಕೂಲಿ/ಸಂಬಳಗಳು ಮಾತ್ರ ಇಳಿಯುತ್ತಿವೆ. ಇದೀಗ ನ್ಯೂ ಇಂಡಿಯಾದ ಕತೆ.

ನ್ಯೂ ಇಂಡಿಯಾ ನ್ಯೂಸ್

ಸುಪ್ರಿಂ ಕೋರ್ಟ್ ಹಕ್ಕುಗಳ ನ್ಯಾಯಾಲಯದ ಬದಲು ಕಾರ್ಯಾಂಗದ ನ್ಯಾಯಾಲಯವಾಗುತ್ತಿದೆಯೇ?

ಈ ಸಂದೇಹ ದೇಶದ ಸಾಮಾನ್ಯ ನಾಗರಿಕರಿಗೆ ಮಾತ್ರವಲ್ಲ, ಹಿರಿಯ ನ್ಯಾಯವಿದರಲ್ಲೂ ಏಳುತ್ತಿರುವಂತೆ ಕಾಣುತ್ತದೆ. ಕಾನೂನು ಆಯೋಗದ ಮಾಜಿ ಅಧ್ಯಕ್ಷ ನ್ಯಾಯಮೂರ್ತಿ ಎ.ಪಿ. ಷಾ ಫೆಬ್ರುವರಿ 10ರಂದು ನೀಡಿದ ಉಪನ್ಯಾಸವೊಂದರಲ್ಲಿ ಈ ಪ್ರಶ್ನೆಯನ್ನು ಎತ್ತಿರುವುದಾಗಿ ವರದಿಯಾಗಿದೆ(ಸ್ಕ್ರಾಲ್.ಇನ್, ಫೆ.11)

"ಸಂವಿಧಾನದ ಪಾಲಕನಾಗಿ ಮತ್ತು ನಮ್ಮ ಮೂಲಭೂತ ಹಕ್ಕುಗಳ ಅಂತಿಮ ರಕ್ಷಕನಾಗಿ , ತಾನು ಭಾರತದ ಜನತೆ ತನ್ನಲ್ಲಿ ಇಟ್ಟಿರುವ ಸಂವಿಧಾನಿಕ ವಿಶ್ವಾಸಕ್ಕೆ ಅರ್ಹನಾಗುತ್ತೇನೋ ಇಲ್ಲವೋ, ಅವರ ನಿರೀಕ್ಷೆಗಳನ್ನು ಸಾರ್ಥಕಗೊಳಿಸುತ್ತೇನೋ ಇಲ್ಲವೋ ಎಂಬುದನ್ನು ಸುಪ್ರಿಂ ಕೋರ್ಟೇ ನಿರ್ಧರಿಸಬೇಕಾಗಿದೆ ಎಂಬುದು ನನ್ನ ನಂಬಿಕೆ. ಸರಿಯಾದ ಉತ್ತರಗಳು ಅದಕ್ಕೆ ಜಗತ್ತಿನ ಅತ್ಯಂತ ಶಕ್ತಿಶಾಲಿ ಪ್ರಜಾಪ್ರಭುತ್ವ ಸಂಸ್ಥೆಗಳಲ್ಲಿ ಒಂದು ಎಂಬ ಅದರ ಸ್ಥಾನಮಾನವನ್ನು ಉಳಿಸಿಕೊಳ್ಳುವ ದಾರಿಯಲ್ಲಿ ಒಯ್ಯಬಹುದು. ಒಬ್ಬ ಶಾಶ್ವತ ಆಶಾವಾದಿಯಾಗಿ ನಾನು, ಭಾರತದ ಸುಪ್ರಿಂ ಕೋರ್ಟ್ ತಾನು ಇಟ್ಟ ತಪ್ಪು ಹೆಜ್ಜೆಗಳನ್ನು ಗುರುತಿಸಿಕೊಳ್ಳುತ್ತದೆ, ಬೇಗನೇ ತನ್ನ ದಿಕ್ಕನ್ನು ಸರಿಪಡಿಸಿಕೊಳ್ಳುತ್ತದೆ ಎಮದು ನಂಬುತ್ತೇನೆ" ಎಂದು ಹೇಳಿರುವುದಾಗಿ ವರದಿಯಾಗಿದೆ.

ಕಲಮು 370 ಮತ್ತು 35ಎ ಯನ್ನು ಮೋದಿ ಸರಕಾರ ನಿಷ್ಕ್ರಿಯಗೊಳಿಸಿ ಆರು ತಿಂಗಳು ಕಳೆದರೂ, ಅದಕ್ಕೆ ಸವಾಲು ಹಾಕಿದ ಅರ್ಜಿಗಳ ವಿಚಾರಣೆಯನ್ನು ಇನ್ನೂ ಅದು ಕೈಗೆತ್ತಿಕೊಂಡಿಲ್ಲ, ಅದೇ ರೀತಿಯಲ್ಲಿ ದೇಶಾದ್ಯಂತ ಜನಾಕ್ರೋಶಕ್ಕೆ ಕಾರಣವಾಗಿರುವ ಸಿಎಎ–ಎನ್‌ಪಿಆರ್–ಎನ್‌ಆರ್‌ಸಿ ಪ್ರಶ್ನಿಸಿರುವ ಅರ್ಜಿಗಳಲ್ಲೂ, ಎರಡು ತಿಂಗಳಾಗುತ್ತಿದ್ದರೂ, ಇನ್ನೂ ವಿಚಾರಣೆ ಆರಂಭವಾಗಿಲ್ಲ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

"ಪಾಶವೀ ಮತ್ತು ಸಂವೇದನಾಶೂನ್ಯವಷ್ಟೇ ಅಲ್ಲ, ಅಸಮರ್ಥವೂ ಆಗಿರುವ ಸರಕಾರವನ್ನೂ ನಡೆಸುತ್ತಿದ್ದೀರಿ...."

ಮೂರನೇ ವಿದೇಶಿ ರಾಜತಾಂತ್ರಿಕರ ಕಾಶ್ಮೀರ ಪ್ರವಾಸದ ನಂತರ ಈಗ ಮಾನ್ಯ ಗೃಹಮಂತ್ರಿಗಳು ಎಲ್ಲ ರಾಜಕೀಯ ಮುಖಂಡರು ಕಾಶ್ಮೀರಕ್ಕೆ ಭೇಟಿ ನೀಡಬಹುದು ಎಂದು ದೊಡ್ಡ ಮನಸ್ಸಿನಿಂದ ಹೇಳಿರುವುದಾಗಿ ವರದಿಯಾಗಿದೆ. "ಅವರನ್ನು (ರಾಹುಲ್ ಗಾಂಧಿ ಮತ್ತು ಸೀತಾರಾಮ ಯೆಚುರಿಯವರನ್ನು) ಒಂದು ಬಾರಿ ಅಲ್ಲಿಗೆ ಹೋಗದಂತೆ ತಡೆಯಲಾಯಿತು, ನಂತರ ಅವರು ಎಂದಿಗೂ ಅಲ್ಲಿಗೆ ಹೋಗಲಿಲ್ಲ. ಈಗ ಅವರು ಹೋಗಬಹುದು, ಯಾರು ಬೇಕಾದರೂ ಹೋಗಬಹುದು, ಎಲ್ಲರಿಗೂ ನಾವು ಅನುಮತಿ ನೀಡುತ್ತೇವೆ" ಎಂದು ಗೃಹಮಂತ್ರಿಗಳು ಹೇಳಿದ್ದಾರಂತೆ.

ದಿಲ್ಲಿ ಪರಾಭವದ ನಂತರ ಅವರ ಭಾಗವಹಿಸಿದ 'ಟೈಮ್ಸ್ ನೌ ಸಮ್ಮಿಟ್'ನಲ್ಲಿ ಅವರು ಈ ರಿತಿ ಉದ್ಗರಿಸಿದರಂತೆ.

ಇದಕ್ಕೆ ಪ್ರತಿಕ್ರಿಯಿಸುತ್ತ ಯೆಚುರಿ "ಭಾರತೀಯರು ದೇಶದ ಯಾವುದೇ ಭಾಗಕ್ಕೆ ಭೇಟಿಯಾಗಲು ಅಮಿತ್ ಷಾ ಅನುಮತಿ ಯಾವಾಗಿಂದ ಕೇಳಬೇಕಾಗಿದೆ?" ಎಂದು ಪ್ರಶ್ನಿಸಿದ್ದಾರೆ. " ಮತ್ತು ಈ ನಡುವೆ ಕಾಶ್ಮೀರಕ್ಕೆ ನಾನು ಮತ್ತೆ ಹೋಗಿದ್ದೇನೆ, ಶ್ರೀಮಾನ್ ಷಾ ರವರೆ, ಅದೂ ತಮ್ಮ ಕರುಣಾಮಯ ಅನುಮತಿ ಇಲ್ಲದೆಯೇ, ಸುಪ್ರಿಂ ಕೋರ್ಟಿನಲ್ಲಿ ಒಂದು ಮೊಕದ್ದಮೆ ಸಲ್ಲಿಸಿದ ಮೇಲೆ. ನಿಮ್ಮ ಏಜೆಂಸಿಗಳು ನಾನು ಮೂರು ಬಾರಿ ಕಾಶ್ಮೀರಕ್ಕೆ ಭೇಟಿ ನೀಡಿದ್ದೇನೆ ಎಂದು ನಿಮಗೆ ತಿಳಿಸಿಲ್ಲವಾದರೆ, ನೀವು ಒಂದು ಪಾಶವೀ ಮತ್ತು ಸಂವೇದನಾಶೂನ್ಯ ಸರಕಾರವನ್ನಷ್ಟೇ ಅಲ್ಲ, ಒಂದು ಅಸಮರ್ಥ ಸರಕಾರವನ್ನೂ ನಡೆಸುತ್ತಿದ್ದೀರಿ" ಎಂದು ಮುಂದುವರೆದು ಅವರು ತಮ್ಮ ಟ್ವೀಟ್‌ನಲ್ಲಿ ಟಿಪ್ಪಣಿ ಮಾಡಿದ್ದಾರೆ.



ಟ್ರಂಪ್‌ಗೆ ಸ್ವಾಗತ– ವ್ಯಂಗ್ಯಚಿತ್ರ: ಅರವಿಂದ ತೆಗ್ಗಿನಮಠ




ಕೇಮ್ ಚೊ ಗೋಡೆ ವ್ಯಂಗ್ಯಚಿತ್ರ: ದಿಲೀಪ್ ಹರಿಚಂದ್ರನ್, ದಿ ಹಿಂದೂ

'ಸ್ಮರಣೀಯ' ಟ್ರಂಪ್ ಸ್ವಾಗತಕ್ಕೆ ಭರ್ಜರಿ 'ಕೇಮ್ ಚೊ' ಗೋಡೆ ತಯಾರಿ!

ಅಮೆರಿಕ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಭಾರತದಲ್ಲಿ ಸ್ಮರಣೀಯ ಸ್ವಾಗತವನ್ನು ನೀಡಲಾಗುವುದು ಎಂದು ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ಇದಕ್ಕಾಗಿ ಅಹಮದಾಬಾದ್ ಮಹಾನಗರಪಾಲಿಕೆ ಸರ್ದಾರ್ ಪಟೇಲ್ ಅಂತರ್ರಾಷ್ಟ್ರೀಯ ವಿಮಾನ ನಿಲ್ದಾಣದಿಂದ ರಾಜ್ಯದ ರಾಜಧಾನಿ ಗಾಂಧಿನಗರದ ಕಡೆಗೆ ಹೋಗುವ ದಾರಿಯಲ್ಲಿ ಸುಮಾರು 600 ಮೀ. ಉದ್ದದ ಮತ್ತು ಏಳಡಿ ಎತ್ತರದ ಗೋಡೆಯನ್ನು ಕಟ್ಟುತ್ತಿದೆ ಎಂದು ಇನ್ನೊಂದು ಸುದ್ದಿ ಹೇಳುತ್ತಿದೆ. ಏಕೆ ಈ ಗೋಡೆ! ಅಲ್ಲಿ ಸುಮಾರು 500 ಕಚ್ಚಾ ಮನೆಗಳಲ್ಲಿ ವಾಸವಾಗಿರುವ ಸುಮಾರು 2500 ಮಂದಿಯ ಬದುಕು ಮಾನ್ಯ ಅಮೆರಿಕನ್ ಅಧ್ಯಕ್ಷರ ದೃಷ್ಟಿಗೆ ಬೀಳದಿರಲಿ ಎಂದು ಈ ಗೋಡೆಯಂತೆ! ಅಷ್ಟರ ಮಟ್ಟಿಗೆ ಅವರ ಭಾರತ ಭೇಟಿ 'ಸ್ಮರಣೀಯ'ವಾಗಲಿಕ್ಕಿಲ್ಲ ಎಂಬ ಚಿಂತೆಯೇನೂ ಪ್ರಧಾನಿಗಳಿಗೆ ಖಂಡಿತಾ ಇರಲಿಕ್ಕಿಲ್ಲ. ದೇವ್ ಸರಣ್ ಅಥವ ಸರಣಿಯಾವಾಸ್ ಎಂಬ ಹೆಸರಿನ ಕೊಳೆಗೇರಿಯ ಭಾಗವಾಗಿರುವ ಈ ಜನಗಳು ದಶಕಗಳಿಂದ ಇಲ್ಲಿ ವಾಸವಾಗಿದ್ದಾರಂತೆ.

ನಮ್ಮ ಪ್ರಧಾನಿಗಳು ಅಮೆರಿಕಾಕ್ಕೆ ಭೇಟಿ ನೀಡಿದಾಗ ಅವರಿಗೆ ದೊರೆತ ಭವ್ಯ "ಹೌಡಿ ಮೋದಿ"(ಹೇಗಿದ್ದೀರಿ ಮೋದಿ) ಸ್ವಾಗತಕ್ಕೆ ಪ್ರತಿಯಾಗಿ ಈ ಗೋಡೆಗೆ ಕೆಲವು ವ್ಯಂಗ್ಯಚಿತ್ರಕಾರರು "ಕೇಮ್ ಚೋ ಟ್ರಂಪ್ ಗೋಡೆ" (ಕೇಮ್ ಚೊ ಎಂದರೆ ಗುಜರಾತಿಯಲ್ಲಿ 'ಹೇಗಿದ್ದೀರಿ') ಎಂಬ ಹೆಸರಿಟ್ಟಿದ್ದಾರೆ. ಟ್ರಂಪ್ ಅವರು ಈ ಗೋಡೆಯ ಆಚೆ ಇರುವುದು ಮೆಕ್ಸಿಕೋ ಏನು ಎಂದು ಕೇಳಬಹುದು ಎಂದೂ ಒಬ್ಬ ವ್ಯಂಗ್ಯಚಿತ್ರಕಾರರಿಗೆ ಅನಿಸಿದೆ!

ಪಿಎಸ್ಎ ಅಡಿಯಲ್ಲಿ ಒಮರ್ ಅಬ್ದುಲ್ಲ ವಿರುದ್ಧ ಆಪಾದನೆ: "ಉಗ್ರವಾದ ತುತ್ತತುದಿಯಲ್ಲಿದ್ದಾಗ ಮತಗಳನ್ನು ಶೇಖರಿಸಿದ್ದು"



ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ

ನವ-ಉದಾರವಾದೀ ನಿರ್ಬಂಧಗಳ ಜ್ಞಾನವೂ ಇಲ್ಲ, ನಿರ್ಬಂಧಗಳನ್ನು ಮೀರಿ ನಿಲ್ಲುವ ಧೈರ್ಯವೂ ಇಲ್ಲ



ಈ ವರ್ಷದ ಬಜೆಟಿನಲ್ಲಿ ಮನರೇಗ ಮತ್ತು ಆಹಾರ ಸಬ್ಸಿಡಿ ಇವೆರಡಕ್ಕೂ ಹಣ ಕಡಿತ ಮಾಡಿರುವ ಉದಾಹರಣೆಗಳು ತೋರಿಸುವಂತೆ, ಮೋದಿ ಸರಕಾರಕ್ಕೆ ಜನಕಲ್ಯಾಣದ ಬದ್ಧತೆಗಳೇನೂ ಇಲ್ಲ; ಅದಕ್ಕೆ ಅಲ್ಪಕಾಲೀನ "ಪ್ರದರ್ಶನ ಬೊಂಬೆಗಳು" ಮಾತ್ರವೇ ಬೇಕಾಗಿರುವುದು, ನಾಳೆ ಏನಾಗಬಹುದು ಎಂಬ ಯೋಚನೆಯೂ ಇಲ್ಲ. ಅರ್ಥ ವ್ಯವಸ್ಥೆಯ ಉತ್ತಮ ನಿರ್ವಹಣೆಗೆ ಒಂದು ಕಾರ್ಯಸಾಧ್ಯ ಆಧಾರವನ್ನು ಒದಗಿಸುವ ಆಸಕ್ತಿ ಅದಕ್ಕೆ ಸೊನ್ನೆಯೇ. ಅರ್ಥವ್ಯವಸ್ಥೆಗೆ ಉತ್ತೇಜನೆ ನೀಡಲು ಉಳ್ಳವರ ಮೇಲೆ ತೆರಿಗೆ ಹಾಕಿ ಸಾರ್ವಜನಿಕ ವೆಚ್ಚದ ಪ್ರಮಾಣವನ್ನು ಹೆಚ್ಚಿಸಿಕೊಳ್ಳಬೇಕೆಂಬ ಯೋಚನೆಯಂತೂ ಇಲ್ಲವೇ ಇಲ್ಲ. ಏಕೆಂದರೆ ಆಗ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ದೇಶೀ ಕಾರ್ಪೊರೇಟ್ ಕುಳಗಳ ಎದುರು ಸೆಟೆದು ನಿಲ್ಲಬೇಕಾಗುತ್ತದೆ. ಮೋದಿ ಸರಕಾರಕ್ಕೆ ಇಂತಹ ಛಾತಿ ಇಲ್ಲ ಮಾತ್ರವಲ್ಲ, ಮೂಲಭೂತ ಸಮಸ್ಯೆಯ ಅರಿವೂ ಅದಕ್ಕಿಲ್ಲ.

ಪ್ರೊ. ಪ್ರಭಾತ್ ಪಟ್ನಾಯಕ್

ಇಂದಿನ ದಿನಗಳಲ್ಲಿ ಬಜೆಟ್ ಅಂಕಿ-ಅಂಶಗಳಿಗೆ ಏನೂ ಅರ್ಥವಿಲ್ಲ. ಬಜೆಟ್ ಒದಗಿಸಿರುವುದು ಮತ್ತು ವಾಸ್ತವವಾಗಿ ನಡೆದದ್ದು ಇವೆರಡರ ನಡುವಿನ ವ್ಯತ್ಯಾಸ ಎರಡು ವರ್ಷಗಳ ನಂತರವೂ ಬೆಳಕಿಗೆ ಬರುವುದಿಲ್ಲ. ಈ ಮೊದಲು ಇದನ್ನು ಎರಡು ವರ್ಷಗಳೊಳಗೇ ತಿಳಿಸಬೇಕಾಗಿತ್ತು. ಇದನ್ನು ತಿಳಿದಿರುವ ಸರಕಾರ, ಬಜೆಟಿನಲ್ಲಿ, ಅತಿಶಯವಾದ ಮತ್ತು ಅದರಿಂದಾಗಿ ಅರ್ಥಹೀನವಾದ, ಆದರೆ ಸುಂದರವಾಗಿ ಕಾಣುವ ಅಂಕಿ-ಅಂಶಗಳನ್ನು ಕೊಡುತ್ತದೆ. 2020-21ರ ಕೇಂದ್ರ ಬಜೆಟಿನ ಗಮನಾರ್ಹ ಸಂಗತಿಯೆಂದರೆ, ಇಂತಹ ಭರ್ಜರಿ ಅಂಕಿ-ಅಂಶಗಳಿಂದ ತುಳುಕುತ್ತಿದ್ದರೂ, ಅದು ಎಷ್ಟು ಸಪ್ಪೆಯಾಗಿತ್ತೆಂದರೆ, ಸರಕಾರದ ಹೊರಗೆ ಯಾರೂ ಅದರ ಬಗ್ಗೆ ಒಂದಾದರೂ ಒಳ್ಳೆಯ ಮಾತು ಹೇಳುವಂತಿರಲಿಲ್ಲ. ಭರ್ಜರಿಯಾಗಿದ್ದರೂ, ಅದು ಸುಂದರವೂ ಆಗಿರಲಿಲ್ಲ. ಬಹುಶಃ ಆರ್ಥಿಕ ಸನ್ನಿವೇಶ ಸರಕಾರ ಒಪ್ಪಿಕೊಂಡಿರುವುದಕ್ಕಿಂತಲೂ ಹೆಚ್ಚು ಕೆಟ್ಟಿರಬೇಕೇನೋ ಎಂಬ ಸಂದೇಹವನ್ನು ಇದು ಮೂಡಿಸುವಂತಿದೆ.

ಅರ್ಥವ್ಯವಸ್ಥೆಯಲ್ಲಿನ ಒಂದು ಸಮಸ್ಯೆ ಬೇಡಿಕೆಯಲ್ಲಿನ ಕೊರತೆಯಿಂದ ಬರುತ್ತಿದೆ ಎಂದು ಹೆಚ್ಚಿನ ಮಂದಿ ಈಗ ಒಪ್ಪುತ್ತಿದ್ದಾರೆ. ಆದ್ದರಿಂದ, ಈ ಬಜೆಟಿನಲ್ಲಿ, ಈ ಬೇಡಿಕೆಯ ಕೊರತೆಯನ್ನು ಸರಿಪಡಿಸ ಬಹುದಾಗಿದ್ದ ಸಾರ್ವಜನಿಕ ವೆಚ್ಚದತ್ತ ಹೆಚ್ಚಿನ ಒತ್ತು ಇರುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ, ಇಂತಹ ಒತ್ತು ಇಲ್ಲವೇ ಇಲ್ಲ. ನಾಮಿನಲ್ ಜಿಡಿಪಿ 10% ದಷ್ಟು ವೃದ್ಧಿಯಾಗುತ್ತದೆ ಎನ್ನುತ್ತ ಒಟ್ಟು ಸರಕಾರೀ ವೆಚ್ಚ 2019-20ರ ಪರಿಷ್ಕೃತ ಅಂದಾಜುಗಳಿಗೆ ಹೋಲಿಸಿದರೆ 11% ದಷ್ಟು ಮಾತ್ರ ಏರುತ್ತದೆ ಎನ್ನಲಾಗಿದೆ. ಅಂದರೆ ಸಾರ್ವಜನಿಕ ವೆಚ್ಚದ ಪ್ರಮಾಣ ಒಟ್ಟು ಜಿಡಿಪಿಯಲ್ಲಿ ಏನೇನೂ ಹೆಚ್ಚುತ್ತಿಲ್ಲ, ಅರ್ಥಾತ್ ಬೇಡಿಕೆ ಹೆಚ್ಚಳಕ್ಕೆ ಅಗತ್ಯವಾದ ಉತ್ತೇಜನೆಯೇ ಇಲ್ಲ.

ಒಂದು ಹೆಜ್ಜೆಯನ್ನೂ ಮುಂದಿಟ್ಟಿಲ್ಲ

ಇಷ್ಟೇ ಅಲ್ಲ, ಸಾರ್ವಜನಿಕ ವೆಚ್ಚಗಳ ಈ ಗುರಿಯನ್ನು ಕೂಡ ತಲುಪುವ ಸಾಧ್ಯತೆ ಇಲ್ಲ. 2019-20ರ ತೆರಿಗೆ ಆದಾಯಗಳ ಪರಿಷ್ಕೃತ ಅಂದಾಜು ಆ ವರ್ಷದ ಬಜೆಟ್ ಅಂದಾಜುಗಳಿಗಿಂತ ಬಹಳ ಕಡಿಮೆಯಿದೆ. ಆದರೂ ಕೂಡ ಅದು 2018-19ಕ್ಕೆ ಹೋಲಿಸಿದರೆ 14.5% ದಷ್ಟು ಏರಿಕೆ ಕಾಣುತ್ತದೆ ಎನ್ನಲಾಗಿದೆ. ಇದು, ಈ ಎರಡು ವರ್ಷಗಳ ನಾಮಿನಲ್ ಜಿಡಿಪಿ ಬೆಳವಣಿಗೆ ಕೇವಲ 7.5% ಎಂದಿರುವಾಗ, ಅಸಾಧ್ಯವೇ ಎನ್ನಬಹುದು. ಇದರಿಂದಾಗಿ 2020-21ರ ತೆರಿಗೆ ಆದಾಯ ಕುರಿತ ಬಜೆಟ್ ಅಂದಾಜು ಬಹಳಷ್ಟು ಅತಿಶಯಗೊಳಿಸಿರುವ ಅಂಕಿ-ಅಂಶ. ಇದರ ಪರಿಣಾಮವೆಂದರೆ ವಾಸ್ತವ ತೆರಿಗೆ ಆದಾಯ ಈ ಅಂದಾಜಿಗಿಂತ ಎಷ್ಟು ಕಡಿಮೆಯಾಗುತ್ತದೋ, ಅಷ್ಟರ ಮಟ್ಟಿಗೆ ಸಾರ್ವಜನಿಕ ವೆಚ್ಚಗಳ ಪ್ರಮಾಣವೂ ಖಂಡಿತಾ ಇಳಿಯುತ್ತದೆ. ಸಾರ್ವಜನಿಕ ವಲಯದ ಶೇರು ಹಿಂಪಡಿಕೆಯ ಗುರಿಯ ವಿಷಯದಲ್ಲೂ ಇದೇ ಆಗುತ್ತಿದೆ. ವಾಸ್ತವವಾಗಿ, ಇದರ ಹಿಂದಿರುವ ವಿಚಾರವೇ ಅಸಂಬದ್ಧ ಮತ್ತು ಅಪಾಯಕಾರಿ. ಆದಾಗ್ಯೂ 2019-20ರಲ್ಲಿ ಆದಂತೆ 2020-21ರಲ್ಲೂ ಈ ಗುರಿ ಈಡೇರದಿದ್ದರೆ, ಸಾರ್ವಜನಿಕ ವೆಚ್ಚಗಳ ಬಜೆಟ್ ಗುರಿಗಳನ್ನು ತಲುಪುವುದು ಮತ್ತಷ್ಟು ಕಷ್ಟವಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಅರ್ಥ ವ್ಯವಸ್ಥೆಗೆ ಅಗತ್ಯವಾಗಿರುವ ಉತ್ತೇಜನೆ ನೀಡುವಲ್ಲಿ ಈ ಬಜೆಟ್ ಒಂದು ಹೆಜ್ಜೆಯನ್ನೂ ಮುಂದಿಟ್ಟಿಲ್ಲ.

ಯಾವ ವಲಯಗಳಲ್ಲಿ ವೆಚ್ಚದ ಪರಿಣಾಮಗಳು ಬಹುಮುಖಿಯಾಗಿರುತ್ತವೋ, ಅದರಿಂದಾಗಿ ವೆಚ್ಚಗಳಲ್ಲಿ ಗರಿಷ್ಟ ಹೆಚ್ಚಳ ಕಾಣಬೇಕಿತ್ತೋ, ಅಂತಹ ವಲಯಗಳಿಗೇ ಹಣನೀಡಿಕೆ ನಿಕೃಷ್ಟ ಪ್ರಮಾಣದಲ್ಲಿರುವುದು ಒಂದು ವಿಚಿತ್ರವೇ ಸರಿ. ಕೃಷಿ, ಗ್ರಾಮೀಣಾಭಿವೃದ್ಧಿ ಮತ್ತು ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಸಂಬಂಧಪಟ್ಟಂತೆ ಹೀಗಾಗಿದೆ.

ಮನರೇಗ ಮತ್ತು ಆಹಾರ ಸಬ್ಸಿಡಿ: ಹಣ ಕಡಿತ

ಆತಂಕ ಉಂಟು ಮಾಡುವಂತಹ ಸಂಗತಿಯೆಂದರೆ, ಎರಡು ವಲಯಗಳಲ್ಲಿ ಹಣ ನೀಡಿಕೆಯೇ ಇಳಿದಿದೆ. ಇವುಗಳಲ್ಲಿ ಒಂದು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ(ಮನರೇಗ). ಇದಕ್ಕೆ 2018-19ರಲ್ಲಿ 61815 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿತ್ತು, 2019-20ರ ಪರಿಷ್ಕೃತ ಅಂದಾಜುಗಳ ಪ್ರಕಾರ 71002 ಕೋಟಿ ರೂ.ಗಳನ್ನು ವೆಚ್ಚಮಾಡಲಾಗಿದೆ. ಇದರಲ್ಲಿ ಪಾವತಿ ಮಾಡದ ಕೂಲಿ ಬಾಕಿಗಳೂ ಸೇರಿವೆ ಎಂಬುದು ಬೇರೆ ಮಾತು. ಇಂದು ಗ್ರಾಮೀಣ ಭಾರತದಲ್ಲಿ ಉದ್ಯೋಗದ ಹೀನಾಯ ಪರಿಸ್ಥಿತಿ ಇರುವಾಗ, ಅದರಿಂದಾಗಿ ಮನರೇಗ ಕೆಲಸಗಳಿಗೆ ಬೇಡಿಕೆ ಹೆಚ್ಚಿರುವಾಗ, ಬಾಕಿ ಕೂಲಿಗಳೂ ಸೇರಿದಂತೆ ಕನಿಷ್ಟ 1 ಲಕ್ಷ ಕೋಟಿ ರೂ.ಗಳನ್ನು ಕೊಡಬೇಕಾಗಿತ್ತು. ಅದರ ಬದಲು ಕೇವಲ 61,500 ಕೋಟಿ ರೂ.ಗಳನ್ನು ಮಾತ್ರ ನೀಡಲಾಗಿದೆ. ಇದು ಕಳೆದ ಎರಡು ವರ್ಷಗಳಲ್ಲಿ ನೀಡಿದ್ದಕ್ಕಿಂತಲೂ ಕಡಿಮೆ. ಈ ರೀತಿ ಅಲ್ಪ ನೀಡಿಕೆಯ ಮೂಲಕ, ಬೇಕೆಂದೇ ಕೂಲಿ ಬಾಕಿಗಳನ್ನು ಹೆಚ್ಚಿಸಿ, ಆ ಮೂಲಕ ಈ ಕಾಯ್ದೆಯ ಅಡಿಯಲ್ಲಿ ಕೆಲಸ ಕೇಳುವುದನ್ನೇ ನಿರುತ್ತೇಜಿಸಿ, ಮೋದಿ ಸರಕಾರ ಈ ಕಾರ್ಯಕ್ರಮವನ್ನೇ ಕೊನೆಗೊಳಿಸುವ ಯೋಜನೆ ಹಾಕಿಕೊಂಡಿದೆಯೇನೋ ಎಂಬ ಸಂದೇಹವನ್ನು ಉಂಟು ಮಾಡಿದೆ.

ಇಂತಹ ಸಂದೇಹ ಅನಿವಾರ್ಯವಾಗಿರುವ ಮತ್ತೊಂದು ವಲಯ ಎಂದರೆ ಆಹಾರ ಸಬ್ಸಿಡಿ. 2019-20ರಲ್ಲಿ ಈ ಬಾಬ್ತು 1,84,220 ಕೋಟಿ ರೂ.ಗಳನ್ನು ನೀಡಲಾಗಿತ್ತು. ಇದಕ್ಕೆ ಹೋಲಿಸಿದರೆ, ಪ್ರಸಕ್ತ ಬಜೆಟ್ ನೀಡಿರುವುದು ಕೇವಲ 1,08,688 ಕೋಟಿ ರೂ. ಭಾರತದಲ್ಲಿ ಆಹಾರ ಸಬ್ಸಿಡಿ ಎಂದರೆ ಭಾರತ ಆಹಾರ ನಿಗಮ(ಎಫ್‌ಸಿಐ)ಕ್ಕೆ ತನ್ನ ಆಯ-ವ್ಯಯ ಖಾತೆಗಳನ್ನು ಸಮತೋಲನಗೊಳಿಸಲು ಕೊಡಬೇಕಾಗುವ ಹಣವೇ ಆಗಿರುವುದರಿಂದ, ಮತ್ತು ಎಫ್‌ಸಿಐ ಈಗ ದೊಡ್ಡ ಪ್ರಮಾಣದ ಆಹಾರ ದಾಸ್ತಾನನ್ನು ನಿರ್ವಹಿಸಬೇಕಾಗಿರುವುದರಿಂದ, ಆಹಾರ ಸಬ್ಸಿಡಿ ಕಳೆದ ವರ್ಷಕ್ಕಿಂತ ಬಹಳ ಹೆಚ್ಚಾಗಿರಬೇಕಿತ್ತು. ಬದಲಿಗೆ, ಅದು ಕಳೆದ ವರ್ಷಕ್ಕಿಂತ 40% ದಷ್ಟು ಕಡಿಮೆಯಾಗಿದೆ. ನಿಜ, ಇದಕ್ಕೊಂದು ಕಾರಣವಿದೆ. ಸರಕಾರ ಈಗ ಎಫ್‌ಸಿಐ ಬೆಳೆಗಳನ್ನು ರೈತರಿಂದ ಖರೀದಿಸಲು ಮಾತ್ರವಲ್ಲ, ಸರಕಾರದಿಂದ ಅದಕ್ಕಿಂತ ಬರಬೇಕಾದ ಹಣವನ್ನೂ ಬ್ಯಾಂಕುಗಳಿಂದ ಸಾಲವಾಗಿ ಪಡೆಯುವಂತೆ ಮಾಡುತ್ತಿದೆ. ಇಲ್ಲಿ ಸರಕಾರ ಮಾರುಕಟ್ಟೆಗೆ ಹೋಗದೆಯೇ ಬ್ಯಾಂಕುಗಳಿಂದ ಪರೋಕ್ಷವಾಗಿ ಸಾಲ ತರುತ್ತಿದೆ ಎಂದೇ ಹೇಳಬಹುದು. ಈ ಪ್ರಕ್ರಿಯೆಯಲ್ಲಿ ಅದು ಹಣಕಾಸು ಕೊರತೆಯನ್ನು ಅಷ್ಟರ ಮಟ್ಟಿಗೆ ಕಡಿಮೆ ತೋರಿಸಬಹುದು.

ಆದರೆ ಇಂತಹ 'ಅನುಕೂಲಸಿಂಧು' ಕ್ರಮಗಳು ಕೆಲವು ಸಮಯದ ನಂತರ ತಿರುಗುಬಾಣಗಳಾಗಿಯೇ ಆಗುತ್ತವೆ. ಈ ವಿಚಾರದಲ್ಲಿ ಇದು ಎರಡು ಕಾರಣಗಳಿಂದ ಆಗಬಹುದು: ಮೊದಲನೆಯದ್ದು, ಎಫ್‌ಸಿಐಗೆ ಎಡೆಬಿಡದೆ ಬಾಕಿಗಳನ್ನು ನಿರ್ಮಿಸುವುದು ಮತ್ತು ಆ ಸಂಸ್ಥೆ ಬ್ಯಾಂಕುಗಳಿಗೆ ಎದುರಾಗಿ ಸಾಲಗಳನ್ನು ಪೇರಿಸಿಕೊಳ್ಳುವಂತೆ ಬಲವಂತ ಮಾಡಿ ಒತ್ತಡಕ್ಕೆ ಒಳಪಡಿಸುತ್ತದೆ. ಎರಡನೆಯದಾಗಿ, ಬ್ಯಾಂಕುಗಳು ಎಫ್‌ಸಿಐನಿಂದ ಪಡೆಯುವ ಬಡ್ಡಿಯ ದರ, ಸರಕಾರವೇ ಮಾರುಕಟ್ಟೆಗೆ ಹೋಗಿ ಆ ಹಣವನ್ನು ಎತ್ತಿ ಎಫ್‌ಸಿಐಗೆ ಕೊಟ್ಟಿದ್ದರೆ ತೆರಬೇಕಾದ ಬಡ್ಡಿ ದರಕ್ಕಿಂತ ಹೆಚ್ಚಿದೆಯಾದ್ದರಿಂದ ಇಡೀ ಸಾರ್ವಜನಿಕ ಹಣಕಾಸು ವ್ಯವಸ್ಥೆಯೇ ಒತ್ತಡಕ್ಕೆ ಒಳಗಾಗುತ್ತದೆ. ಕ್ರಮೇಣ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು "ನಿರ್ವಹಿಸುವುದು ವಿಪರೀತ ವೆಚ್ಚದಾಯಕ" ಎನ್ನುತ್ತ ಸರಕಾರ ಈ ವ್ಯವಸ್ಥೆಯನ್ನೇ ಕೊನೆಗೊಳಿಸ ಲಾರಂಭಿಸುವಂತಹ ಸಮಯ ಬರಬಹುದೇನೋ ಎಂಬ ಸಂದೇಹವನ್ನು ಇದು ಎಬ್ಬಿಸುತ್ತದೆ.

ಜನಕಲ್ಯಾಣದ ಬದ್ಧತೆಯೂ ಇಲ್ಲ.
ನಾಳೆಯ ಯೋಚನೆಯೂ ಇಲ್ಲ.

ಈ ಎರಡೂ ಉದಾಹರಣೆಗಳು ತೋರಿಸುವಂತೆ, ಮೋದಿ ಸರಕಾರಕ್ಕೆ ಜನಕಲ್ಯಾಣದ ಬದ್ಧತೆಗಳೇನೂ ಇಲ್ಲ; ಅದಕ್ಕೆ ಅಲ್ಪಕಾಲೀನ "ಪ್ರದರ್ಶನ ಬೊಂಬೆಗಳು" ಮಾತ್ರವೇ ಬೇಕಾಗಿರುವುದು, ನಾಳೆ ಏನಾಗಬಹುದು ಎಂಬ ಯೋಚನೆಯೂ ಇಲ್ಲ. ಅರ್ಥ ವ್ಯವಸ್ಥೆಯ ಉತ್ತಮ ನಿರ್ವಹಣೆಗೆ ಒಂದು ಕಾರ್ಯಸಾಧ್ಯ ಆಧಾರವನ್ನು ಒದಗಿಸುವ ಆಸಕ್ತಿ ಅದಕ್ಕೆ ಸೊನ್ನೆಯೇ. ಜಗತ್ತಿನ ಎಲ್ಲೇ ಆಗಲಿ, ಯಾವುದೇ ಹೋಲಿಸಬಹುದಾದ ಖಾಸಗಿ ಸಂಸ್ಥೆಗಿಂತ ಎಷ್ಟೋ ಉತ್ತಮ ರೀತಿಯಲ್ಲಿ ನಡೆಯುತ್ತಿರುವ ಎಲ್‌ಐಸಿ ಯೂ ಸೇರಿದಂತೆ ಸಾರ್ವಜನಿಕ ಸಂಸ್ಥೆಗಳಲ್ಲಿ ಸರಕಾರದ ಪಾಲನ್ನು ಮಾರುವ ಅದರ ಪ್ರಸ್ತಾವಗಳು, ಈ ರೀತಿ ಬರೀ ಹತಾಶೆಯಿಂದ ಹುಟ್ಟಿದ ಯೋಚನಾಹೀನ ಕ್ರಮಗಳತ್ತ ಅಪಾಯಕಾರೀ ರೀತಿಯಲ್ಲಿ ತೇಲಿಹೋಗುತ್ತಿರುವುದರ ಭಾಗವಾಗಿದೆ.

ಅದೇ ವೇಳೆಯಲ್ಲಿ ಈ ಬಜೆಟಿನ ಮತ್ತು ಒಟ್ಟಾರೆಯಾಗಿ ಆರ್ಥಿಕ ಧೋರಣೆಗಳ ಶಿಥಿಲತೆಗಳ ಬೇರು ಇರುವುದು ನವ-ಉದಾರವಾದೀ ವ್ಯವಸ್ಥೆಯಲ್ಲಿಯೇ. ಮೋದಿ ಸರಕಾರಕ್ಕೆ ಅರ್ಥವ್ಯವಸ್ಥೆಯ ಮೇಲೆ ನವ-ಉದಾರವಾದೀ ನಿರ್ಬಂಧಗಳನ್ನು ಅರ್ಥಮಾಡಿಕೊಳ್ಳುವಷ್ಟು ಅರ್ಥಶಾಸ್ತ್ರದ ಜ್ಞಾನವೂ ಇಲ್ಲ, ಈ ನಿರ್ಬಂಧಗಳಿಂದ ಪಾರಾಗುವ ಪ್ರಯತ್ನಗಳನ್ನು ಮಾಡಲು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳವನ್ನು ಎದುರಿಸುವಷ್ಟು ಧೈರ್ಯವೂ ಇಲ್ಲ- ಮೇಲೆ ನೋಡಿದಂತೆ ಹಣಕಾಸು ಕೊರತೆಯನ್ನು ಮರೆ ಮಾಚಲು ಎಫ್‌ಸಿಐಗೆ ಹಣಕಾಸು ಒದಗಿಸುವುದನ್ನು ಬ್ಯಾಂಕ್‌ಗಳ ತಲೆಯ ಮೇಲೆ ಹಾಕುವಂತಹ ಸತ್ವಹೀನ ಮತ್ತು ಅಂತಿಮವಾಗಿ ಪ್ರತಿಕೂಲಕರವಾದ ಕ್ರಮಗಳನ್ನಷ್ಟೇ ಅದು ಕೈಗೊಳ್ಳಬಲ್ಲದು. ಆದರೆ ಈ ನಿರ್ಬಂಧಗಳಂತೂ ಇರುವುದು ವಾಸ್ತವ.

ಸಂಪನ್ಮೂಲಗಳು ಉಳ್ಳವರಿಂದಲೇ ಬರಬೇಕು

ಅರ್ಥವ್ಯವಸ್ಥೆಯಲ್ಲಿ ಸರಕುಗಳಿಗೆ ಬೇಡಿಕೆಯನ್ನು ಪ್ರೇರೇಪಿಸಲು ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕ ವೆಚ್ಚಗಳನ್ನು ಮಾಡಬೇಕಾಗುತ್ತದೆ. ಇದಕ್ಕೆ ಸಂಪನ್ಮೂಲಗಳು ದುಡಿಯುವ ಜನತೆಯಿಂದ ಅಲ್ಲ, ಬಂಡವಳಿಗರಿಂದ, ಒಟ್ಟಾರೆಯಾಗಿ ಸಮಾಜದಲ್ಲಿ ಉತ್ತಮ ಸ್ಥಿತಿಯಲ್ಲಿರುವ ಉಳ್ಳವರಿಂದ ಬರಬೇಕು. ಏಕೆಂದರೆ ಅವರು ದುಡಿಯುವ ಜನಗಳಂತೆ ತಮ್ಮೆಲ್ಲ ಆದಾಯಗಳನ್ನು ಅನುಭೋಗಕ್ಕೇ ಬಳಸಿಕೊಳ್ಳಬೇಕಾಗಿಲ್ಲ, ಅದನ್ನು ಭಾಗಶಃ

ಪುಟ 14 ನೋಡಿ



ಈ ಬಜೆಟಿನ ಮತ್ತು ಒಟ್ಟಾರೆಯಾಗಿ ಆರ್ಥಿಕ ಧೋರಣೆಗಳ ಶಿಥಿಲತೆಗಳ ಬೇರು ಇರುವುದು ನವ-ಉದಾರವಾದೀ ವ್ಯವಸ್ಥೆಯಲ್ಲಿಯೇ. ಮೋದಿ ಸರಕಾರಕ್ಕೆ ಅರ್ಥವ್ಯವಸ್ಥೆಯ ಮೇಲೆ ನವ-ಉದಾರವಾದೀ ನಿರ್ಬಂಧಗಳನ್ನು ಅರ್ಥಮಾಡಿಕೊಳ್ಳುವಷ್ಟು ಅರ್ಥಶಾಸ್ತ್ರದ ಜ್ಞಾನವೂ ಇಲ್ಲ, ಈ ನಿರ್ಬಂಧಗಳಿಂದ ಪಾರಾಗುವ ಪ್ರಯತ್ನಗಳನ್ನು ಮಾಡಲು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳವನ್ನು ಎದುರಿಸುವಷ್ಟು ಧೈರ್ಯವೂ ಇಲ್ಲ- ಹಣಕಾಸು ಕೊರತೆಯನ್ನು ಮರೆ ಮಾಚಲು ಎಫ್‌ಸಿಐಗೆ ಹಣಕಾಸು ಒದಗಿಸುವುದನ್ನು ಬ್ಯಾಂಕ್‌ಗಳ ತಲೆಯ ಮೇಲೆ ಹಾಕುವಂತಹ ಸತ್ವಹೀನ ಮತ್ತು ಅಂತಿಮವಾಗಿ ಪ್ರತಿಕೂಲಕರವಾದ ಕ್ರಮಗಳನ್ನಷ್ಟೇ ಅದು ಕೈಗೊಳ್ಳಬಲ್ಲದು.



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

...ಜ್ಞಾನವೂ ಇಲ್ಲ, ಧೈರ್ಯವೂ ಇಲ್ಲ

ಪುಟ 13 ರಿಂದ

ಉಳಿತಾಯಗಳಾಗಿ ಹಿಡಿದಿಟ್ಟುಕೊಳ್ಳಬಲ್ಲರು. ಇದು ಅರ್ಥವ್ಯವಸ್ಥೆಯಲ್ಲಿನ ಬೇಡಿಕೆಯ ಭಾಗವಾಗಿರುವುದಿಲ್ಲ. ಆದರೆ ಬಂಡವಾಳಶಾಹಿಗಳು ಮತ್ತು ಒಟ್ಟಾರೆಯಾಗಿ ಸಮಾಜದಲ್ಲಿ ಉತ್ತಮ ಸ್ಥಿತಿಯಲ್ಲಿರುವ ಉಳ್ಳವರ ಮೇಲೆ ತೆರಿಗೆ ಹಾಕಬೇಕಾದರೆ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ದೇಶೀ ಕಾರ್ಪೊರೇಟ್ ಕುಳಗಳ ಎದುರು ಸೆಟೆದು ನಿಲ್ಲಬೇಕಾಗುತ್ತದೆ. ಮೋದಿ ಸರಕಾರಕ್ಕೆ ಇಂತಹ ಛಾತಿಯಿಲ್ಲ ಮಾತ್ರವಲ್ಲ, ಮೂಲಭೂತ ಸಮಸ್ಯೆಯ ಅರಿವೂ ಅದಕ್ಕಿಲ್ಲ.

ಕೆಲವು ಸಮಯಗಳ ಹಿಂದೆ ಅದು ಬಿಕ್ಕಟ್ಟನ್ನು ನಿವಾರಿಸಲು ನೆರವಾಗಬಹುದೆಂದು ಕೊಟ್ಟ ಕಾರ್ಪೊರೇಟ್ ತೆರಿಗೆ ರಿಯಾಯ್ತಿಗಳು ವಾಸ್ತವವಾಗಿ ತದ್ವಿರುದ್ಧ ಪರಿಣಾಮವನ್ನೇ ಉಂಟು ಮಾಡಿವೆ, ಬಿಕ್ಕಟ್ಟನ್ನು ಮತ್ತಷ್ಟು ಬಿಗಡಾಯಿಸಿವೆಯಷ್ಟೇ. ಉದಾಹರಣೆಗೆ, ಇಂತಹ ಪ್ರತಿ 100ರೂ. ರಿಯಾಯ್ತಿಗಳಲ್ಲಿ ಕಾರ್ಪೊರೇಟ್ ಮಂದಿ 50ರೂ. ಉಳಿತಾಯವಾಗಿ ಇಡುತ್ತಾರೆ, ಈ ಮೂಲಕ 50ರೂ.ಗಳಷ್ಟು ಅರ್ಥವ್ಯವಸ್ಥೆಯಲ್ಲಿ ಬೇಡಿಕೆ ಇಳಿಯುತ್ತದೆ.

ಅದೇ ರೀತಿಯಲ್ಲಿ, ಪ್ರಸಕ್ತ ಬಜೆಟಿನಲ್ಲಿ 40,000 ಕೋಟಿ ರೂ.ಗಳಷ್ಟು ತೆರಿಗೆ ರಿಯಾಯ್ತಿಗಳು ಮತ್ತು 25,000 ಕೋಟಿ ರೂ.ಗಳಷ್ಟು ಡಿವಿಡೆಂಡ್ ತೆರಿಗೆ ರಿಯಾಯ್ತಿಗಳಿಂದಾಗಿ ಸರಕಾರದ ವೆಚ್ಚದ ಪ್ರಮಾಣ 65,000 ಕೋಟಿ ರೂ.ಗಳಷ್ಟು ಕಡಿಮೆಯಾಗಿದೆ, ಇದರಿಂದ ಅರ್ಥವ್ಯವಸ್ಥೆಯಲ್ಲಿ ಒಟ್ಟು ಬೇಡಿಕೆಯ ಪ್ರಮಾಣ ಇಳಿಯುತ್ತದೆ, ಏಕೆಂದರೆ ಈ ರಿಯಾಯ್ತಿಗಳ ಫಲಾನುಭವಿಗಳು ಈ ಎಲ್ಲ ಹಣವನ್ನೂ ಅನುಭೋಗಕ್ಕೆ ಬಳಸುವುದಿಲ್ಲ.

ಇದು ಅರ್ಹರಿಗೆ ತೆರಿಗೆ ರಿಯಾಯ್ತಿ ನೀಡುವುದರ ಮಾಡುವ ಹುರುಳಿಲ್ಲದ ಆಕ್ಷೇಪ ಅಲ್ಲ. ಬದಲಿಗೆ, ತೆರಿಗೆ ರಿಯಾಯ್ತಿ ನೀಡಬೇಕಾದರೆ, ಇಂತಹ ತೆರಿಗೆಗಳು ಅರ್ಥವ್ಯವಸ್ಥೆಯಲ್ಲಿನ ಒಟ್ಟು ಬೇಡಿಕೆಯನ್ನು ತಗ್ಗಿಸದಂತಾಗಬೇಕಾದರೆ, ಅದನ್ನು ಹಣಕಾಸು ಕೊರತೆಯ ಮೂಲಕವೇ, ಅಥವ ಸಮಾನತ್ವದ ದೃಷ್ಟಿಯಿಂದ ಹೇಳುವುದಾದರೆ, ಸಂಪತ್ತಿನ ಮೇಲೆ ಒಂದು ತೆರಿಗೆಯಿಂದಲೇ ಸಂಗ್ರಹಿಸಬೇಕಾಗುತ್ತದೆ.

ನಿರುದ್ಯೋಗ ಸಮಸ್ಯೆ ಇಂದು ಕಳೆದ ಅರ್ಧಶತಮಾನದಲ್ಲೇ ಅತ್ಯಂತ ಗಂಭೀರವಾಗಿದೆ. 2020–21ರ ಬಜೆಟ್ ಆರ್ಥಿಕ ಬೇಡಿಕೆಯನ್ನು ಉತ್ತೇಜಿಸಲು, ಆ ಮೂಲಕ ನಿರುದ್ಯೋಗವನ್ನು ಎದುರಿಸಲು ಏನೂ ಮಾಡಿಲ್ಲ ಎಂಬುದನ್ನು ಹೆಚ್ಚಿನ ಮಂದಿ ಒಪ್ಪಿಕೊಳ್ಳುತ್ತಾರೆ. ಆದರೆ ಈ ಬಿಕ್ಕಟ್ಟನ್ನು ಎದುರಿಸಿ ನಿಲ್ಲಲು ಬಂಡವಳಿಗರ ಮೇಲೆ ತೆರಿಗೆ ಹಾಕಬೇಕಾಗುತ್ತದೆ ಎಂಬುದು ಬಹಳ ಕಡಿಮೆ ಮಂದಿಗೆ ಕಾಣಿಸುತ್ತಿದೆ. ಕೆಲವರು, ಬೇಕಾದರೆ, ಹಣಕಾಸು ಕೊರತೆಯನ್ನು ಹೆಚ್ಚಿಸಬೇಕಾಗಬಹುದು ಎಂದೂ ಹೇಳುತ್ತಾರೆ. ಆದರೆ ಹಣಕಾಸು ಕೊರತೆ, ಅರ್ಥವ್ಯವಸ್ಥೆಯಲ್ಲಿನ ಬೇಡಿಕೆಯ ಕೊರತೆಯನ್ನೇನೋ ನಿವಾರಿಸಬಹುದು, ಆದರೆ ಹಣಕಾಸು ಕೊರತೆಯೆಂದರೆ ಬಂಡವಾಳಶಾಹಿಗಳಿಂದ ಸಾಲ ತರುವುದೇ ಆಗಿರುವುದರಿಂದ ಅದು ಬಂಡವಳಿಗರ ಮತ್ತು ಒಟ್ಟಾರೆಯಾಗಿ ಉಳ್ಳವರ ಕೈಗಳಲ್ಲಿ ಪುಕ್ಕಟೆಯಾಗಿ ಸಂಪತ್ತನ್ನು ಇಡುವ ಕೆಲಸವನ್ನೇ ಮಾಡುತ್ತದೆ. ಹೆಚ್ಚುತ್ತಿರುವ ಸಂಪತ್ತಿನ ಅಸಮಾನತೆಗಳು ಮೂಲಭೂತವಾಗಿ ಪ್ರಜಾಪ್ರಭುತ್ವಕ್ಕೆ ಒಡ್ಡುವ ಬೆದರಿಕೆಯೇ ಆಗುತ್ತದೆ. ಸಂಪತ್ತಿನ ಮೇಲೆ ತೆರಿಗೆಯಿಂದ ಸರಕಾರದ ವೆಚ್ಚಗಳನ್ನು ಹೆಚ್ಚಿಸಬಹುದಾದ್ದರಿಂದ, ಈ ಮೂಲಕ ಅದು ಈ ಅಸಮಾನತೆಯನ್ನು ಕಡಿಮೆ ಮಾಡುತ್ತದೆ. ಸಂಪತ್ತು ತೆರಿಗೆಯಿಂದ ಬಂಡವಳಿಗರು ಮತ್ತು ಉಳ್ಳವರೇನೂ ಮೊದಲಿಗಿಂತ ದರಿದ್ರರಾಗುವುದಿಲ್ಲ. ಆದರೆ ಅದು ಬಿಕ್ಕಟ್ಟನ್ನು ನಿವಾರಿಸುವ ಕೆಲಸ ಮಾಡುತ್ತದೆ. ಆದರೆ ಮೋದಿ ಸರಕಾರ ಇದನ್ನು ಅರ್ಥಮಾಡಿಕೊಳ್ಳಬಲ್ಲದು ಎಂದು ನಿರೀಕ್ಷಿಸುವಂತಿಲ್ಲ.

'ಕಾಶ್ಮೀರದಲ್ಲಿ ಸಹಜ ಸ್ಥಿತಿ' ಎಂಬುದು ಮಹಾ ಸುಳ್ಳು

'ಕಾಶ್ಮೀರದಲ್ಲಿ ಕಲಂ 370 ರದ್ದತಿ ನಂತರ ಕರಾಳತೆ ಆವರಿಸಿದ್ದು, ಜನರ ದಿನನಿತ್ಯದ ಬದುಕು ಮೂರಾಬಟ್ಟೆಯಾಗಿದೆ, ಕರ್ಫ್ಯೂ ಈಗಲೂ ಮುಂದುವರಿದೆ, ಟಿಯರ್ ಗ್ಯಾಸ್, ಪೆಲೆಟ್ ಗನ್ ಗಳ ಸದ್ದು ಮುಂದುವರಿದೆ, ಎನ್ ಕೌಂಟರ್ ನಲ್ಲಿ ಕಾಶ್ಮೀರಿ ಯುವಕರ ಕೊಲೆಯೂ ನಡೆಯುತ್ತಲೇ ಇವೆ, ಕಾಶ್ಮೀರ ಸಹಜ ಸ್ಥಿತಿಗೆ ಮರಳಿದೆ ಎಂಬ ಕೇಂದ್ರ ಸರ್ಕಾರದ ಹೇಳಿಕೆ ಮಹಾ ಸುಳ್ಳು' ಎಂದು ಕಾಶ್ಮೀರದ ಮಹಿಳಾ ಪತ್ರಕರ್ತರು ದೂರಿದರು.

ಎಲೆಕ್ಟ್ರಾನಿಕ್ ಸಿಟಿಯ ಇಂಡಿಯನ್ ಇನ್ಸ್ ಟಿಟ್ಯೂಟ್ ಆಫ್ ಇನ್ಫಾರ್ಮೇಷನ್ ಟೆಕ್ನಾಲಜಿ– ಬೆಂಗಳೂರು (ಐಐಐಟಿ–ಬಿ) ಹಾಗು 'ನೆಟ್ ವರ್ಕ್ ಆಫ್ ವಿಮೆನ್ ಇನ್ ಮೀಡಿಯಾ– ಇಂಡಿಯಾ' (ಎನ್ ಡಬ್ಲ್ಯೂಎಂಐ) ಜಂಟಿಯಾಗಿ 'ಡಿಜಿಟಲ್ ಯುಗದಲ್ಲಿ ಪತ್ರಿಕೋದ್ಯಮ ಕುರಿತು ಕಾಶ್ಮೀರಿ ಮಹಿಳಾ ಪತ್ರಕರ್ತರೊಂದಿಗೆ ಸಂವಾದ ಏರ್ಪಡಿಸಲಾಗಿತ್ತು. ಅಲ್ಲಿನ ಪರಿಸ್ಥಿತಿ ಕುರಿತು ಮಾತನಾಡಿದ ಪತ್ರಕರ್ತರು ಭದ್ರತೆಯ ಕಾರಣಗಳಿಗಾಗಿ ತಮ್ಮ ಹೆಸರನ್ನು ಬಹಿರಂಗಪಡಿಸಲು ಬಯಸಲಿಲ್ಲ.

ಕಾಶ್ಮೀರದ ವಾಸ್ತವ ಸ್ಥಿತಿಗತಿ ದೇಶಕ್ಕೆ, ಜಗತ್ತಿಗೆ ತಿಳಿಯದಂತೆ ಎಲ್ಲವನ್ನೂ ಕತ್ತಲಲ್ಲೇ ಇಡಲಾಗಿದೆ, ಇಂಟರ್ ನೆಟ್ ನಿರ್ಬಂಧಿಸಿದ್ದರಿಂದ ಕಾಶ್ಮೀರದ ಆಡಳಿತ ಸ್ತಬ್ಧವಾಗಿತ್ತು, ಆರೋಗ್ಯ ಸೇವೆ ಸಿಗದೇ ಅನೇಕ ಜನ ಪ್ರಾಣ ಕಳೆದುಕೊಂಡರು, ಪತ್ರಕರ್ತರ ಮೇಲೆ ದೌರ್ಜನ್ಯ– ನಿರ್ಬಂಧ, ಕ್ಯಾಮರಾವನ್ನು ಒಯ್ಯುವಂತಿರಲಿಲ್ಲ, ನಮ್ಮ ಕ್ಯಾಮರಾಗಳನ್ನು ಕಿತ್ತುಕೊಳ್ಳಲಾಯಿತು, ಸುದ್ದಿ ಕಳುಹಿಸಲು ಆಗುತ್ತಿರಲಿಲ್ಲ ಹೀಗಾಗಿ ಕಾಶ್ಮೀರದ ಯಾವುದೇ ಪತ್ರಿಕೆ ಅಥವಾ ವಾಹಿನಿ ಇಲ್ಲಿನ ಕರಾಳತೆಯನ್ನು ತೆರೆದಿಡಲು ಸಾಧ್ಯವಾಗಿಲ್ಲ ಎಂದರು.

ಪತ್ರಿಕಾ ಸ್ವಾತಂತ್ರ್ಯದ ದಮನ:

ಕಾಶ್ಮೀರದಲ್ಲಿ ಕರಾಳ ತುರ್ತು ಪರಿಸ್ಥಿತಿ ಈಗಲೂ ಮುಂದುವರಿದೆ, ಇದೀಗ ಇಂಟರ್ ನೆಟ್ ನೀಡಲಾಗಿದ್ದರೂ ಕೇವಲ 2ಜಿ ನೀಡಲಾಗಿದೆ, ಇದರಿಂದ ಸರ್ಕಾರದ ಸೇವೆಗಳು ಜನರಿಗೆ ಸಿಗುತ್ತಿಲ್ಲ, ಜತೆಗೆ, ಮಾಧ್ಯಮಗಳು ಡಿಜಿಟಲ್ ತಂತ್ರಜ್ಞಾನದ ಮೇಲೆ ಅವಲಂಬಿತವಾಗಿರುವುದರಿಂದ ಇಂಟರ್ ನೆಟ್ ಇಲ್ಲದೇ ಸುದ್ದಿಮನೆ ಖಾಲಿ ಖಾಲಿಯಾಗಿವೆ, ಹತ್ತಾರು ಮಂದಿ ಒಂದೇ ಕಂಪ್ಯೂಟರ್ ನಲ್ಲಿ ಕೆಲಸ ಮಾಡಬೇಕಿತ್ತು, ಕಾರಣ, ಈ ಸರ್ಕಾರ ವೈಫೈಯನ್ನೂ ನಮ್ಮಿಂದ ಕಿತ್ತುಕೊಂಡಿತ್ತು. ಹತ್ತಾರು ಮೈಲಿ ನಡೆದು ಹೋಗಿ ಸುದ್ದಿ ತರಬೇಕಿತ್ತು, ಮಹಿಳಾ ಪತ್ರಕರ್ತರಿಗಂತೂ ಇದು ಸವಾಲಿನ ಕೆಲಸವಾಗಿತ್ತು, ಸರ್ಕಾರದ ಪ್ರತಿನಿಧಿಗಳು ತಮಗೆ ಬೇಕಾದ ಸುದ್ದಿ ವಾಹಿನಿಗಳೊಂದಿಗೆ ಪತ್ರಿಕಾಗೋಷ್ಠಿ ನಡೆಸಿ ಅದೇ ಸತ್ಯವೆಂದು ಹೇಳಲಾಗುತ್ತಿತ್ತು. ಯಾರನ್ನೂ ಪ್ರಶ್ನಿಸುವಂತಿಲ್ಲ, ಇದೀಗ ಪ್ರಶ್ನಿಸುವುದೂ ಅಪರಾಧವಾಗಿದೆ. ಕಾಶ್ಮೀರದಲ್ಲಿ ವಾಹಿನಿ, ಮುದ್ರಣ ಮಾಧ್ಯಮ ಪೂರ್ತಿಯಾಗಿ ನಿಂತಿತ್ತು. ಇಂತಹ ಸಂದರ್ಭದಲ್ಲಿ ಇಲ್ಲಿನ ವಾಸ್ತವ ಸ್ಥಿತಿಯ ಕುರಿತು ದೇಶದ ಜನತೆಗೆ ತಿಳಿಸುವ ಉದ್ದೇಶದಿಂದ ದೇಶದ ಮುಖ್ಯ ವಾಹಿನಿ ಹಾಗು ಪತ್ರಿಕೆಗಳಿಗೆ ಸುದ್ದಿ ನೀಡಿದ್ದೆವು, ಆದರೆ ಯಾರೂ ಪ್ರಕಟಿಸಲಿಲ್ಲ, ಹೀಗಾಗಿ ಹೊರಜಗತ್ತಿಗೆ ಹೊತ್ತಿ ಉರಿಯುತ್ತಿರುವ ಕಾಶ್ಮೀರ ಕಾಣುವ ಬದಲು, ವಾಟ್ಸಪ್ ಯೂನಿವರ್ಸಿಟಿಯಿಂದ ಕೊಡಲಾಗುವ ಸುಳ್ಳುಗಳನ್ನೇ ವಾಸ್ತವವೆಂಬಂತೆ ಬಿಂಬಿಸುವ ಪ್ರಯತ್ನ ನಡೆದಿದೆ, ಒಟ್ಟಾರೆ ಪತ್ರಿಕಾ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಹತ್ತಿಕ್ಕಲಾಗಿದೆ ಎಂದು ಪತ್ರಕರ್ತರ ಸ್ಥಿತಿಗತಿಗಳ ಕುರಿತು ತಮ್ಮ ಅನುಭವಗಳನ್ನು ಬಿಡಿಸಿಟ್ಟರು.

ಸಾಮಾಜಿಕ ಮಾಧ್ಯಮದ ಮೇಲೆ ಈಗಲೂ ನಿರ್ಬಂಧವಿದೆ, ದಿನಸಿ ಮಸ್ತುಗಳು ಸೇರಿದಂತೆ ಜನರ ದಿನನಿತ್ಯದ ಅಗತ್ಯ ವಸ್ತುಗಳು ಸಿಗುತ್ತಿಲ್ಲ, ಸಂಚಾರಕ್ಕೆ ಪೆಟ್ರೋಲ್ ಕೊರತೆಯಾಗಿದೆ, ರಾಜ್ಯದ ಆರ್ಥಿಕತೆ ತೀವ್ರವಾಗಿ ಕುಸಿದಿದೆ, ಇದರಿಂದ ಲಕ್ಷಾಂತರ ಉದ್ಯೋಗಿಗಳು ಉದ್ಯೋಗ ಕಳೆದುಕೊಂಡಿದ್ದಾರೆ, ಅಂತರ್ಜಾಲ ಇಲ್ಲದಿರುವುದರಿಂದ ಸ್ಮಾರ್ಟ್ ಫೋನ್ ಗಳ ಮಾರಾಟವೂ ನಿಂತು ಹೋಗಿದೆ, ಕೆಲ ರಸ್ತೆ, ಮೇಲ್ಸೇತುವೆಗಳನ್ನು ಬಂದ್ ಮಾಡಲಾಗಿದೆ, ಆ್ಯಂಬುಲೆನ್ಸ್ ಗಳು ಓಡಾಡುತ್ತಿಲ್ಲ, ಮಕ್ಕಳ ರೋಧನೆ ಅರಣ್ಯ ರೋಧನವಾಗಿದೆ, ರಸ್ತೆಗಿಳಿದರೆ ಮಿಲಿಟರಿ ಸರ್ಪಗಾವಲು ಎದುರಾಗುತ್ತದೆ, ಹೊರಗೆ ಕಾಲಿಟ್ಟರೆ ಬದುಕಿ ಬರುತ್ತೇನೆಂಬ ಯಾವ ಗ್ಯಾರಂಟಿಯೂ ಇಲ್ಲ. ಮಕ್ಕಳನ್ನು ಶಾಲೆಗೆ ಕರೆದುಕೊಂಡು ಹೋಗಲು ಮಿಲಿಟರಿಯವರು ನೂರು ಪ್ರಶ್ನೆಗಳನ್ನು ಕೇಳುತ್ತಾರೆ, ಐಡಿ ಕಾರ್ಡ್ ತೋರಿಸಿ, ಕೇಳಿದ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಲೇಬೇಕು. ಒಟ್ಟಾರೆ ಕಾಶ್ಮೀರಿಗರ ಖಾಸಗಿ ಬದುಕನ್ನು ಕಿತ್ತುಕೊಳ್ಳಲಾಗಿದೆ, ಒಟ್ಟಾರೆ ಸುಂದರ ಕಾಶ್ಮೀರ ಅಕ್ಷರಶಃ ನರಕವಾಗಿ ಮಾರ್ಪಟ್ಟಿದೆ ಎಂದು ಕಾಶ್ಮೀರ ನೈಜ ಸ್ಥಿತಿಯನ್ನು ಎಳೆಎಳೆಯಾಗಿ ತೆರೆದಿಟ್ಟರು.

ಭೂಮಿ ಕಂಪನಿಗಳ ಪಾಲು:

ಇದೀಗ ಕಾಶ್ಮೀರದ ಭೂಮಿ ಕಾರ್ಪೋರೇಟ್ ಧಣಿಗಳಿಗೆ ಪರಭಾರೆಯಾಗುತ್ತಿದೆ, ಸುಂದರ ಪರಿಸರವನ್ನು ನಾಶ ಮಾಡಿ ಹೋಟೇಲ್, ರೆಸಾರ್ಟ್ ಗಳು ಮತ್ತು ಮಹಲುಗಳು ತಲೆ ಎತ್ತುವಂತೆ ಮಾಡಲಾಗುತ್ತಿದೆ, ಇದು ಅಭಿವೃದ್ಧಿಯೇ ಎಂದು ಪ್ರಶ್ನಿಸಿದರು. ಕಾಶ್ಮೀರಿಗರಿಗೆ ನೆಮ್ಮದಿಯಿಂದ ಬದುಕಲು ಅಗತ್ಯವಾದ ಹಣ ಸಾಕು, ಬಹಳ ದುಡ್ಡು ಮಾಡಬೇಕೆಂಬ ಯಾವ ಆಸೆಯೂ ಇಲ್ಲ. ಹೀಗಾಗಿ ಕಾರ್ಪೋರೇಟ್ ಮಾದರಿಯ ಅಭಿವೃದ್ಧಿ ಅಗತ್ಯವಿಲ್ಲ ಎಂದರು.

–ಲಿಂಗರಾಜು ಮಳವಳ್ಳಿ

ಕಾಶ್ಮೀರವನ್ನು ಒಂದು ಬಹಿರಂಗ ಸೆಂಟ್ರಲ್ ಜೈಲು ಎಂದೇ ಘೋಷಿಸಿ ಬಿಡಿ – ತರಿಗಾಮಿ

ಪುಟ 2 ರಿಂದ



ವಿಚಾರಣೆಯನ್ನು ಇನ್ನೂ ಎತ್ತಿಕೊಂಡಿಲ್ಲ. ಆದರೂ ಅದೀಗ ನ್ಯಾಯಾಲಯದಲ್ಲಿರುವುದರಿಂದ ಸರಕಾರ ಅದರಡಿಯಲ್ಲಿ ಬೇರೆ ರಾಜ್ಯಗಳಿಂದ ಬಂದ ವ್ಯಕ್ತಿಗಳಿಗೆ, ಟ್ರಸ್ಟ್‌ಗಳಿಗೆ ಈ ಮೂರೂ ಪ್ರದೇಶಗಳಲ್ಲಿ ಸರಕಾರೀ ಜಮೀನನ್ನು ಕೊಡುವ ನಿರ್ಧಾರವನ್ನು ಮಾಡುವಂತಿಲ್ಲ, ಅದಕ್ಕೆ ಕಾನೂನಿನ ಆಧಾರವಿರುವುದಿಲ್ಲ, ಆದ್ದರಿಂದ ಇಂತಹ ಕ್ರಮಗಳನ್ನು ನಿಲ್ಲಿಸಬೇಕು ಎಂದು ಯೆಚುರಿ ಎಚ್ಚರಿಸಿದರು.

ರಿಯಲ್‌ಎಸ್ಟೇಟ್ ಪ್ರಶ್ನೆಯ ಮಟ್ಟಕ್ಕೆ ಇಳಿಸಲಾಗುತ್ತಿದೆ

ತರಿಗಾಮಿಯವರು ಮಾತಾಡುತ್ತ ಕಾಶ್ಮೀರದಲ್ಲಿ ಏನೆಲ್ಲ ನಡೆಯುತ್ತಿದೆಯೋ ಅವು ಕೇವಲ ಕಾಶ್ಮೀರದ ಸಮಸ್ಯೆಯಲ್ಲ, ಇಡೀ ದೇಶದ ಮುಂದಿರುವ ಪ್ರಶ್ನೆ ಎಂದು ಪರಿಗಣಿಸಿ ಎಂದು ನೆರೆದಿದ್ದ ಪತ್ರಕರ್ತರನ್ನು ಕಳಕಳಿಯಿಂದ ವಿನಂತಿಸಿಕೊಂಡರು. ಕಾಶ್ಮೀರ ಪ್ರಶ್ನೆಯನ್ನು ಒಂದು ರಿಯಲ್ ಎಸ್ಟೇಟ್ ಪ್ರಶ್ನೆಯ ಮಟ್ಟಕ್ಕೆ ಇಳಿಸಲಾಗಿದೆ. ಇದು ಹಾಸ್ಯಾಸ್ಪದ. ಕಾಶ್ಮೀರ ಒಂದು ಮಾನವ ದುರಂತವಾಗಿ ಬಿಡುತ್ತಿದೆ. ಭಾರತದ ಐಕ್ಯತೆಯ ಪರವಾಗಿ ಇದುವರೆಗೂ ಗಟ್ಟಿಯಾಗಿ ನಿಂತಿದ್ದವರನ್ನು ಕಂಬಿಗಳ ಹಿಂದೆ ಹಾಕಲಾಗಿದೆ.

ಮೆಹಬೂಬ ಮುಫ್ತಿಯವರ ಮೇಲೆ ಕಾನೂನೇ ಅಲ್ಲದ ಕಾನೂನು ಆಗಿರುವ ಕರಾಳ 'ಸಾರ್ವಜನಿಕ ಸುರಕ್ಷತೆಯ ಕಾಯ್ದೆ'(ಪಿಎಸ್‌ಎ)ಯ ಅಡಿಯಲ್ಲಿ ಹಾಕಿರುವ ಆಪಾದನೆಗಳು ಅವರ ಜತೆಗೇ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಿದವರಿಗೆ ಮಾತ್ರವಲ್ಲ, ಭಾರತೀಯ ನಾಗರಿಕಳಾಗಿರುವ ಒಬ್ಬ ಮಹಿಳೆಗೆ ಮಾಡಿರುವ ಅವಮಾನ. ಈ ಆಪಾದನಾ ಪಟ್ಟಿಗಳು ಬಿಜೆಪಿಯ ಮನೋಭಾವವನ್ನು, ದಿವಾಳಿಕೋರತನವನ್ನು ಪ್ರದರ್ಶಿಸುತ್ತವೆ ಎಂದು ತರಿಗಾಮಿ ಆಕ್ರೋಶ ವ್ಯಕ್ತಪಡಿಸಿದರು. ಅವರು ಪ್ರಜಾಪ್ರಭುತ್ವ ಮತ್ತು ರಾಷ್ಟ್ರೀಯವಾದ ಪರಸ್ಪರ ವಿರುದ್ಧ ವಿಚಾರಗಳು ಎಂಬಂತೆ ಬಿಂಬಿಸುತ್ತಿದ್ದಾರೆ. ಇದು ನಿಜವಲ್ಲ. ಜಮ್ಮು ಮತ್ತು ಕಾಶ್ಮೀರದ ಜನತೆಗೂ ಒಂದು ಪ್ರಜಾಪ್ರಭುತ್ವ ರಚನೆಯನ್ನು ಹೊಂದುವ ಹಕ್ಕಿದೆ, ಗಣತಂತ್ರ ಸಂವಿಧಾನದ ಅಡಿಯಲ್ಲಿ ಅವರಿಗೆ ಈ ಹಕ್ಕು ಇದೆ ಎಂದು ಅವರು ಒತ್ತಿ ಹೇಳಿದರು. ಅಲ್ಲಿ ವಿಧಾನಸಭೆಗೆ ಚುನಾವಣೆಗಳನ್ನು ನಡೆಸಿ ಜನರಿಗೆ ತಮ್ಮ ಪ್ರತಿನಿಧಿಗಳನ್ನು ನಿರ್ಧರಿಸಲು ಬಿಡುತ್ತಿಲ್ಲ ಏಕೆ. ಬದಲಿಗೆ, ಕಾಶ್ಮೀರದಲ್ಲಿ ಇರುವವರೆಲ್ಲರೂ ಪಾಕಿಸ್ತಾನಿಗಳು ಭಯೋತ್ಪಾದಕರು ಎಂದು ಅದು ತೋರಿಸುತ್ತಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರಜಾಪ್ರಭುತ್ವ ಬಂದರೆ ಭಾರತಕ್ಕೆ ತೊಂದರೆ ಎಂಬಂತೆ ಬಿಂಬಿಸುತ್ತಿದ್ದಾರೆ.

ರಾಜ್ಯದ ಪ್ರವಾಸೋದ್ಯಮಕ್ಕೆ ಆಗಿರುವ ಆಘಾತದ ಬಗ್ಗೆ ಹೇಳುತ್ತ ತರಿಗಾಮಿ, ಈ ವರದಿಯ ಆರಂಭದಲ್ಲಿ ಹೇಳಿದಂತೆ ಕಾಶ್ಮೀರವನ್ನೇ ಒಂದು ಬಹಿರಂಗ ಜೈಲೆಂದು ಅಧಿಸೂಚನೆ ಹೊರಡಿಸಲಿ, ಏಕೆಂದರೆ ಇದೀಗ ಕಾಶ್ಮೀರಿಗಳು ಎದುರಿಸುತ್ತಿರುವ ವಾಸ್ತವತೆ ಎಂದು ಖೇದ ವ್ಯಕ್ತಪಡಿಸಿದರು. ಆಗಸ್ಟ್ 5 ರ ಕರಾಳ ಕ್ರಮ ಕೈಗೊಂಡ ಸರಕಾರ ಇದನ್ನೂ ಮಾಡಬಲ್ಲದು ಎಂದು ಗೇಲಿ ಮಾಡಿದರು. ಕಾಶ್ಮೀರದ ಜನತೆ ಈ ಸರಕಾರದ ಬಗ್ಗೆ ವಿಶ್ವಾಸವನ್ನು ಕಳಕೊಂಡಿದ್ದಾರೆ, ಆದರೆ ಭಾರತದ ಜನತೆಯ ಬಗ್ಗೆ ಅವರಿಗಿನ್ನೂ ಅಪಾರ ನಂಬಿಕೆ ಇದೆ. ದಿಲ್ಲಿಯ ಚುನಾವಣೆಗಳು ದಿಲ್ಲಿಯ ಜನತೆಗಷ್ಟೇ ಅಲ್ಲ, ಕಾಶ್ಮೀರದ ಜನತೆಗೂ ಒಂದು ಆಶಾಕಿರಣ ಎಂದರು.

ಇತ್ತೀಚೆಗೆ ಹಿಂದೆಂದೂ ಕಾಣದ ರೀತಿಯ ಭಾರೀ ಹಿಮಪಾತದಿಂದ ಕಣಿವೆಯಲ್ಲಿ ಸೇಬು ಬೆಳೆಗೆ, ಮತ್ತು ಜಮ್ಮುವಿನಲ್ಲಿ ವಿಪರೀತ ಮಳೆಯಿಂದ ಭತ್ತದ ಬೆಳೆಗೆ ಆದ ಅಪಾರ ಹಾನಿಯ ಬಗ್ಗೆ ಹೇಳುತ್ತ ಇಡೀ ಮಾರುಕಟ್ಟೆ ಕುಸಿದಿದೆ, ಆದರೆ ಈ ರಾಜ್ಯಕ್ಕೆ 36 ಕೇಂದ್ರ ಮಂತ್ರಿಗಳು ಭೇಟಿ ನೀಡಿದರು, ಅವರಲ್ಲಿ 31 ಮಂದಿ ಜಮ್ಮು ಪ್ರದೇಶಕ್ಕೆ ಹೋದರೆ 5 ಮಂದಿ ಕಾಶ್ಮೀರ ಕಣಿವೆಗೆ ಭೇಟಿ ನೀಡಿದರು. ಆದರೆ ಅವರ ಭೇಟಿಗಳ ನಂತರವೂ ಬೆಳೆಗಾರರಿಗೆ ಯಾವುದೇ ಪರಿಹಾರ ಬಂದಿಲ್ಲ. ಸರಕಾರ ಇನ್ನೂ ಲಡಾಖಿನ ಬುಡಕಟ್ಟು ಸ್ಥಾನಮಾನದ ಬಗ್ಗೆ ನಿರ್ಧರಿಸಿಲ್ಲ. ಜಮ್ಮು ಮತ್ತು ಲಡಾಖ್‌ನ ಜನಗಳು ತಾವು ಉದ್ಯೋಗ ಮತ್ತು ಭೂಮಿಗೆ ಸಂಬಂಧಪಟ್ಟಂತೆ ಈ ಹಿಂದೆ ಹೊಂದಿದ್ದ ಹಕ್ಕುಗಳನ್ನು ಮತ್ತೆ ಕೊಡುವಂತೆ ಬೊಬ್ಬೆ ಹೊಡೆದು ಕೇಳುತ್ತಿದ್ದಾರೆ, ಜಮ್ಮುವಿನ ಹಿಂದೂಗಳು, ಲೇಹ್‌ನ ಬೌದ್ಧರು ಮತ್ತು ಕಾರ್ಗಿಲ್‌ನ ಮುಸ್ಲಿಮರು ಎಲ್ಲರೂ ಆತಂಕಿತರಾಗಿದ್ದಾರೆ. ಆಗಸ್ಟ್ 5 ರ ಸರಕಾರದ ಕ್ರಮ ಈಗ ಸುಪ್ರಿಂ ಕೋರ್ಟಿನ ಎದುರು ಇರುವುದರಿಂದ ಸರಕಾರ ಯಾವುದೇ ವಿಪರಿತ ಕ್ರಮಗಳಿಗೆ ಕೈಹಾಕಬಾರದು ಎಂದು ತರಿಗಾಮಿಯವರೂ ಎಚ್ಚರಿಸಿದರು.

ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರಜಾಪ್ರಭುತ್ವವನ್ನು ಮತ್ತೆ ನೆಲೆಗೊಳಿಸಿ, ಸಂಪರ್ಕ ವ್ಯವಸ್ಥೆಯನ್ನು ಮತ್ತೆ ನೆಲೆಗೊಳಿಸಿ ರಾಜ್ಯದ ವಿದ್ಯಾರ್ಥಿ–ಯುವಜನ ಶಿಕ್ಷಣ ಉದ್ಯೋಗಗಳಿಗೆ, ಜನಗಳು ವಿವಿಧ ಸ್ಕೀಮುಗಳಿಗೆ ಅರ್ಜಿ ಹಾಕಿಕೊಳ್ಳಲು ಅವಕಾಶ ಮಾಡಿಕೊಡಿ ಎಂದು ಆಗ್ರಹಿಸುತ್ತಲೇ ತರಿಗಾಮಿಯವರು ಆಗಸ್ಟ್ 5ರಂದು ಕೇಂದ್ರ ಸರಕಾರ ಇಡೀ ಜಮ್ಮು ಮತ್ತು ಕಾಶ್ಮೀರದ ಜನತೆಗೆ ಅವಮಾನ ಮಾಡಿದಾಗ ಚಪ್ಪಾಳೆ ತಟ್ಟಿದವರು ಪಶ್ಚಾತ್ತಾಪ ಪಡಬೇಕಾದ ಸಂದರ್ಭ ಬರುತ್ತದೆ ಎಂದೂ ಹೇಳಿದರು, ಈ ಸರಕಾರವನ್ನು ಉತ್ತರದಾಯಿಯಾಗಿ ಮಾಡಿ, ಭಾರತದ ಜನತೆಯಲ್ಲಿ ಇಷ್ಟೇ ನನ್ನ ವಿನಂತಿ ಎನ್ನುತ್ತ ಮಾತನ್ನು ಮುಗಿಸಿದರು.



ಡೆಮೊಕ್ರಾಟಿಕ್ ಅಭ್ಯರ್ಥಿ ಸ್ಪರ್ಧೆಯಲ್ಲಿ ಬರ್ನಿ ಸ್ಯಾಂಡರ್ಸ್ ಮುಂದೆ

ವಸಂತರಾಜ ಎನ್.ಕೆ.

ಈ ವರ್ಷ ನಡೆಯಲಿರುವ ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷದ ಟ್ರಂಪ್ ವಿರುದ್ಧ ಸ್ಪರ್ಧಿಸುವ ಡೆಮೊಕ್ರಾಟಿಕ್ ಪಕ್ಷದ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಪ್ರಕ್ರಿಯೆ ಆರಂಭವಾಗಿದೆ. ಇದಕ್ಕಾಗಿ ನಡೆಸಲಾಗುವ ರಾಜ್ಯವಾರು ಪ್ರಾಥಮಿಕ ಚುನಾವಣೆಗಳು ಎರಡು ರಾಜ್ಯಗಳಲ್ಲಿವೆ ನಡೆದಿದೆ. ಅಯೋವಾ ರಾಜ್ಯದಲ್ಲಿ ಫೆ.3ರಂದು, ನ್ಯೂ ಹಾಂಪ್‌ಶೈರ್ ರಾಜ್ಯದಲ್ಲಿ ಫೆ.11 ರಂದು ಈ ಚುನಾವಣೆಗಳು ನಡೆದಿದ್ದು, ಈ ಎರಡೂ ರಾಜ್ಯಗಳಲ್ಲಿ ಸೆನೆಟರ್ ಬರ್ನಿ ಸ್ಯಾಂಡರ್ಸ್ ಮೊದಲ ಸ್ಥಾನದಲ್ಲಿ ಹೊಮ್ಮಿದ್ದಾರೆ.

ಬರ್ನಿ ಸ್ಯಾಂಡರ್ಸ್ ತಮ್ಮನ್ನು 'ಡೆಮೊಕ್ರಾಟಿಕ್ ಸೋಶಲಿಸ್ಟ್' ಎಂದು ಕರೆದುಕೊಳ್ಳುತ್ತಾರೆ ಮತ್ತು ಟ್ರಂಪ್ ಅವರ ಕಾರ್ಮಿಕ-ವಿರೋಧಿ ವಲಸೆಗಾರ-ವಿರೋಧಿ ಮಹಿಳಾ-ವಿರೋಧಿ ವರ್ಣಭೇದ-ಪರ 'ಅಮೆರಿಕ ಏನೂ ಮಾಡಬಹುದು, ಅದನ್ನು ಪ್ರಶ್ನಿಸುವಂತಿಲ್ಲ' ಎನ್ನುವ ವಿದೇಶ ನೀತಿ, ನವ-ಉದಾರವಾದಿ ಆರ್ಥಿಕ ನೀತಿಗಳನ್ನು ಬಲವಾಗಿ ಖಂಡಿಸುತ್ತಾರೆ ಮತ್ತು ಬದಲಿ ನೀತಿಗಳನ್ನು ಜನರ ಮುಂದಿಡುತ್ತಿದ್ದಾರೆ. ಈಗಿರುವ ಅಭ್ಯರ್ಥಿಗಳಲ್ಲಿ ಅತ್ಯಂತ ಹೆಚ್ಚು ಎಡಪಂಥೀಯತೆಯತ್ತ ವಾಲಿದವರು ಎಂಬುದು ಗಮನಾರ್ಹ. ಉಚಿತ ಸಾರ್ವತ್ರಿಕ ಆರೋಗ್ಯಸೇವೆ ಮತ್ತು ಕಾಲೇಜು ಶಿಕ್ಷಣ, 1 ಟ್ರಿಲಿಯನ್ ಡಾಲರ್ ಕಾಲೇಜು ಸಾಲಮನ್ನಾ, ಮನೆ ಮತ್ತು ಔಷಧಿಗಳ ಬೆಲೆ ನಿಯಂತ್ರಣ ಮುಂತಾದ 'ಅಸಾಮಾನ್ಯ' ಆಶ್ವಾಸನೆಗಳನ್ನು ತಮ್ಮ ಪ್ರಣಾಳಿಕೆಯಲ್ಲಿ ಘೋಷಿಸಿದ್ದಾರೆ. ಯುದ್ಧಗಳನ್ನು ಕೊನೆಗೊಳಿಸುವ ಭರವಸೆ ನೀಡಿರುವ ಅವರು ಅಂತರ್‌ರಾಷ್ಟ್ರೀಯ ಸಮಸ್ಯೆಗಳನ್ನು ಮಾತುಕತೆಗಳ ಮೂಲಕ ಬಗೆಹರಿಸಲಾಗುವುದು ಎಂದಿದ್ದಾರೆ.

ಸ್ಯಾಂಡರ್ಸ್ ಡೆಮೊಕ್ರಾಟಿಕ್ ಅಭ್ಯರ್ಥಿಯಾದರೆ ಟ್ರಂಪ್ ನ್ನು ಅಧ್ಯಕ್ಷೀಯ ಚುನಾವಣೆಯಲ್ಲಿ ಅತ್ಯಂತ ಹೆಚ್ಚಿನ ಅಂತರದಿಂದ ಸೋಲಿಸುತ್ತಾರೆ ಎಂದು ಸಮೀಕ್ಷೆಗಳು ಹೇಳಿವೆ. ಕಳೆದ (2016ರ) ಅಧ್ಯಕ್ಷೀಯ ಚುನಾವಣೆಯಲ್ಲೂ ಅವರು ಅಭ್ಯರ್ಥಿಯಾದರೆ ಟ್ರಂಪ್ ಸೋಲುವ ಸಾಧ್ಯತೆ ಅತಿ ಹೆಚ್ಚು ಎಂದು ಸಮೀಕ್ಷೆಗಳು ಹೇಳಿದ್ದವು. ನ್ಯೂ ಹಾಂಪ್‌ಶೈರ್ ಪ್ರಾಥಮಿಕ ಚುನಾವಣೆಯಲ್ಲಿ ಸ್ಯಾಂಡರ್ಸ್ ಶೇ.26 ಮತ ಗಳಿಸಿದ್ದಾರೆ. ಈ ಎರಡೂ ರಾಜ್ಯಗಳು ಶೇ. 90 ಬಿಳಿಯರು ವಾಸಿಸುವ ರಾಜ್ಯಗಳು. ಡೆಮೊಕ್ರಾಟಿಕ್ ಪಕ್ಷ ಕರಿಯರು, ಲ್ಯಾಟಿನೊ ಮತ್ತು ವಲಸೆಗಾರರಲ್ಲಿ ಬಹುಮತ ಪಡೆದಿದ್ದು, ರಿಪಬ್ಲಿಕನ್ ಪಕ್ಷ ಬಿಳಿಯರಲ್ಲಿ ಹೆಚ್ಚಿನ ಬಹುಮತ ಪಡೆದಿದೆಯಾದ್ದರಿಂದ ಇದು ಗಮನಾರ್ಹ. ಕರಿಯರು ಮತ್ತು ಲ್ಯಾಟಿನೊಗಳಲ್ಲೂ ಅತ್ಯಂತ ಹೆಚ್ಚಿನ ಮತಪಾಲು ಪಡೆದಿರುವ ಅವರು ಇತರ ರಾಜ್ಯಗಳ ಸಮೀಕ್ಷೆಗಳಲ್ಲೂ ಮುಂದಿದ್ದಾರೆ.

ಈವರೆಗಿನ ಎರಡೂ ರಾಜ್ಯಗಳ ಚುನಾವಣೆಯಲ್ಲಿ 9 ಅಭ್ಯರ್ಥಿಗಳು ಇದ್ದರು. ಅವರಲ್ಲಿ ಐವರು ಮಾತ್ರ ಗಮನಾರ್ಹ ಮತ ಪಡೆದಿದ್ದು ಉಳಿದ 4 ಅಭ್ಯರ್ಥಿಗಳಲ್ಲಿ ಇಬ್ಬರು ಇತರ ರಾಜ್ಯಗಳಲ್ಲಿ ನಡೆಯಲಿರುವ ಮುಂದಿನ ಚುನಾವಣೆಗಳಲ್ಲಿ ಸ್ಪರ್ಧೆ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಉಳಿದವರು ಸ್ಪರ್ಧೆ ಮಾಡಿದರೂ ಅವರು ಲೆಕ್ಕಕ್ಕಿರುವುದಿಲ್ಲ ಎನ್ನಲಾಗಿದೆ. ಮುಂದಿನ ಸ್ಪರ್ಧೆ ಬಹುಶಃ ಮೊದಲ ಐವರಿಗೆ ಸೀಮಿತವಾಗಿರುತ್ತದೆ. ಇನ್ನೊಬ್ಬ ಅಭ್ಯರ್ಥಿ ಮೈಕೆಲ್ ಬ್ಲೂಂಬರ್ಗ್ ಮುಂದಿನ ರಾಜ್ಯಗಳಲ್ಲಿ ಸ್ಪರ್ಧಿಸುವವರಿದ್ದಾರೆ. ನ್ಯೂಯಾರ್ಕ್ ನ ಮಾಜಿ ಮೇಯರ್ ಆಗಿರುವ ಬ್ಲೂಂಬರ್ಗ್ ಈಗಿರುವ ಅಭ್ಯರ್ಥಿಗಳಲ್ಲಿ ಅತ್ಯಂತ ಶ್ರೀಮಂತ ಮತ್ತು ಏಕಮಾತ್ರ ಶತಕೋಟ್ಯಾಧಿಪತಿ (ಬಿಲಿಯನೇರ್). ತನ್ನ ಜಾಹೀರಾತುಗಳಿಗೆ ವಿಪರೀತ ಖರ್ಚು ಮಾಡುತ್ತಿದ್ದು ಗಮನ ಸೆಳೆದಿದ್ದಾರೆ.

ಎರಡನೇ ಸ್ಥಾನದಲ್ಲಿ ಇಂಡಿಯಾನ ರಾಜ್ಯದ ಸೌತ್ ಬೆಂಡ್ ನ ಮಾಜಿ ಮೇಯರ್ ಪೀಟ್ ಬುಟಿಗಿಗ್ ಇದ್ದು ಶೇ. 24 ಮತ ಗಳಿಸಿ ಸ್ಯಾಂಡರ್ಸ್ ಗೆ ಹತ್ತಿರದ ಸ್ಪರ್ಧೆ ಕೊಡುತ್ತಿದ್ದಾರೆ. ಮೂರನೇ ಸ್ಥಾನದಲ್ಲಿರುವ ಮಹಿಳಾ ಅಭ್ಯರ್ಥಿ ಸೆನೆಟರ್ ಅಮಿ ಕ್ಲೊಬುರ್ ಸಹ ಶೇ. 19.7 ಮತ ಗಳಿಸಿ ಹತ್ತಿರದ ಸ್ಪರ್ಧೆಯಲ್ಲಿದ್ದಾರೆ. ಇನ್ನೊಬ್ಬ ಮಹಿಳಾ ಮತ್ತು ಎಡಪಂಥೀಯ ಅಭ್ಯರ್ಥಿ ಎಲಿಜಬೆತ್ ವಾರೆನ್ ಶೇ. 9.3 ಗಳಿಸಿ ದೂರದ ನಾಲ್ಕನೇ ಸ್ಥಾನದಲ್ಲಿದ್ದಾರೆ. ಬಹುಶಃ ಈ ವರೆಗಿನ ಪ್ರಾಥಮಿಕ ಚುನಾವಣೆಗಳ ಅತ್ಯಂತ ಆಶ್ಚರ್ಯಕರ ಫಲಿತಾಂಶ ಎಂದರೆ, ಎರಡು ಬಾರಿ ದೇಶದ ಉಪಾಧ್ಯಕ್ಷರಾಗಿದ್ದ, ಮೊದಲ ಸಮೀಕ್ಷೆಗಳಲ್ಲಿ ಮೊದಲ ಎರಡು ಸ್ಥಾನಗಳಲ್ಲಿದ್ದ ಜೊ ಬಿಡೆನ್, ಕೇವಲ ಶೇ. 8.4 ಮತ ಗಳಿಸಿ 5ನೇ ಸ್ಥಾನಕ್ಕೆ ತಳ್ಳಲ್ಪಟ್ಟಿರುವುದು. ಈ ತಿಂಗಳಲ್ಲಿ ಇನ್ನೆರಡು ರಾಜ್ಯಗಳಾದ ನೆವಡ ಮತ್ತು ದಕ್ಷಿಣ ಕೆರೊಲಿನಾ ನಡೆಯಲಿರುವ ಪ್ರಾಥಮಿಕ ಚುನಾವಣೆಗಳಲ್ಲಿ ತಮಗೆ ಒಳ್ಳೆಯ ಫಲಿತಾಂಶ ಬರುವುದು. ದೇಶದಾದ್ಯಂತ ಕರಿಯರ ನಡುವೆ ತಮಗೆ ಉತ್ತಮ ಬೆಂಬಲವಿದ್ದು ಟ್ರಂಪ್ ಸೋಲಿಸಲು ತಾನೇ ಅತ್ಯುತ್ತಮ ಅಭ್ಯರ್ಥಿ ಎಂದು ಅವರು ಹೇಳಿದ್ದಾರೆ.

ಈ ಎರಡು ವಿಜಯಗಳ ನಂತರ ಸ್ಯಾಂಡರ್ಸ್ ಚುನಾವಣಾ ಅಭಿಯಾನಕ್ಕೆ ಬಲ ಬಂದಿದ್ದು ಅವರು ರ‍್ಯಾಲಿಯೊಂದನ್ನು ಉದ್ದೇಶಿಸಿ ಮಾತನಾಡುತ್ತಾ ಬರಿಯ ಟ್ರಂಪನ್ನು ಸೋಲಿಸುವುದು ಮಾತ್ರವಲ್ಲ ಆರ್ಥಿಕ ವ್ಯವಸ್ಥೆಯನ್ನು ಕಾರ್ಮಿಕರ ಬಡವರ ವಿದ್ಯಾರ್ಥಿಗಳ ಪರವಾಗಿ ಬದಲಾಯಿಸುವುದು ಸಹ, ತನ್ನ ಅಭಿಯಾನದ ಉದ್ದೇಶ ಎಂದರು. ಟ್ರಂಪನ್ನು ಸೋಲಿಸುವ ಅಭಿಯಾನ ಶುರುವಾಗಿದೆ. ಅಮೆರಿಕ ಕಂಡ ಅತ್ಯಂತ ಅಪಾಯಕಾರಿ ಅಧ್ಯಕ್ಷನನ್ನು ಸೋಲಿಸಲು ಎಲ್ಲ ಡೆಮೊಕ್ರಾಟಿಕ ಅಭ್ಯರ್ಥಿಗಳು ಒಂದಾಗಬೇಕು ಎಂದು ಕರೆ ಕೊಟ್ಟರು. ವಾರೆನ್ ಅವರನ್ನು ಬಿಟ್ಟರೆ ಇತರ ಮೂವರು ಅಭ್ಯರ್ಥಿಗಳು ಸಹ ಚುನಾವಣಾ ನಂತರದ ರ‍್ಯಾಲಿಗಳಲ್ಲಿ ಟ್ರಂಪ್ ಸೋಲಿಸಲು ಐಕ್ಯತೆಗೆ ಕರೆ ಕೊಟ್ಟರೂ ಸಹ, ಪರೋಕ್ಷವಾಗಿ ಸ್ಯಾಂಡರ್ಸ್ ಅವರ 'ಎಡಪಂಥೀಯ' ನಿಲುವುಗಳು ನಡುಪಂಥೀಯ ಮತದಾರರನ್ನು ಬೆದರಿಸಲಿವೆ ಎಂದು ಸೂಚಿಸಿದರು. ಎಡಪಂಥೀಯ ಮತಗಳು ಹೇಗಿದ್ದರೂ ಡೆಮೊಕ್ರಾಟಿಕ್ ಪಕ್ಷಕ್ಕೆ ಸಿಗುತ್ತವೆ. ನಡುಪಂಥೀಯ ಮತದಾರರನ್ನು ಓಲೈಸಬೇಕಾಗಿದೆ. ಎಲ್ಲ ಟ್ರಂಪ್-ವಿರೋಧಿ ಮತಗಳನ್ನು ತಾವು ಮಾತ್ರ ಒಗ್ಗೂಡಿಸಲು ಸಾಧ್ಯ ಎಂದೂ ಪ್ರತಿಯೊಬ್ಬರೂ ಪರೋಕ್ಷವಾಗಿ ವಾದಿಸಿದ್ದಾರೆ.

ಇದೇ ವಾದವನ್ನು ಹಿಲೆರಿ ಕ್ಲಿಂಟನ್ ಸಹ ಮಾಡಿದ್ದರು. ಅವರು ಪ್ರಾಥಮಿಕ ಚುನಾವಣೆ ಗೆದ್ದು ಅಭ್ಯರ್ಥಿಯಾದರು. ಆದರೆ ಅಧ್ಯಕ್ಷೀಯ ಚುನಾವಣೆಯಲ್ಲಿ ಸೋತರು. ಈ ಫಾರ್ಮುಲಾ ಕೆಲಸ ಮಾಡಲಿಲ್ಲ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ವ್ಯವಸ್ಥೆಯನ್ನು ಕಾರ್ಮಿಕರ ಬಡವರ ವಿದ್ಯಾರ್ಥಿಗಳ ಪರವಾಗಿ ಬದಲಾಯಿಸುವ ನಿರ್ದಿಷ್ಟ ಕ್ರಮಗಳು ಮತದಾರರನ್ನು ಗೆಲ್ಲುವುದು ಸಾಧ್ಯ. ಬರಿಯ ಟ್ರಂಪ್ ನ್ನು ವೈಯಕ್ತಿಕವಾಗಿ ಟೀಕೆ ಮಾಡಿ ಅವರನ್ನು ಮುಂದೆ ಮಾಡುವ 'ಬಿಲಿಯನೇರ್' ಶ್ರೀಮಂತರ ಅಧಿಪತ್ಯವನ್ನು ಪ್ರಶ್ನಿಸದೆ ಮತದಾರರು ಟ್ರಂಪ್ ಗೆ ವಾಪಸು ಹೋಗುವ ಸಾಧ್ಯತೆಯೇ ಹೆಚ್ಚು ಎಂದು ಸ್ಯಾಂಡರ್ಸ್ ವಾದ. ಯುವಜನರು ಸ್ಯಾಂಡರ್ಸ್ ಪ್ರಣಾಳಿಕೆಯಿಂದ ಉತ್ತೇಜಿತರಾಗಿದ್ದು, ವ್ಯವಸ್ಥೆಯನ್ನು ಜನಪರವಾಗಿ ಬದಲಾಯಿಸಬೇಕು ಎಂಬ ಹಂಬಲ ಎಲ್ಲಾ ಜನವಿಭಾಗಗಳಲ್ಲೂ ಹಿಂದೆಂದಿಗಿಂತಲೂ ಪ್ರಬಲವಾಗಿದೆ ಎಂದು ಹಲವು ಸಮೀಕ್ಷೆಗಳು ಹೇಳಿವೆ.

ಸ್ಯಾಂಡರ್ಸ್ ಪ್ರಾಥಮಿಕ ಚುನಾವಣೆಯಲ್ಲಿ ಹೆಚ್ಚಿನ ರಾಜ್ಯಗಳನ್ನು ಗೆಲ್ಲುತ್ತಾರೆ ಮತ್ತು ಮತಗಳಿಕೆಯಲ್ಲಿ ಮೊದಲ ಸ್ಥಾನದಲ್ಲಿರುತ್ತಾರೆ ಎಂದು ಹೆಚ್ಚಿನ ಸಮೀಕ್ಷೆಗಳು ಹೇಳುತ್ತವೆ. ಆದರೆ ಪ್ರಾಥಮಿಕ ಚುನಾವಣೆಯ ವಿಧಾನ, ಮುಂದೆ ಬರಲಿರುವ ಕೆಲವು ಅಭ್ಯರ್ಥಿಗಳ ಹಣ/ಸ್ಥಾನ ಬಲ, ಅಮೆರಿಕದ ಮಿಲಿಟರಿ-ಕೈಗಾರಿಕಾ ಸಂಕೀರ್ಣ ಮತ್ತು ಅಂತಿಮ ಅಭ್ಯರ್ಥಿಯ ಆಯ್ಕೆಯ ವಿಧಾನದಿಂದಾಗಿ, ಸ್ಯಾಂಡರ್ಸ್ ಅಂತಿಮವಾಗಿ ಡೆಮೊಕ್ರಾಟಿಕ್ ಅಭ್ಯರ್ಥಿಯಾಗಿ ಆಯ್ಕೆಯಾಗುವುದು ಸುಲಭವೇನಲ್ಲ. ಪೀಟ್ ಬುಟಿಗಿಗ್, ಅಮಿ ಕ್ಲೊಬುರ್, ಎಲಿಜಬೆತ್ ವಾರೆನ್ ಇವರು ಸ್ಪರ್ಧೆಯಿಂದ ಹೊರಗೆ ಹೋಗದಿದ್ದರೆ ನಡುಪಂಥೀಯ ಮತಗಳನ್ನು ಸ್ಯಾಂಡರ್ಸ್ ನಿಂದ ಕಸಿದುಕೊಳ್ಳಬಹುದು. ಜೋ ಬಿಡೆನ್ ಅಥವಾ ಮೈಕೆಲ್ ಬ್ಲೂಂಬರ್ಗ್ ತಮ್ಮ ಸ್ವಂತ ಹಣ/ಸ್ಥಾನ ಬಲ ಬಳಸಿ ಮುಂದಿನ ರಾಜ್ಯಗಳಲ್ಲಿ ಆಕ್ರಾಮಕ ಪ್ರಚಾರ ಕೈಗೊಳ್ಳುವುದು ಖಚಿತ. ಮಿಲಿಟರಿ-ಕೈಗಾರಿಕಾ ಸಂಕೀರ್ಣ ಮತ್ತು ಆಳುವ ಶ್ರೀಮಂತ ವರ್ಗ ಜೋ ಬಿಡೆನ್ ಅಥವಾ ಮೈಕೆಲ್ ಬ್ಲೂಂಬರ್ಗ್ ಅವರನ್ನು ತಮ್ಮೆಲ್ಲ ಬಲ ಬಳಸಿ ಪ್ರಬಲವಾಗಿ ಮುಂದೊಡ್ಡುವ ಸಾಧ್ಯತೆಯಿದೆ. 'ವ್ಯವಸ್ಥೆಯನ್ನು ಬದಲಾಯಿಸುವ' ಎಂದು ಹೇಳುವ ಅಭ್ಯರ್ಥಿಯನ್ನು ಸೋಲಿಸಲು ಇವು ಹಲವು ತಂತ್ರಗಳನ್ನು ಮಾಡಬಹುದು.

ಇದಲ್ಲದೆ ಪ್ರಾಥಮಿಕ ಚುನಾವಣೆಯ ವಿಧಾನ ಮತ್ತು ಅಂತಿಮ ಅಭ್ಯರ್ಥಿಯ ಆಯ್ಕೆಯ ವಿಧಾನದಿಂದಾಗಿ ಅತ್ಯಂತ ಹೆಚ್ಚು ಮತ ಗಳಿಸಿದರೂ ಸ್ಯಾಂಡರ್ಸ್ ಅಭ್ಯರ್ಥಿ ಸ್ಥಾನ ಗೆಲ್ಲಬೇಕಾಗಿಲ್ಲ. ಈ ತಿಂಗಳಲ್ಲಿ ಆರಂಭವಾಗಿ ಜೂನ್ ವರೆಗೆ ರಾಜ್ಯದ ಪ್ರಾಥಮಿಕ ಚುನಾವಣೆಗಳು ನಡೆಯುತ್ತವೆ. ಈ ಪ್ರಾಥಮಿಕ ಚುನಾವಣೆಗಳಲ್ಲಿ ಜುಲೈ ನಲ್ಲಿ ನಡೆಯಲಿರುವ ಡೆಮೊಕ್ರಾಟಿಕ್ ನ್ಯಾಶನಲ್ ಕನ್ವೆನ್ಷನ್ (ಡಿ.ಎನ್.ಸಿ) ಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತಾರೆ. ಪ್ರತಿ ರಾಜ್ಯಕ್ಕೆ ಕೊಡಲಾಗಿರುವ ಪ್ರತಿನಿಧಿಗಳ ಸಂಖ್ಯೆ ಆಯಾ ರಾಜ್ಯದ ಜನಸಂಖ್ಯೆ, ಮತದಾರರ ಸಂಖ್ಯೆ ಮತ್ತಿತರ ಇಂತಹ ಒಂದರ ಮೇಲೆ ಆಧರಿಸಿಲ್ಲ. ರಾಜ್ಯದ ಗಾತ್ರ ಅಲ್ಲದೆ, ಆ ರಾಜ್ಯ ಎಷ್ಟು ಡೆಮೊಕ್ರಾಟಿಕ್-ಪರ ಆಗಿದೆ, ಆ ರಾಜ್ಯಗಳು ನೆರೆಯ ರಾಜ್ಯಗಳ ಜತೆ ಮತದಾನ ಇಟ್ಟುಕೊಂಡಿವೆಯೇ ಎಂಬ ಹಲವು ಅಂಶಗಳ ಮೇಲೆ ಅವಲಂಬಿಸಿವೆ. ಮತಗಳಿಕೆಯ ಪ್ರಮಾಣದಲ್ಲೇ ಪ್ರತಿನಿಧಿಗಳ ಸಂಖ್ಯೆ ಇರಬೇಕಾಗಿಲ್ಲ. ಪ್ರತಿ ರಾಜ್ಯದಲ್ಲಿ ತೆರೆದ ಪ್ರಾಥಮಿಕ, ಮುಚ್ಚಿದ ಪ್ರಾಥಮಿಕ, ಮುಚ್ಚಿದ ಕಾಕಸ್, ತೆರೆದ ಕಾಕಸ್ ಇತ್ಯಾದಿ ಹಲವು ವಿಧಾನಗಳಿವೆ. ಇಂತಹ ಎಲ್ಲಾ ರಾಜ್ಯಗಳ ಆಯ್ಕೆಯಾದ 3979 ಪ್ರತಿನಿಧಿಗಳಲ್ಲಿ ಜುಲೈ ನಲ್ಲಿ ನಡೆಯುವ ಡಿ.ಎನ್.ಸಿ ಸಮಾವೇಶದಲ್ಲಿ ಕನಿಷ್ಠ 1991 ಪ್ರತಿನಿಧಿಗಳ ಬೆಂಬಲ ಪಡೆದವರೇ ಅಭ್ಯರ್ಥಿ.

ಸ್ಯಾಂಡರ್ಸ್ ಅಭ್ಯರ್ಥಿಯಾಗದಂತೆ ಹಲವು ಪ್ರಯತ್ನಗಳು ನಡೆಯಲಿವೆ. ಆದರೆ 'ವ್ಯವಸ್ಥೆಯನ್ನು ಬದಲಾಯಿಸುವ' ಪ್ರಯತ್ನಕ್ಕೆ ಬೆಂಬಲ ಅಷ್ಟೇ ಪ್ರಬಲವಾಗಿ ಬೆಳೆಯುತ್ತಿವೆ. ಮಾರ್ಚ್ 3 ರಂದು ಒಟ್ಟಿಗೆ ನಡೆಯಲಿರುವ 15 ರಾಜ್ಯಗಳ ಪ್ರಾಥಮಿಕ ಚುನಾವಣೆಗಳು ನಿರ್ಣಾಯಕವಾಗಿದ್ದು ಗಾಳಿ ಎತ್ತ ಬೀಸುತ್ತಿದೆ ಎಂಬ ಸುಳಿವು ಕೊಡಲಿದೆ.

ಅಯೋವಾ ಮತ್ತು ನ್ಯೂ ಹಾಂಪ್‌ಶೈರ್ ರಾಜ್ಯಗಳಲ್ಲಿ ಡೆಮೊಕ್ರಾಟಿಕ್ ಪಕ್ಷದ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಪ್ರಾಥಮಿಕ ಚುನಾವಣೆಗಳಲ್ಲಿ ಸೆನೆಟರ್ ಬರ್ನಿ ಸ್ಯಾಂಡರ್ಸ್ ಮೊದಲ ಸ್ಥಾನದಲ್ಲಿ ಹೊಮ್ಮಿದ್ದಾರೆ. ಟ್ರಂಪ್ ಅವರ ಕಾರ್ಮಿಕ-ವಿರೋಧಿ ವಲಸೆಗಾರ-ವಿರೋಧಿ ಮಹಿಳಾ-ವಿರೋಧಿ ವರ್ಣಭೇದ-ಪರ 'ಅಮೆರಿಕ ಏನೂ ಮಾಡಬಹುದು, ಅದನ್ನು ಪ್ರಶ್ನಿಸುವಂತಿಲ್ಲ' ಎನ್ನುವ ವಿದೇಶ ನೀತಿ, ನವ-ಉದಾರವಾದಿ ಆರ್ಥಿಕ ನೀತಿಗಳನ್ನು ಬಲವಾಗಿ ಖಂಡಿಸುತ್ತಾರೆ ಮತ್ತು ಬದಲಿ ನೀತಿಗಳನ್ನು ಜನರ ಮುಂದಿಡುತ್ತಿದ್ದಾರೆ. ಈಗಿರುವ ಅಭ್ಯರ್ಥಿಗಳಲ್ಲಿ ಅತ್ಯಂತ ಹೆಚ್ಚು ಎಡಪಂಥೀಯತೆಯತ್ತ ವಾಲಿದವರು ಎಂಬುದು ಗಮನಾರ್ಹ. ಸ್ಯಾಂಡರ್ಸ್ ಪ್ರಾಥಮಿಕ ಚುನಾವಣೆಯಲ್ಲಿ ಹೆಚ್ಚಿನ ರಾಜ್ಯಗಳನ್ನು ಗೆಲ್ಲುತ್ತಾರೆ ಮತ್ತು ಮತಗಳಿಕೆಯಲ್ಲಿ ಮೊದಲ ಸ್ಥಾನದಲ್ಲಿರುತ್ತಾರೆ ಎಂದು ಹೆಚ್ಚಿನ ಸಮೀಕ್ಷೆಗಳು ಹೇಳುತ್ತವೆ. ಆದರೆ ಪ್ರಾಥಮಿಕ ಚುನಾವಣೆಯ ವಿಧಾನ, ಮುಂದೆ ಬರಲಿರುವ ಕೆಲವು ಅಭ್ಯರ್ಥಿಗಳ ಹಣ/ಸ್ಥಾನ ಬಲ, ಅಮೆರಿಕದ ಮಿಲಿಟರಿ-ಕೈಗಾರಿಕಾ ಸಂಕೀರ್ಣದ ಪ್ರಭಾವ ಮತ್ತು ಅಂತಿಮ ಅಭ್ಯರ್ಥಿಯ ಆಯ್ಕೆಯ ವಿಧಾನದಿಂದಾಗಿ, ಸ್ಯಾಂಡರ್ಸ್ ಅಂತಿಮವಾಗಿ ಡೆಮೊಕ್ರಾಟಿಕ್ ಅಭ್ಯರ್ಥಿಯಾಗಿ ಆಯ್ಕೆಯಾಗುವುದು ಸುಲಭವೇನಲ್ಲ. ಸ್ಯಾಂಡರ್ಸ್ ಅಭ್ಯರ್ಥಿಯಾಗದಂತೆ ಹಲವು ಪ್ರಯತ್ನಗಳು ನಡೆಯಲಿವೆ. ಆದರೆ 'ವ್ಯವಸ್ಥೆಯನ್ನು ಬದಲಾಯಿಸುವ' ಪ್ರಯತ್ನಕ್ಕೆ ಬೆಂಬಲ ಅಷ್ಟೇ ಪ್ರಬಲವಾಗಿ ಬೆಳೆಯುತ್ತಿವೆ.

JANASHAKTHI KANNADA VARA PATRIKE February 17-23, 2020 Price: Rs. 10/- Date of Publication: 14 February 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಬಳ್ಳಾರಿಯಲ್ಲಿ ಹಾಸ್ಟೆಲ್ ಹೊರಗುತ್ತಿಗೆ ನೌಕರರ ಬಂಧನ





ತಮಗೆ ಬಾಕಿ ಇರುವ 8–10 ತಿಂಗಳುಗಳ ವೇತನವನ್ನು ಪಾವತಿ ಮಾಡಬೇಕು, ಕೆಲಸದಿಂದ ತೆರವುಗೊಳಿಸಿರುವ ಸುಮಾರು 2000 ಮಂದಿ ಹೊರಗುತ್ತಿಗೆ ಸಿಬ್ಬಂದಿಗಳನ್ನು ಸೇವೆಯಲ್ಲಿ ಮುಂದುವರೆಸಿ ನಿವೃತ್ತಿವರೆಗೆ ಸೇವಾ ಭದ್ರತೆ ನೀಡಬೇಕು, ಹಿಂದುಳಿದ ವರ್ಗಗಳ ಇಲಾಖೆ ನಡೆಸುತ್ತಿರುವ ಹಾಸ್ಟೆಲ್‌ಗಳಿಗೆ ಕಾವಲುಗಾರರನ್ನು ನೇಮಿಸಲು ತೀರ್ಮಾನಿಸಿ ಆ ಹುದ್ದೆಗಳಿಗೆ ಈಗ ಸೇವೆಯಿಂದ ತೆರವುಗೊಳಿಸಿದವರನ್ನು ನೇಮಿಸಬೇಕು, ಹಾಸ್ಟೆಲ್‌ಗಳಲ್ಲಿನ ವಿದ್ಯಾರ್ಥಿ–ವಿದ್ಯಾರ್ಥಿನಿಯರ ಸೇರ್ಪಡೆ ಸಂಖ್ಯೆಯನ್ನು ಹೆಚ್ಚಿಸಿ ಅದಕ್ಕನುಗುಣವಾಗಿ 'ಡಿ' ವರ್ಗದ ಹುದ್ದೆಗಳನ್ನು ಹೆಚ್ಚಿಸಬೇಕು ಹಾಗೂ ಹೊಸದಾಗಿ ಆರಂಭಿಸಲಾಗುತ್ತಿರುವ ಹಾಸ್ಟೆಲ್‌ಗಳಿಗೆ ಸೇವೆಯಿಂದ ಹೊರಹಾಕಲಾದ ಸಿಬ್ಬಂದಿಗಳನ್ನೇ ನೇಮಿಸಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ರಾಜ್ಯದ ವಿವಿಧ ಜಿಲ್ಲೆಗಳ ಹಾಸ್ಟೆಲ್ ಹೊರಗುತ್ತಿಗೆ ಸಿಬ್ಬಂದಿಗಳು ಬಳ್ಳಾರಿಯಲ್ಲಿ ಹಿಂದುಳಿದ ವರ್ಗಗಳ ಇಲಾಖೆಯ ಸಚಿವರಾದ ಶ್ರೀ ಬಿ. ಶ್ರೀರಾಮುಲು ರವರ ನಿವಾಸದೆದುರು ಫೆಬ್ರುವರಿ 11 ರಂದು ಧರಣಿ ನಡೆಸುತ್ತಿದ್ದಾಗ ಪೊಲೀಸರು ಅಧಿಕಾರಿ ಹಾಲೇಶ್‌ರವರ ನೇತೃತ್ವದಲ್ಲಿ ಧರಣಿ ನಿರತ ಹಾಸ್ಟೆಲ್ ಸಿಬ್ಬಂದಿಗಳನ್ನು ವಶಕ್ಕೆ ಪಡೆದು ಬಲವಂತವಾಗಿ ಬಸ್ಸುಗಳಲ್ಲಿ ತುಂಬಿ ನಗರದ ಹೊರವಲಯದಲ್ಲಿರುವ ವಾಲ್ಮೀಕಿ ಭವನದಲ್ಲಿ ತಂದು ಹಾಕಿದರು. ಸಚಿವ ಶ್ರೀ ರಾಮುಲು ಊರಲ್ಲಿ ಇರಲಿಲ್ಲ. ಅವರು ಬರುವ ವರೆಗೂ ಧರಣಿ ಮುಷ್ಕರವನ್ನು ಮುಂದುವರೆಸಲು ಹೋರಾಟ ನಿರತರು ಮನವಿ ಮಾಡಿದರೂ ಪೊಲೀಸರು ಅನುಮತಿ ನೀಡಲಿಲ್ಲ. ಧರಣಿ ಸ್ಥಳದಲ್ಲಿ ಮಾಡಿದ ಅಡುಗೆಯನ್ನು ಊಟ ಮಾಡಲು ಸಹ ಅವಕಾಶ ಕೊಡಲಿಲ್ಲ. ಬೆಳಿಗ್ಗೆಯಿಂದ ಊಟ ಮಾಡದ ಹಲವರು ಸುಸ್ತಾಗಿ ಆಂಬ್ಯುಲೆನ್ಸ್ ಮೂಲಕ ಆಸ್ಪತ್ರೆಗೆ ಕೊಂಡ್ಯೊದರು. ಧರಣಿ ನಿರತರಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದರೂ ಪೊಲೀಸರು ಮಾನವೀಯತೆಯಿಂದ ವರ್ತಿಸಲಿಲ್ಲ. ಕುಡಿಯುವ ನೀರನ್ನು ಸಹ ಬಂದ್ ಮಾಡಿ ಧರಣಿಯನ್ನು ಕೈಬಿಡುವಂತೆ ಒತ್ತಡ ಹೇರಿದರು. ಅನಿವಾರ್ಯವಾಗಿ ಎರಡನೇ ದಿನ ಸಂಜೆಗೆ ಹೋರಾಟವನ್ನು ಹಿಂತೆಗೆದುಕೊಳ್ಳಲಾಯಿತು.

ಸಂಘದ ಅಧ್ಯಕ್ಷರಾದ ನಿತ್ಯಾನಂದಸ್ವಾಮಿಯವರ ನೇತೃತ್ವದಲ್ಲಿ ನಡೆದ ಈ ಹೋರಾಟದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಭೀಮಶೆಟ್ಟಿ ಯಂಪಳ್ಳಿ, ಉಪಾಧ್ಯಕ್ಷರಾದ ಜಂಬಯ್ಯ ನಾಯಕ್ (ಬಳ್ಳಾರಿ), ಬಿ. ಆಂಜನೇಯ ರೆಡ್ಡಿ (ಚಿಕ್ಕಬಳ್ಳಾಪುರ), ಸಹ ಕಾರ್ಯದರ್ಶಿ ಕೆ. ಹನುಮೇಗೌಡ, ಹುಲುಗಪ್ಪ ಚಲವಾದಿ (ವಿಜಯಪುರ), ಇಸಾಮೋದಿನ್ (ಬೀದರ್), ಶಿವಮೂರ್ತಿ (ಚಿಕ್ಕಮಗಳೂರು), ಅಡಿವೆಪ್ಪ ಕೊಣ್ಣೂರು (ಬಾಗಲಕೋಟೆ), ವಿಶ್ವನಾಥ ಜೆ. (ಚಾಮರಾಜನಗರ), ದೇವೆಂದ್ರ ಪತ್ತಾರ್ (ಕೊಡಗು), ಶಾಂತಾ ಗಡ್ಡಿಯವರ್ (ಹಾವೇರಿ), ನಂಜುಂಡಸ್ವಾಮಿ (ಮಂಡ್ಯ) ಕುಮಾರ್ ಎಂ. (ಶಿವಮೊಗ್ಗ), ಗುರುಮೂರ್ತಿ (ದಾವಣಗೆರೆ), ಹನುಮಂತ ಚನ್ನಪ್ಪ (ಕೊಪ್ಪಳ), ಮಲ್ಲಿಕಾರ್ಜುನ ಬಿರಾದಾರ್ (ಕಲ್ಬುರ್ಗಿ), ಯಲ್ಲಪ್ಪ ಇ.ಆರ್. (ಬಳ್ಳಾರಿ) ಮೊದಲಾದವರು ಭಾಗವಹಿಸಿದ್ದರು. ಇದೇ ಬೇಡಿಕೆಗಳಿಗಾಗಿ ಜಿಲ್ಲಾ ಮಟ್ಟದಲ್ಲಿ ಹೋರಾಟ ಮುಂದುವರೆಸಲು ನಿರ್ಧರಿಸಲಾಯಿತು.



–ಕೆ. ಹನುಮೇಗೌಡ





ವಿಷಯ: ಹಾಸ್ಟೆಲ್ ಹೊರಗುತ್ತಿಗೆ ನೌಕರರ ಬಂಧನ ಖಂಡನೀಯ

ಕಳೆದ ಹಲವಾರು ವರ್ಷಗಳಿಂದ ಹಾಸ್ಟೆಲ್‌ಗಳಲ್ಲಿ ಅತ್ಯಂತ ಕಡಿಮೆ ಸಂಬಳ ಪಡೆದು ಕೆಲಸ ಮಾಡುತ್ತಿದ್ದ ನೌಕರರನ್ನು ರಾಜ್ಯ ಸರಕಾರ ಇದ್ದಕಿದ್ದಂತೆ, ಯಾವ ಸೌಲಭ್ಯವನ್ನೂ ಕೊಡದೇ ವಜಾಗೊಳಿಸಿ, ಬೀದಿಪಾಲು ಮಾಡಿರುವುದು ಅನ್ಯಾಯದ ಪರಮಾವಧಿಯಾಗಿದೆ. ಕಳೆದ ಎಂಟು ತಿಂಗಳ ಬಾಕಿ ವೇತನ ಬಿಡುಗಡೆಗಾಗಿ ಹಾಗೂ ಮರಳಿ ಕೆಲಸಕ್ಕೆ ಆದೇಶಿಸಲು ಆಗ್ರಹಿಸಿ ಇಂದು ಬಳ್ಳಾರಿಯಲ್ಲಿ ಸಚಿವ ಶ್ರೀರಾಮುಲು ಮನೆಯ ಮುಂದೆ ಶಾಂತಿಯುತವಾಗಿ ಹೋರಾಟ ಮಾಡುತ್ತಿದ್ದ ಹಾಸ್ಟೆಲ್ ಹೊರಗುತ್ತಿಗೆ ನೌಕರರನ್ನು ಪೋಲಿಸರ ಮೂಲಕ ಬಂಧಿಸರುವುದು ಖಂಡನೀಯ.

ದುಡಿದ ಸಂಬಳ ಕೊಡದ ರಾಜ್ಯ ಸರಕಾರಕ್ಕೆ ಸಂಬಳ ಕೇಳಿದ್ರೆ ಬಡ ಹೊರಗುತ್ತಿಗೆ ನೌಕರರಿಗೆ ವೇತನ ಪಾವತಿ ಮಾಡುವ ಬದಲು ಬಂಧನ ಮಾಡಿರುವುದು ದ್ರೋಹವಾಗಿದೆ. ಕೂಡಲೇ ಬಂಧಿತ ನೌಕರರನ್ನು ಬೇಷರತ್ ಆಗಿಬಿಡುಗಡೆ ಮಾಡಬೇಕು. ಅವರ ನ್ಯಾಯಯುತ ಬೇಡಿಕೆಗಳನ್ನು ತಕ್ಷಣ ಈಡೇರಿಸಲು ರಾಜ್ಯ ಸರಕಾರ ಮುಂದಾಗಬೇಕೆಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ. ಕರ್ನಾಟಕ ರಾಜ್ಯ ಸಮಿತಿಯು ಸರಕಾರವನ್ನು ಒತ್ತಾಯಿಸುತ್ತದೆ. ಎಂದು ಸಂಘಟನೆಯ ಅಧ್ಯಕ್ಷರಾದ ದೇವಿ ಮತ್ತು ಪ್ರಧಾನ ಕಾರ್ಯದರ್ಶಿ ಗೌರಮ್ಮ ಜಂಟಿ ಹೇಳಿಕೆ ಮೂಲಕ ಒತ್ತಾಯಿಸಿದ್ದಾರೆ.

ಹಾಸ್ಟೆಲ್ ಹೊರಗುತ್ತಿಗೆ ನೌಕರರ ಬಂಧನ ಖಂಡನೀಯ: ಡಿವೈಎಫ್ಐ

ಕಳೆದ ಹಲವಾರು ವರ್ಷಗಳಿಂದ ಹಾಸ್ಟೆಲ್ ಗಳಲ್ಲಿ ಅತ್ಯಂತ ಕಡಿಮೆ ಸಂಬಳ ಪಡೆದು ಕೆಲಸ ಮಾಡುತ್ತಿದ್ದ ನೌಕರರನ್ನು ರಾಜ್ಯ ಸರಕಾರ ಇದ್ದಕಿದ್ದಂತೆ, ಯಾವ ಸೌಲಭ್ಯವನ್ನೂ ಕೊಡದೇ ವಜಾಗೊಳಿಸಿ, ಬೀದಿಪಾಲು ಮಾಡಿರುವುದು ಅನ್ಯಾಯದ ಪರಮಾವಧಿಯಾಗಿದೆ.

ಕಳೆದ ಎಂಟು ತಿಂಗಳ ಬಾಕಿ ವೇತನ ಬಿಡುಗಡೆಗಾಗಿ ಹಾಗೂ ಮರಳಿ ಕೆಲಸಕ್ಕೆ ಆದೇಶಿಸಲು ಆಗ್ರಹಿಸಿ ಇಂದು ಬಳ್ಳಾರಿಯಲ್ಲಿ ಸಚಿವ ಶ್ರೀರಾಮುಲು ಮನೆಯ ಮುಂದೆ ಶಾಂತಿಯುತವಾಗಿ ಹೋರಾಟ ಮಾಡುತ್ತಿದ್ದ ಹಾಸ್ಟೆಲ್ ಹೊರಗುತ್ತಿಗೆ ನೌಕರರನ್ನು ಪೋಲಿಸರ ಮೂಲಕ ಬಂಧಿಸರುವುದು ಖಂಡನೀಯ.

ದುಡಿದ ಸಂಬಳ ಕೊಡದ ರಾಜ್ಯ ಸರಕಾರಕ್ಕೆ ಸಂಬಳ ಕೇಳಿದ್ರೆ ಬಡ ಹೊರಗುತ್ತಿಗೆ ನೌಕರರಿಗೆ ವೇತನ ಪಾವತಿ ಮಾಡುವ ಬದಲು ಬಂಧನ ಮಾಡಿರುವುದು ದ್ರೋಹವಾಗಿದೆ. ಕೂಡಲೇ ಬಂಧಿತ ನೌಕರರನ್ನು ಬೇಷರತ್ ಆಗಿ ಬಿಡುಗಡೆ ಮಾಡಬೇಕು. ಅವರ ನ್ಯಾಯಯುತ ಬೇಡಿಕೆಗಳನ್ನು ತಕ್ಷಣ ಈಡೇರಿಸಲು ರಾಜ್ಯ ಸರಕಾರ ಮುಂದಾಗಬೇಕೆಂದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಡಿವೈಎಫ್ಐ ಕರ್ನಾಟಕ ರಾಜ್ಯ ಸಮಿತಿಯು ಸರಕಾರವನ್ನು ಒತ್ತಾಯಿಸುತ್ತದೆ.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**